ಭಾರತೀಯ ಸಂಸ್ಕೃತಿ ಸರ್ವಸ್ವ ಕೋಶ-ಯೋಜನೆ

ಕಲ್ಪತರು ಸಂಶೋಧನಾ ಪ್ರತಿಷ್ಠಾನದ ಪ್ರಕಟಣೆ

ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರು : ದೈವಜ್ಞ ಕೆ.ಎನ್. ಸೋಮಯಾಜಿ

॥ नमस्ते जगदेकमातः ॥

ಧ್ಯಾನಚಿತ್ರಾವಳಿ

ವಿನಯ ಹೆಗಡೆ

ಕಲ್ಪತರು ಸಂಶೋಧನಾ ಪ್ರತಿಷ್ಠಾನ
(ಶ್ರೀ ಶೃಂಗೇರಿ ಶಾರದಾ ಪೀಠದ ಅಂಗಸಂಸ್ಥೆ)
ನಂ.1, ಶಂಕರಮಠ, ಶಂಕರಪುರಂ, ಬೆಂಗಳೂರು - 560 004.
ದೂರವಾಣಿ : 26507464 ಫ್ಯಾಕ್ಸ್ : 26514078
e-mail : kalpatharu@vsnl.com

ಧ್ಯಾನಚಿತ್ರಾವಳಿ

ಭಾರತೀಯ ಸಂಸ್ಕೃತಿ ಸರ್ವಸ್ವ ಕೋಶ-ಯೋಜನೆ

॥ नमस्ते जगदेकमातः ॥

ಕಲ್ಪತರು ಸಂಶೋಧನಾ ಪ್ರತಿಷ್ಠಾನದ ಪ್ರಕಟಣೆ

ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರು : ದೈವಜ್ಞ ಕೆ.ಎನ್. ಸೋಮಯಾಜಿ

ಧ್ಯಾನಚಿತ್ರಾವಳಿ

ವಿನಯ ಹೆಗಡೆ

ಕಲ್ಪತರು ಸಂಶೋಧನಾ ಪ್ರತಿಷ್ಠಾನ

(ಶ್ರೀ ಶೃಂಗೇರಿ ಶಾರದಾ ಪೀಠದ ಅಂಗಸಂಸ್ಥೆ)

ನಂ.1, ಶಂಕರಮಠ, ಶಂಕರಪುರಂ, ಬೆಂಗಳೂರು - 560 004.

ದೂರವಾಣಿ : 26507464 ಫ್ಯಾಕ್ಸ್ : 26514078

e-mail : kalpatharu@vsnl.com

DHYANACHITRAVALI written by Vinay Hegde, and Published by Daivajna K.N. Somayaji, Chief Editor & Director, Kalpatharu Research Academy, No.1, Shankarmutt, Shankarapuram, Bangalore – 560 004, Phone : 26507464, Fax : 26514078, e-mail : kalpatharu@vsnl.com

Published with the generous Financial Assistance from the Ministry of Human Resources Development, Department of Education, Govt. of India, New Delhi, and Dept. of Education, Govt. of Karnataka, Bangalore.

© **First Edition :** 2006 Kalpatharu Research Academy

Price: Rupees Two Hundred Only (Subsidized).

The Publications of Kalpatharu Research Academy are meant to reach all sections of the society, and hence are sold at highly subsidized prices. An appeal is hereby made to Booksellers to adhere to the price indicated in each volume by the Publishers and not to enhance them on any account.

Printed by : **P.S. Venkatesh Babu**
Omkar Offset Printers, N.T. Pet, Bangalore - 560 002.
Telefax : 26708186, 26709026 e-mail: omkaroffset@gmail.com

ಪ್ರಕಾಶಕರ ಮುನ್ನುಡಿ

ಕಲ್ಪತರು ಸಂಶೋಧನಾ ಪ್ರತಿಷ್ಠಾನವು ಈವರೆಗೆ ಹಲವಾರು ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿ, ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟಂತೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಕನ್ನಡದಲ್ಲಿಯೂ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಕೆಲವು ಗ್ರಂಥಗಳನ್ನು ಪ್ರಕಟಿಸಲಾಗಿದೆ. ಇದರಂತೆ ಈ ಪ್ರಕಾಶನವನ್ನು ಭಾರತೀಯ ಸಂಸ್ಕೃತಿ ಸರ್ವಸ್ವ ಕೋಶ ಮಾಲಿಕೆಯಲ್ಲಿ ಹೊರತರಲಾಗಿದೆ.

ಹಿಂದೂ ಸಂಪ್ರದಾಯದಲ್ಲಿ ದೇವತೆಗಳು ಹಲವು. ಈ ದೇವತೆಗಳ ಬಾಹ್ಯ ಆಕಾರವನ್ನು ವಿವರಗಳನ್ನು ತಿಳಿಯಪಡಿಸುತ್ತಿರುವುದೇ ಧ್ಯಾನಶ್ಲೋಕಗಳು. ಪ್ರಸ್ತುತ ಈ ಗ್ರಂಥವು ಹಲವಾರು ದೇವತೆಗಳ ವಿವರಗಳನ್ನು ತಿಳಿಯಪಡಿಸುವ ಧ್ಯಾನಶ್ಲೋಕಗಳ ಸಂಗ್ರಹವಾಗಿದೆ. ಇಲ್ಲಿ ಪಂಚಾಯತನ ದೇವತೆಗಳು (ಗಣೇಶ, ದೇವಿ, ವಿಷ್ಣು, ಶಿವ, ಸೂರ್ಯ) ಹಾಗೂ ಅವನ್ನನುಸರಿಸುವ ಪರಿವಾರ ದೇವತೆಗಳು ಈ ಕ್ರಮದಲ್ಲಿ ಧ್ಯಾನಶ್ಲೋಕ ಹಾಗೂ ಅರ್ಥವನ್ನು ವಿವರಿಸಲಾಗಿದೆ. ಧ್ಯಾನಶ್ಲೋಕಗಳಿಗನುಸಾರವಾಗಿಯೇ ರಚನೆಗೊಂಡ ಚಿತ್ರಗಳು, ಭಾರತೀಯ ಶಿಲ್ಪ ಚಿತ್ರ - ದೇವತೆಗಳ ಸಂಬಂಧ ಇವುಗಳ ಕುರಿತು ತಿಳಿಸುವುದು ಈ ಗ್ರಂಥದ ವಿಶೇಷವಾಗಿದೆ.

ಈ ಗ್ರಂಥವನ್ನು ಸಂಶೋಧಿಸಿ ಪ್ರಕಟಿಸಲು ನಮಗೆ ಪ್ರೇರೇಪಿಸಿ, ಅನುಗ್ರಹಿಸಿ, ಆಶೀರ್ವದಿಸಿದ ಜಗದ್ಗುರುಗಳು, ಶೃಂಗೇರಿ ಶ್ರೀ ಶಾರದಾ ಪೀಠಾಧಿಪತಿಗಳು, ನಮ್ಮ ಸಂಸ್ಥೆಯ ಮಹಾಪೋಷಕರು, ಆಶ್ರಯದಾತರು ಆದ ಪರಮಪೂಜ್ಯ ಶ್ರೀಶ್ರೀಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪಾದಕಮಲಗಳಿಗೆ ನಮ್ಮ ಹೃತ್ಪೂರ್ವಕ ನಮಸ್ಕಾರಗಳು. ನಮ್ಮ ಸಂಸ್ಥೆಯ ಸಕಲಕಾರ್ಯಗಳಿಗೆ ಸದಾ ಸಹಕಾರ ಕೊಡುತ್ತಿರುವ ನಮ್ಮ ಸಂಸ್ಥೆಯ ಅಧ್ಯಕ್ಷರು ಹಾಗೂ ಶ್ರೀ ಮಠದ ಆಡಳಿತಾಧಿಕಾರಿಗಳಾದ ಶ್ರೀ ವಿ.ಆರ್. ಗೌರಿಶಂಕರ್‌ರವರಿಗೆ ನಮ್ಮ ಅಭಿಮಾನಪೂರ್ವಕ ಧನ್ಯವಾದಗಳು. ಮತ್ತು ಈ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿದ್ದಾಗಿ ಶ್ರೀ ವಿನಯ ಹೆಗಡೆಯವರಿಗೆ ನಾವು ಅಭಾರಿಗಳಾಗಿದ್ದೇವೆ. ಈ ಪ್ರಕಟಣೆಗೆ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗದ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಗೆ ನಾವು ಕೃತಜ್ಞರಾಗಿದ್ದಾವೆ. ಇದನ್ನು ಕಡಿಮೆ ಸಮಯದಲ್ಲಿ ಅಂದವಾಗಿ ಮುದ್ರಿಸಿದ ಓಂಕಾರ್ ಆಫ್‌ಸೆಟ್ ಮುದ್ರಣ ಸಂಸ್ಥೆಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಬೆಂಗಳೂರು
ಶ್ರೀ ವ್ಯಯ ನಾಮಸಂವತ್ಸರ
ಚಾಂದ್ರಮಾನ ಯುಗಾದಿ
ದಿನಾಂಕ : 30 ಮಾರ್ಚ್ 2006

ದೈವಜ್ಞ ಕೆ.ಎನ್. ಸೋಮಯಾಜಿ
ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರು
ಕಲ್ಪತರು ಸಂಶೋಧನಾ ಪ್ರತಿಷ್ಠಾನ

KALPATHARU RESEARCH ACADEMY

INSTITUTION FOR

* Promotion of Research Oriented Studies in Veda, Vedanga, Agama, Jyoutisha, Vedanta, Yoga and Ayurveda.
* Study of Sanskrit language in particular and other related languages.
* Propagation of Vedic Phonetics
* Establishment of Veda Patashalas in Guru Kula system
* Running of Oriental Libraries (Prachya Granthalaya)
* Collection, Preservation and Publication of Old Manuscripts.

ಪರಿವಿಡಿ

ವಿಷಯ ಸೂಚಿ		ಪುಟ ಸಂಖ್ಯೆ
ಪ್ರಸ್ತಾವನೆ	......	IX - XLIV
ಗಣಪತಿ	......	1 - 65
ದೇವಿ	......	66 - 111
ವಿಷ್ಣು	......	112 - 155
ಶಿವ	......	156 - 202
ನವಗ್ರಹಗಳು	......	203 - 221
ಪರಿವಾರ ದೇವತೆಗಳು	......	222 - 235
ಅಷ್ಟದಿಕ್ಪಾಲಕರು	......	236 - 252

नमस्ते जगदेक मातः

मालासुधाकुम्भ विबोधमुद्रा
विद्याविराजत्करवारिजाताम् ।
अपारकारुण्य सुधाम्बुराशिं
श्रीशारदाम्बां प्रणतोस्मि नित्यम्।

H.H. Sri Sri BHARATI THEERTA MAHASWAMIJI

HUMBLE DEDICATION TO OUR CHIEF PATRON

भारतीकरुणापात्रं
भारतीपदभूषणम् ।
भारतीपदमारूढं
भारतीतीर्थमाश्रये ॥

॥ श्री शृङ्गेरी श्रीजगद्गुरुमहासंस्थानम् ॥

श्रीमत्परमहंसपरिव्राजकाचार्यवर्य पदवाक्यप्रमाणपारावारपारीण
यमनियमासनप्रणायामप्रत्याहारधारणाध्यानसमाध्यष्टाङ्गयोगानुष्ठाननिष्ठ
तपश्चक्रवर्त्यनाद्यविच्छिन्न श्रीशङ्कराचार्यगुरुपरम्पराप्राप्त षड्दर्शनस्थापनाचार्य
व्याख्यानसिंहासनाधीश्वर सकलनिगमागमसारहृदय सांख्यत्रयप्रतिपादक वैदिकमार्गप्रवर्तक
सर्वतन्त्रस्वतन्त्रादिराजधानी विद्यानगरमहाराजधानी कर्णाटकसिंहासनप्रतिष्ठापनाचार्य
श्रीमद्राजाधिराजगुरुभूमण्डलाचार्य ऋष्यशृङ्गपुरवराधीश्वर तुङ्गभद्रातीरवासि
श्रीमद्विद्याशङ्करपादपद्माराधक श्रीजगद्गुरु श्रीमदभिनवविद्यातीर्थस्वामिगुरुकरकमलसञ्जात

॥ श्री जगद्गुरु शृंङ्गेरी श्रीमद्भारतीतीर्थमहास्वामिभिः ॥

अस्मदत्यन्तप्रियशिष्य श्री नरसिंह सोमयाजि विषये नारायणस्मरणपूर्वकं विरचिता आशिषस्समुल्लसन्तु ।

वैदिकान्ववाये लब्धजनिर्भवान् ज्योतिर्विद्यामभ्यस्य तद्द्वारा बहून् जनान् उपकुर्वन्नास्ते । वेदागमशास्त्रेषु भूयसीं श्रद्धामावहन् तत्प्रचाराय कल्पतरु संशोधनप्रतिष्ठान नाम्नीं संस्थां प्रत्यस्थापयत् । सा च संस्था विशिष्टान् ग्रन्थान् प्रकाशयन्ती वरीवर्ति ।

शृंगगिरि जगद्गुरु महासंस्थाने पारम्परिकीं भक्तिमास्थितवतो भवतो मनसि संस्थामेनां शृंगगिरि मठीयां विधातुं सङ्कल्पः उदभूदिति विज्ञाय मोदामहे । अत एव अदसीयानि प्रकाशनानि इतः परं मठीयत्वेनैव प्रकाशयिष्यन्त इत्यपि भवान् निरचिनोत् । दुर्लभाः भारतीयसंस्कृतिप्रबोधकाः विशिष्टाः ग्रन्थाः संस्थयानया प्रकाशयन्तां तेन च भवदीयो मनोरथः फलेग्रहिर्भूयात् श्रीशारदाचन्द्रमौलीश्वरयोरनुकम्पया भवान् इतोधिक श्रेयः परम्पराभिः समभिवर्धतामिति चाशास्महे ।

इति नारायणस्मरणम्

शृङ्गगिरिः
ईश्वर भाद्रपदशुद्धदशमी भार्गववासरः
12.9.1997

ಮೊದಲ ಮಾತು

ನಮ್ಮ ದೇವತಾ ಶಿಲ್ಪಗಳು ಬರಿಯ ಬೊಂಬೆಗಳಲ್ಲ. ಅವಕ್ಕೊಂದು ಪೌರಾಣಿಕ ಹಿನ್ನೆಲೆ ಉಂಟು. ಲಲಿತ ಕಲೆಯ ಸೊಗಸಿದೆ. ಪ್ರತಿಯೊಂದು ಶಿಲ್ಪವೂ ಒಂದಲ್ಲ ಒಂದು ತತ್ತ್ವವನ್ನೋ, ಮೌಲ್ಯವನ್ನೋ, ಆದರ್ಶವನ್ನೋ ಪ್ರತಿನಿಧಿಸುತ್ತದೆ ; ಸಂಕೇತಿಸುತ್ತದೆ. ಇಂತಹ ದೇವತಾ ಶಿಲ್ಪದ ಲಕ್ಷಣವನ್ನು ವಿವರಿಸುವ ಧ್ಯಾನಶ್ಲೋಕಗಳು ಹಲವಾರು ಇವೆ. ಇಂತಹ ಹಲವು ದೇವತೆಗಳಲ್ಲಿ ಕೆಲವನ್ನು ಆಯ್ದುಕೊಂಡು ಅವುಗಳ ವಿವರಗಳನ್ನು ಸಂಗ್ರಹಿಸಿಕೊಡಲಾಗಿದೆ. ಆಗಮಗಳು, ಪುರಾಣಗ್ರಂಥಗಳು, ಶಿಲ್ಪಗ್ರಂಥಗಳಿಂದ ಇವನ್ನು ಆಯ್ದುಕೊಳ್ಳಲಾಗಿದೆ. ಈ ಧ್ಯಾನ ಶ್ಲೋಕಗಳನ್ನು ಅನುಸರಿಸಿ ರಚಿಸಿದ ಚಿತ್ರಗಳನ್ನು ಸಹ ಅವುಗಳ ಜತೆ ನೀಡಲಾಗಿದೆ.

ಈ ಕೆಲಸಕ್ಕೆ ನನ್ನನ್ನು ಉಜ್ಜುಗಿಸಿದವರು ಗುರಗಳಾದ ವಿದ್ಯಾಲಂಕಾರ ಪ್ರೊ। ಸಾ.ಕೃ. ರಾಮಚಂದ್ರರಾಯರು. ಅವರ ಪ್ರೀತಿಪೂರ್ವಕವಾದ ಆಗ್ರಹವಿರದಿದ್ದರೆ ನಾನು ಖಂಡಿತವಾಗಿ ಈ ಕೆಲಸಕ್ಕೆ ಕೈಹಾಕುತ್ತಿರಲಿಲ್ಲ. ಈ ಬರವಣಿಗೆಗೆ ಅವರ ಬೆಂಬಲವಿರದಿದ್ದಲ್ಲಿ ಬಡವಾಗುತಿತ್ತು, ಬಗ್ಗಡವಾಗುತಿತ್ತು ಎಂಬುದನ್ನು ಖಂಡಿತವಾಗಿ ಬಲ್ಲೆ. ಪ್ರಸ್ತುತ ಪುಸಕ್ತವು ಪೂರ್ಣವಾಗಿ ರಚನೆಗೊಂಡಿದ್ದು ಅವರ ನಿರ್ದೇಶನದಂತೆ. ದೋಷಗಳು ಕಂಡಲ್ಲಿ ಅವು ಮಾತ್ರ ನನ್ನವು. ಈ ಸಂಗ್ರಹಗ್ರಂಥಕ್ಕೊಂದು ಆಶೀರ್ವಾದ ಪೂರ್ವಕ ನುಡಿಯನ್ನು ಅವರು ಬರೆಯುತ್ತೇನೆ ಎನ್ನುತ್ತಿದ್ದರು. ಆದರೆ ಆ ಭಾಗ್ಯ ಈ ಪುಸ್ತಕಕ್ಕೆ ಇರಲಿಲ್ಲವೇನೋ ? ಆದರೆ ಅವರು ನನ್ನಲ್ಲಿ ತೋರಿದ ಒಲವು, ವಿಶ್ವಾಸಗಳನ್ನು ನಾನೆಂದಿಗೂ ಮರೆಯಲು ಸಾಧ್ಯವಿಲ್ಲ. ಅವರ ಸಾನ್ನಿಧ್ಯವನ್ನು, ಮಾರ್ಗದರ್ಶನವನ್ನು ಕೆಲವು ಕಾಲವಾದರೂ ಅನುಭವಿಸಿದೆ, ಪಡೆದೆ. ಅಂತಹ ಚೇತನಕ್ಕೆ ಕರಜೋಡಿಸಿ ಶಿರವನ್ನು ಅವರ ಚರಣಗಳಿಗೆ ಎರಗಿಸುವುದನ್ನು ಹೊರತು ಪಡಿಸಿದರೆ ಇನ್ನೇನು ಅರಿಯುತ್ತಿಲ್ಲ. ಈ ಹೊತ್ತಿಗೆಯನ್ನು ಅವರ ದಿವ್ಯಾತ್ಮಕ್ಕೆ ಗುರುಕಾಣಿಕೆಯಾಗಿ ಸಮರ್ಪಿಸುತ್ತಿದ್ದೇನೆ.

ನನ್ನ ಬರವಣಿಗೆಯನ್ನು ಆರಂಭದಿಂದಲೇ ಗಮನಿಸಿ ಉತ್ತಮವಾದ ಸಲಹೆ, ಸೂಚನೆಗಳನ್ನು ನೀಡಿರುವ, ನೀಡುತ್ತಿರುವ ನನಗೆ ಗುರುಪತ್ನಿಯ ಸ್ಥಾನದಲ್ಲಿರುವ ಶ್ರೀಮತಿ ರಮಾ ರಾಮಚಂದ್ರರಾವ್ ಅವರಿಗೂ, ಹೊತ್ತುಗೊತ್ತುಗಳಿಲ್ಲದೆ ಗುರುಗಳ ಮನೆಗೆ ಬಂದು ಹೋಗುವುದನ್ನು ಕಂಡು ಬೇಸರಿಸದೆ ನನ್ನ ಸ್ವಲ್ಪ ಅತಿಯೇ ಎನಿಸುವ ಮಾತುಗಳನ್ನು ಸಹಿಸಿಕೊಂಡು ತಮ್ಮ ಮನೆಯಲ್ಲೇ, ಕೆಲವು ದಿನಗಳು ಇರುವುದಕ್ಕೆ ಅವಕಾಶ ಮಾಡಿಕೊಟ್ಟು ನನ್ನ ಅಧ್ಯಯನ, ಬರವಣಿಗೆಗಳಿಗೆ ಪ್ರೋತ್ಸಾಹವೀಯುತ್ತಿರುವ ಗುರುಪುತ್ರರಾದ ಡಾ । ಸಾ.ರಾ. ಸುದರ್ಶನ್ ದಂಪತಿಗಳಿಗೆ ನಾನೆಷ್ಟು ಋಣಿಯಾಗಿದ್ದರೂ ಕಡಿಮೆಯೇ. ಈ ಋಣಗಳ ಭಾರ ಹೊತ್ತಿರುವ ನನಗೆ ಕಾಣುತ್ತಿರುವ ದಾರಿ ಬಾಗುವುದೊಂದೆ. ಎಲ್ಲರಿಗೂ ಅನಂತ ನಮಸ್ಕಾರಗಳು.

ಈ ಗ್ರಂಥದಲ್ಲಿ ಮೂರು ಶೈಲಿಯ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಮೊದಲನೆಯದು ಮುಮ್ಮಡಿ ಕೃಷ್ಣರಾಜ ಒಡೆಯರ ನಿರ್ದೇಶನದಂತೆ ರಚನೆಗೊಂಡ ಮೈಸೂರು ಶೈಲಿಯ ರೇಖಾಚಿತ್ರಗಳು. ಇನ್ನೆರಡು ಸಾಂಪ್ರದಾಯಿಕ ಶಿಲ್ಪದ ರೇಖಾಚಿತ್ರಗಳು. ಇವುಗಳಲ್ಲಿ ಬಹುಪಾಲು ಚಿತ್ರಗಳನ್ನು ಗುರುಗಳಾದ ಪ್ರೊ। ಸಾ.ಕೃ. ರಾಮಚಂದ್ರರಾಯರು ಸಂಪಾದಿಸಿರುವ ಶ್ರೀತತ್ವನಿಧಿಯಿಂದ ಆಯ್ದುಕೊಳ್ಳಲಾಗಿದೆ. ಅಷ್ಟಲಕ್ಷ್ಮೀಯ ಎಂಟು ಚಿತ್ರಗಳು, ಸಪ್ತಮಾತೃಕೆಯ ಏಳು ಚಿತ್ರಗಳು, ಭುವನೇಶ್ವರಿಯ ಚಿತ್ರ ಇವನ್ನು ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ಇವರು ಪ್ರಕಟಪಡಿಸಿರುವ ಶ್ರೀತತ್ವನಿಧಿಯಿಂದ ಆಯ್ಕೆಮಾಡಿಕೊಂಡಿದ್ದೇನೆ. ಇದಕ್ಕಾಗಿ ನಾನು ಅವರಿಗೆ ಋಣಿಯಾಗಿದ್ದೇನೆ. ಉಳಿದ ರೇಖಾ ಚಿತ್ರಗಳ ನಿರ್ಮಾತೃಗಳಾದ ಶ್ರೀಯುತ ಎಸ್. ಎಂ. ಗಣಪತಿ ಸ್ಥಪತಿಯವರಿಗೂ ಹಾಗೂ ಶ್ರೀ ಅಪ್ಪು ಕುಟ್ಟಣ್ಣಾಚಾರಿಯವರಿಗೂ ಸಹ ನಾನು ಋಣಿ.

ಪ್ರಸ್ತುತ ಪುಸ್ತಕವನ್ನು ಕಲ್ಪತರು ಸಂಶೋಧನಾ ಪ್ರತಿಷ್ಠಾಪನವು ಪ್ರಕಟಿಸುತ್ತಿದೆ. ಈ ಸಂಸ್ಥೆಯ ಮಹಾಪೋಷಕರೂ ಆಗಿರುವ ಶೃಂಗೇರಿ ಶಾರದಾ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಚರಣಕಮಲಗಳಿಗೆ ಸಾಷ್ಟಾಂಗ ನಮನಗಳು. ಪುಸ್ತಕದ ಪ್ರಕಟನೆಯ ಭಾರವನ್ನು ಹೊತ್ತಿರುವ ಸಂಸ್ಥೆಯ ನಿರ್ದೇಶಕರಾದ ಶ್ರೀ ದೈವಜ್ಞ ಕೆ.ಎನ್. ಸೋಮಯಾಜಿಯವರಿಗೂ ಹಾಗೂ ಈ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಶ್ರೀ ಮಠದ ಆಡಳಿತಾಧಿಕಾರಿ ಶ್ರೀ ವಿ. ಆರ್. ಗೌರಿಶಂಕರ್ ಅವರಿಗೂ ಕೃತಜ್ಞತಾ ಪೂರ್ವಕ ನಮನಗಳು.

ಪುಸ್ತಕದ ಕರಡು ಪ್ರತಿಯನ್ನು ತಿದ್ದುವಲ್ಲಿ ನೆರವಾದ ಆತ್ಮೀಯ ಮಿತ್ರರಾದ ಶ್ರೀ ಸೂರ್ಯಪ್ರಕಾಶ ಪಂಡಿತ್, ಶ್ರೀಪಾದಗದ್ದೆ ಹಾಗೂ ಪೋಶೆಟ್ಟಿಹಳ್ಳಿ ಗುರುರಾಜ (ಪ್ರಣವ)ರಿಗೆ ಕೃತಜ್ಞನೆಂದು ಬೇರೆ ಹೇಳಬೇಕೆ ? ಚಿತ್ರದ ಪ್ರತಿಯನ್ನು ಮಾಡಲು ಸಹಾಯ ಮಾಡಿದ ಶ್ರೀ ಬಿ.ಎಸ್. ಸೂರ್ಯಪ್ರಕಾಶ್ ಅವರಿಗೂ ಕೃತಜ್ಞನಾಗಿದ್ದೇನೆ.

ಮುದ್ರಣವೈಖರಿ ಪುಸ್ತಕದ ಅಂದಚೆಂದವನ್ನು ನಿಜವಾಗಿಯೂ ಹೆಚ್ಚಿಸಿದೆ. ಇದಕ್ಕಾಗಿ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್‌ನ ಶ್ರೀ ವೆಂಕಟೇಶ ಬಾಬು, ಶ್ರೀ ನಾಗೇಂದ್ರ ಹಾಗೂ ಇತರ ಸ್ನೇಹಿತರಿಗೆ ನಾನು ಚಿರಋಣಿ.

ವಿನಯ ಹೆಗಡೆ

ಪ್ರಸ್ತಾವನೆ

ನೆಮ್ಮದಿಗಾಗಿ ಮನುಷ್ಯರೆಲ್ಲರ ಪ್ರಯತ್ನ. ನೆಮ್ಮದಿಯ ನೆಲೆ ಇದೇ ಎಂದು ಗುರುತಿಸಲಾಗದು. ಕಾಲ, ದೇಶ, ಒಡನಾಟ, ಅನುಭವಗಳು ನೆಮ್ಮದಿಯ ನೆಲೆಯನ್ನು ಬದಲಾಯಿಸಿರುತ್ತವೆ; ಅಥವಾ ಅದರಿಂದಾಗಿ ಮನುಷ್ಯ ತನ್ನ ನೆಲೆಯನ್ನು ಬದಲಾಯಿಸುತ್ತಿರುತ್ತಾನೆ. ಈ ನೆಮ್ಮದಿಗಾಗಿ ಕಂಡುಕೊಂಡ ಮಾರ್ಗಗಳು ಹಲವು. ಇದು ಹಲವರಿಗೆ ಹಲವು ತೆರ. ಈ ಮಾರ್ಗಗಳಲ್ಲಿ ಒಂದು ವಿಧಾನವೇ ಪೂಜೆ ಅಥವಾ ಉಪಾಸನೆ ಎಂದು ಕರೆಸಿಕೊಳ್ಳಲ್ಪಡುತ್ತದೆ.

ಕಣ್ಣಿಗೆ ಕಾಣದ ಕೈಗೆಟುಕದ ಬೇರೊಂದು ಶಕ್ತಿ ಇದೆಯೆಂದು ಮನುಷ್ಯನ ಅರಿವಿಗೆ ಬಂದಿತು. ಈ ಅದ್ಭುತ ಶಕ್ತಿ ತನಗೆ ಬಲವನ್ನು ಕೊಡಬಹುದು, ಬಯಕೆಗಳನ್ನು ಈಡೇರಿಸಬಲ್ಲದು, ನೆಮ್ಮದಿಯನ್ನು ನೀಡಬಲ್ಲದು ಎಂಬ ಕಲ್ಪನೆ ಮೈದಳೆಯಿತು. ಈ ಶಕ್ತಿಯನ್ನು ಒಲಿಸಿಕೊಳ್ಳಲು, ಪಡೆಯಲು ವಿಧಿ ವಿಧಾನಗಳು ಹುಟ್ಟಿಕೊಂಡವು. ಮುಂದೆ ಇದಕ್ಕೊಂದು ಧಾರ್ಮಿಕತೆ ಒದಗಿ ಪೂಜೆ, ಅರ್ಚನೆ, ಉಪಾಸನೆ ಎಂಬಿತ್ಯಾದಿ ಹೆಸರುಗಳಿಂದ ನಿರ್ದೇಶಿತವಾಯಿತು.

ಮೂರ್ತಿಪೂಜೆ

ಸಗುಣೋಪಾಸನೆ ಹಾಗೂ ನಿರ್ಗುಣೋಪಾಸನೆ ಎನ್ನುವುದಾಗಿ ಉಪಾಸನೆಗಳನ್ನು ಎರಡು ವಿಧವಾಗಿ ವಿಂಗಡಿಸಿಕೊಂಡರು. ಇವೇ ಸಾಕಾರ ಹಾಗೂ ನಿರಾಕಾರ ಪೂಜೆ ಎನಿಸಿಕೊಂಡಿದೆ. ಸಾಕಾರೋಪಾಸನೆ ಚರಮಲಕ್ಷ್ಯವೂ ನಿರಾಕಾರದೆಡೆಗೇ ಆಗಿದೆ. ಕಣ್ಣಿಗೆ ಕಾಣುವ ಕೈಯಿಂದ ಸ್ಪರ್ಶಿಸಬಹುದಾದ ವಸ್ತುವೊಂದರ ಆಸರೆಯಿಂದ ಕಣ್ಣಿಗೆ ಕಾಣದ, ಕೈಗೆಟುಕದ, ನಮ್ಮಳವಿಗೆ ಸಿಗದ ಅರಿವಿಗೆ ಮಾತ್ರ ಬಂದ ಶಕ್ತಿಯನ್ನು ಪ್ರತೀಕವೊಂದರಲ್ಲಿ ಕಾಣುವುದು, ಉಪಾಸಿಸುವುದು ಸಗುಣೋಪಾಸನೆ. ಸಾಕಾರಾರ್ಚನೆಯಲ್ಲಿ ಆಕಾರಗಳೇನೋ ಇವೆ. ಆದರೆ ಅದಕ್ಕೆ ನಿರ್ದಿಷ್ಟವಾದ ಇದೇ ಸರಿ ಎನ್ನಬಹುದಾದ ರೂಪವಿಲ್ಲ. ಅವರವರ ಭಾವ, ಸಂಸ್ಕಾರಗಳಿಗನುಗುಣವಾಗಿ ಬೇರೆಯಾಗಿ ತೋರಿಕೊಳ್ಳುತ್ತದೆ. ಆದ್ದರಿಂದಲೇ ರೂಪಭೇದ, ಮತಭೇದ, ಆಕಾರ ಭೇದಗಳ ವೈವಿಧ್ಯ ಉಂಟಾಗಿದೆ. ಹರಿಯುತ್ತಿರುವ ನದಿಗೆ ಯಾವ ನಿರ್ದಿಷ್ಟ ಆಕಾರವೂ ಇಲ್ಲ. ಆದರೆ ನೀರಿನ ಗುಣ ಇದೆ. ಆದರೆ ನಾವು ಅದನ್ನು ಬೊಗಸೆ ಅಥವಾ ಪಾತ್ರೆಗಳಲ್ಲಿ ತೆಗೆದುಕೊಂಡಾಗ ಅದು ಒಂದು ಆಕಾರ ಹಾಗೂ ಪ್ರಮಾಣಗಳಿಗೆ ನಿರ್ದಿಷ್ಟಗೊಂಡಿತು. ಮೂಲಗುಣದಲ್ಲೇನೂ ವ್ಯತ್ಯಾಸವಾಗಲಿಲ್ಲ. ನಮಗೆ ತೋರುತ್ತಿರುವ ಆಕಾರ ಮಾತ್ರ ಬೇರೆ. ಅದೇ ರೀತಿ ಮೂಲ ಚೇತನ ಒಂದೇ, ಅದು ಅಭಿವ್ಯಕ್ತಿಗೊಂಡ ಬಗೆ ಹಲವು. ದಿಟವಾಗಿ ಈ ಎರಡು ಉಪಾಸನಾ ಮಾರ್ಗಗಳು ಬೇರೆ ಬೇರೆಯಲ್ಲ. ಕಣ್ಣುಗಳೆರಡಾದರೂ ಅವುಗಳ ದೃಷ್ಟಿ ಒಂದೇ ಆಗಿದೆಯೊ ಅದೇ ರೀತಿ ಈ ಉಪಾಸನೆಗಳು.

ನಮಗೆ ಸದ್ಯ ಸಗುಣೋಪಾಸನೆ ಪ್ರಸಕ್ತವಾದದ್ದು. ಈ ಉಪಾಸನಾ ಕ್ರಮದಲ್ಲಿ ಹೊರಗಿನ ಯಾವ ಆಲಂಬನೆಯಿಂದ ಹರಿದಾಡುವ ಮನಸ್ಸು ಏಕಾಗ್ರವಾಗಿ ನಿಲ್ಲಬಲ್ಲದೋ; ಅದೇ ಪ್ರತೀಕದಲ್ಲಿ ದೈವತ್ವವನ್ನು ಕಾಣಬಹುದೋ ಅವಕ್ಕೇ ರೂಪ ನಿರ್ದೇಶನಗಳನ್ನು ಮಾಡಿಕೊಂಡರು. ವ್ಯಕ್ತರೂಪ, ಅವ್ಯಕ್ತರೂಪ ಹಾಗೂ ವ್ಯಕ್ತಾವ್ಯಕ್ತರೂಪ ಎಂಬ ಮೂರು ಪ್ರಭೇದಗಳನ್ನು ಮಾಡಲಾಯ್ತು. ದೇವತಾ ಪ್ರತೀಕವನ್ನು ಮನುಷ್ಯಾಕಾರದಂತೆ ನಿರ್ಮಿಸಿ ಆಯುಧ ಆಭರಣಗಳನ್ನು ಅಳವಡಿಸಿ ಸ್ಪಷ್ಟವಾದ ಆಕಾರ ಕಾಣುವಂತೆ ಮಾಡಿದರೆ ಅದು ವ್ಯಕ್ತರೂಪ. ಇಲ್ಲಿ ಮನಸ್ಸು ಥಟ್ಟನೇ ನಿಲ್ಲಬಹುದು. ನಿರ್ದಿಷ್ಟವಾದ ಆಕಾರ ಇರದಿರುವ ಪ್ರತೀಕಗಳು ಅವ್ಯಕ್ತರೂಪಕ್ಕೆ ಸೇರುತ್ತವೆ. ಶಾಲಗ್ರಾಮ, ಬಾಣಲಿಂಗಗಳು ಈ ವರ್ಗಕ್ಕೆ ಸೇರುತ್ತವೆ. ಶಿವಲಿಂಗದಂಥ ಪ್ರತೀಕಗಳು, ಯಂತ್ರಗಳು ವ್ಯಕ್ತಾವ್ಯಕ್ತವೆನಿಸಿಕೊಳ್ಳುತ್ತವೆ. ಇಲ್ಲಿ ಎರಡೂ ಗುಣಗಳಿದ್ದರೂ ಯಾವುದೂ ಪೂರ್ಣವಾಗಿಲ್ಲ. ವ್ಯಕ್ತರೂಪವು ಇಂದ್ರಿಯಗೋಚರವಾಗಿದೆ. ಆ ವ್ಯಕ್ತವು ಮನೋಗೋಚರ ಮಾತ್ರ. ಭಾವನೆಯೇ ಪ್ರಧಾನ; ಭಾವಿಸಿದರೆ ಮಾತ್ರ ರೂಪವುಂಟು. ಆದರೆ ವ್ಯಕ್ತಾವ್ಯಕ್ತದಲ್ಲಿ ವ್ಯಕ್ತದಿಂದ ಅವ್ಯಕ್ತದೆಡೆಗೆ ಇಂದ್ರಿಯಗ್ರಾಹ್ಯದಿಂದ ಮನೋಗೋಚರ ಆಗಬಲ್ಲದು.

ದೇವತ್ವಕ್ಕೊಂದು ಮೂರ್ತರೂಪವನ್ನು ಕಲ್ಪಿಸಿಕೊಂಡ ಮೇಲೆ, ನಿರ್ಮಿಸಿಕೊಂಡ ನಂತರ ಅದರೊಡನೆ ನಡೆಸುವ ಕ್ರಿಯೆಗಳನ್ನು, ಕಲಾಪಗಳನ್ನು ಪೂಜೆ, ಅರ್ಚನೆ, ಉಪಾಸನೆ, ಆರಾಧನೆ ಎಂಬಿತ್ಯಾದಿಯಾಗಿ ಕರೆದರು. ಪೂಜೆಯ ಹಿಂದಿರುವ ಮನೋಧರ್ಮವು ತುಂಬ ಸ್ವಾರಸ್ಯವಾದದ್ದು. ನಿತ್ಯ ಜೀವನದಲ್ಲಿ ಆಚರಿಸುವ ಕ್ರಿಯೆಯನ್ನೆ ಪೂಜೆ, ಆರಾಧನೆಗೂ ಅಳವಡಿಸಿಕೊಂಡರು. ಅತಿಥಿಯೋರ್ವನು ಮನೆಗೆ ಬಂದಾಗ ಅವನನ್ನು ಆದರಿಸುವ ಸತ್ಕರಿಸುವ ರೀತಿಯನ್ನೇ ಪೂಜೆಯಲ್ಲೂ ಮಾಡಿದರು. ನಾವು ಮಾಡಿಕೊಂಡ ದೇವತಾ ಪ್ರತೀಕ ಅದೊಂದು ಜಡ; ಚೇತನವನ್ನು ನಾವು ಅಲ್ಲಿ ಆರೋಪಿಸುತ್ತಿದ್ದೇವೆ, ಆಮಂತ್ರಿಸುತ್ತಿದ್ದೇವೆ. ಬಂದಾಗ ಪೀಠವನ್ನಿತ್ತು ಆಸೀನನಾಗಬೇಕೆಂದು ಪ್ರಾರ್ಥಿಸುತ್ತೇವೆ, ಪಾನೀಯ ನೈವೇದ್ಯಾದಿಗಳನ್ನು ಸಮರ್ಪಿಸುತ್ತೇವೆ. ಇಲ್ಲಿ ನಮಗೆ ಕಾಣಿಸುವುದು ನಮ್ಮ ಸಹಜ ಕ್ರಿಯೆಗಳಲ್ಲಿ ಒಂದು ಧಾರ್ಮಿಕತೆ ಇದೆ, ಈ ಧಾರ್ಮಿಕ ಕಲಾಪಗಳಲ್ಲಿ ಒಂದು ಕಲಾತ್ಮಕತೆ, ಈ ಕಲಾತ್ಮಕತೆಯ ಹಿನ್ನೆಲೆಯಾಗಿ ಆಧ್ಯಾತ್ಮಿಕತೆ ಉಂಟು. ನಮಗೆ ಜಡವೊಂದರಲ್ಲಿ ಚೇತನಾಪೂರ್ಣನನ್ನು ನೋಡಲು ಸಾಧ್ಯ. ಪೂಜೆಯ ವೇಳೆಯಲ್ಲಂತೂ ಆ ಪ್ರತೀಕವೂ ಕೇವಲ ಮೂರ್ತಿಯಾಗಿಲ್ಲ, ಆ ಸಾಕ್ಷಾತ್ ದೇವತೆಯೇ ಆಗಿದೆ. ಇಲ್ಲಿ ಫಲಾಪೇಕ್ಷೆಯೂ ಇಲ್ಲವೆಂದೇನಲ್ಲ. ಬಂದ ಭಗವಂತನಲ್ಲಿ ನಮ್ಮ ಬೇಡಿಕೆಗಳಿವೆ, ಆ ಬೇಡಿಕೆಯಲ್ಲೊಂದು ಬೆಡಗು ಬಿನ್ನಾಣವಿದೆ. ಇದು ಕೊಡುಕೊಳ್ಳುವಿಕೆಯ ವ್ಯವಹಾರವಲ್ಲ, ಇವನ್ನು ಮೀರಿದ ಒಂದು ಸಂಬಂಧ.

ಪೂಜಕ ಎಂದರೆ ಪೂಜೆ ಮಾಡುವವನು, ಪೂಜ್ಯ ಎಂದರೆ ಪೂಜಿಸಲ್ಪಡುವ ದೇವತೆ ಮತ್ತು ಪೂಜನ ಎಂದರೆ ಪೂಜಿಸುವ ಬಗೆ ಎಂದು ವಿಭಾಗಿಸಿಕೊಂಡಿದ್ದಾರೆ. ತಾನು ಆಶ್ರಯಿಸಿದ ದೇವತೆಯೇ ಪೂಜ್ಯ ಮತ್ತು ಅದರ ಪೂಜಾಕ್ರಮಗಳ ಬಗ್ಗೆ ಪೂಜಕನು ತಿಳಿದಿರಬೇಕು. ಈ ಕ್ರಿಯೆಗಳ ನಿರ್ದೇಶನಕ್ಕೆ ಶಾಸ್ತ್ರಗಳೂ ನಿರ್ಮಾಣಗೊಂಡವು, ಸಂಪ್ರದಾಯಗಳು ಮೈಯ್ದಾಳಿದವು.

ದೇವತೆಗಳಲ್ಲಿ ಇಷ್ಟದೈವ, ಕುಲದೈವ, ಪ್ರಸಂಗದೈವವೆಂದು ಮೂರು ವಿಧಗಳಿವೆ. ಪ್ರತಿಯೊಂದೂ ಮನೆತನಕ್ಕೂ ಪರಂಪರೆಯಲ್ಲಿ ಒದಗಿಬಂದ ದೇವತೆಯೊಂದು ಇರುತ್ತದೆ. ಇದೇ ಕುಲದೈವ. ಕಾಲಕಾಲಕ್ಕೆ ಈ ಕುಲದೈವಕ್ಕೆ ಪೂಜೆ ಸಲ್ಲಿಸುವುದು ವಾಡಿಕೆ. ಆದರೆ ಇಷ್ಟದೈವ ಆಗಿರಬೇಕೆಂಬ ನಿಯಮವೇನೂ ಇಲ್ಲ. ಪ್ರತಿಯೊಬ್ಬನೂ ತನ್ನ ಮನಸ್ಸಿಗೆ ಇಷ್ಟವಾದ ದೇವತೆಯನ್ನು ಉಪಾಸಿಸಲು ಸಂಪ್ರದಾಯವೇನೂ ನಿರ್ಬಂಧಿಸದು. ಪ್ರಸಂಗ ದೈವವೆನ್ನುವುದು ಯಾವುದೋ ಉದ್ದೇಶದ, ಬಯಕೆಯ ಈಡೇರಿಕೆಗಾಗಿ ಉಪಾಸಿಸುವಂಥದ್ದು. ಯಾವಾಗಲೂ ಅರ್ಚಿಸಬೇಕಾಗೇನೂ ಇಲ್ಲ. ಆಯ್ಕೆ ಮಾಡಿಕೊಂಡ ಉದ್ದೇಶ ಮತ್ತು ಅದಕ್ಕನುಗುಣವಾದ ಕಾಲಾವಧಿಯವರೆಗೆ ಮಾತ್ರ ಉಪಾಸನೆ.

ಬಹು ದೇವತಾರಾಧನೆ ಹಿಂದೂಗಳ ಸಾರಭೂತವಾದ ಲಕ್ಷಣ ವಿಶೇಷ; ಇದೇ ಭಾರತೀಯ ಶಿಲ್ಪಶಾಸ್ತ್ರದ ಹಿನ್ನೆಲೆ. ದೇವತೆಗಳು ಹಲವೆಂದು ಮೇಲ್ನೋಟಕ್ಕೆ ತೋರುತ್ತದೆ. ಎಲ್ಲ ದೇವತೆಗಳೂ ಒಂದೇ ಚೇತನದ ಹಲವು ವ್ಯಕ್ತತೆಗಳು. ಒಂದೇ ಬಿಂದುವಿನಿಂದ ಹೊರಟ ರೇಖೆಗಳು. ಮೂಲ ಒಂದೇ. ಉಪಾಸಕರ, ಸಾಧಕರ ಭಾವ ಭಕ್ತಿಗನುಗುಣವಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಕಾಣಿಸಿಕೊಂಡವು; ಅಭಿವ್ಯಕ್ತಗೊಂಡವು.

ದೇವತಾಪೂಜಾವಿಧಾನದಲ್ಲಿ ಹಲವಾರು ರೀತಿಗಳಿವೆ. ಅದರಲ್ಲಿ ಪಂಚಾಯತನ ಪೂಜಾಕ್ರಮವೂ ಒಂದು. ಇದು ಒಂದೇ ಪೀಠದ ಮೇಲೆ ಐದು ದೇವತೆಗಳನ್ನಿಟ್ಟು ಪೂಜಿಸುವ ಕ್ರಮ. ಇವು ಗಣೇಶ, ದೇವಿ, ವಿಷ್ಣು, ಶಿವ, ಸೂರ್ಯ ಎಂದೆಣಿಸುತ್ತಾರೆ. ಈ ಪಂಚದೇವತೆಗಳು ಪಂಚಭೂತಗಳ ಸಂಕೇತವೆಂದು ಹೇಳುವುದೂ ಇದೆ. ನಿತ್ಯಾರ್ಚನೆಯಲ್ಲಿ ಈ ಐದೂ ದೇವತಾ ಪ್ರತೀಕಗಳನ್ನು ಒಂದೇ ಪೀಠದಲ್ಲಿಟ್ಟುಕೊಂಡಿರುತ್ತಾರೆ. ಪೂಜಕನಿಗೆ ಯಾವುದು ಇಷ್ಟದೈವವೋ ಅದನ್ನ ಪೀಠದ ಮಧ್ಯ ಭಾಗದಲ್ಲಿಟ್ಟು ಉಳಿದ ನಾಲ್ಕು ಮೂರ್ತಿಗಳನ್ನು ಪೀಠದ ನಾಲ್ಕು ಕಡೆಗಳಲ್ಲಿ ಇಟ್ಟು ಪೂಜಿಸುತ್ತಾರೆ. ಇಷ್ಟದೈವದಿಂದಲೇ ಪಂಚಾಯತನವನ್ನು ಹೆಸರಿಸುವುದು ಕ್ರಮ. ಗಣೇಶ ಇಷ್ಟದೈವವಾದರೆ ಗಣೇಶ ಪಂಚಾಯತನ, ವಿಷ್ಣುವಾದರೆ ವಿಷ್ಣುಪಂಚಾಯತನ ಹೀಗೆ. ಇಲ್ಲಿ ಪ್ರಧಾನವಾಗಿರಿಸಿಕೊಂಡ ಒಂದು ದೇವತೆಯೇ ಉಳಿದೆಲ್ಲವೂ ಆಗಬಲ್ಲದು. ಒಂದರಲ್ಲೇ ಎಲ್ಲವೂ ಅಡಕವಾಗಬಲ್ಲದು. ಒಂದೇ ಬಹುವಿಧವಾಗಿ ತೋರಿಕೊಂಡಿರುವುದು. ಐದು ದೇವತೆಗಳು ಬೇರೆ ಬೇರೆಯಲ್ಲ.



ಗಣೇಶ ಪಂಚಾಯತನದ ನಕ್ಷೆ

ಅರ್ಚನೆಯಲ್ಲಿ ಎರಡು ಬಗೆ. ಒಂದು ಗೃಹಾರ್ಚನೆ, ಇನ್ನೊಂದು ಆಲಯಾರ್ಚನೆ. ಮನೆಯಲ್ಲಿ ಮಾಡುವ ಉಪಾಸನೆ ಗೃಹಾರ್ಚನೆಯಾದರೆ ಊರಿನಲ್ಲಿ ಹಲವರು ಸೇರಿ ದೇವತೆಗೆ ಗುಡಿಯೊಂದನ್ನು

ನಿರ್ಮಿಸಿ ಪೂಜಿಸುವ ವಿಧಾನ ಆಲಯಾರ್ಚನೆ. ಗೃಹಾರ್ಚನೆಯಲ್ಲಿ ಮುಷ್ಟಿಗಾತ್ರಕ್ಕೆ ಮೀರದ ಮೂರ್ತಿಗಳನ್ನು ಇಟ್ಟುಕೊಳ್ಳಬೇಕೆಂಬುದು ವಿಧಿಯಾಗಿದೆ. ಆಲಯಾರ್ಚನೆಯಲ್ಲಿ ದೊಡ್ಡ ವಿಗ್ರಹಗಳೇ ಸಾಮಾನ್ಯವಾಗಿ ಇರುವಂತದ್ದಾಗಿದೆ. ಎರಡಕ್ಕೂ ಮೂರ್ತಿಶಿಲ್ಪದ ಅಗತ್ಯವಿದೆ. ಗೃಹಾರ್ಚನೆ ವೈಯುಕ್ತಿಕ ಕ್ರಿಯೆಯಾದರೆ ಆಲಯಾರ್ಚನೆ ಸಾಮುದಾಯಿಕ ಕಲಾಪ.

ಅರ್ಚನೆಗಾಗಿ ಪ್ರತಿಮೆಗಳನ್ನು ಸಿದ್ಧಪಡಿಸುವ ಪದ್ಧತಿ ಬೆಳೆದುಬಂದ ಕಾಲದಲ್ಲೇ ಪೂಜಾಕ್ರಮವೂ ವ್ಯವಸ್ಥೆಗೊಳ್ಳತೊಡಗಿತು. ಸಾರ್ವಜನಿಕ ಆರಾಧನೆಗೆ, ಹಿತಕ್ಕೆಂದು ಆಲಯಗಳನ್ನು ನಿರ್ಮಿಸಿ ಪ್ರತಿಮೆಗಳನ್ನು ಸಿದ್ಧಪಡಿಸಿ ಪ್ರತಿಷ್ಠಾಪಿಸಿ, ಪೂಜಾಪದ್ಧತಿಗಳನ್ನು ನಿರ್ದಿಷ್ಟಗೊಳಿಸಿ ಒಂದು ವ್ಯವಸ್ಥೆ ಮಾಡಿಕೊಂಡರು. ಈ ವ್ಯವಸ್ಥೆಗೆ ಆಗಮವೆಂದು ಹೆಸರು. ಆಗಮಗಳು ದೇವತೆಯನ್ನವಲಂಬಿಸಿ ಆದ ಸಂಪ್ರದಾಯ ಕ್ರಮಗಳು. ಶಿವನ ಕುರಿತಿರುವುದು ಶೈವಾಗಮ, ದೇವೀಪರವಾದವು ಶಾಕ್ತಾಗಮಗಳು, ವಿಷ್ಣುವಿಗನುಗುಣವಾದವು ವೈಷ್ಣವಾಗಮಗಳು. ಇವು ಪ್ರಧಾನ ಸಂಪ್ರದಾಯ ಭೇದಗಳಾಗಿವೆ.

ಮೂರ್ತಿಶಿಲ್ಪ

ಶಿಲ್ಪ ಎನ್ನುವ ಶಬ್ದ 'ಶೀಲ್ ಸಮಾಧೌ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಸಮಾಧಿ ಎಂದರೆ ಮನಸ್ಸನ್ನು ಒಂದು ಕಡೆ ಚೆನ್ನಾಗಿ ಇಡುವುದು, ಕೇಂದ್ರೀಕರಿಸುವುದು ಎಂಬರ್ಥವಿದೆ. ಹೀಗೇ ಮನಸ್ಸು ಎಲ್ಲಿ ಚೆನ್ನಾಗಿ ನಿಲ್ಲಬಲ್ಲದೋ, ಮನಸ್ಸನ್ನು ಯಾವುದು ಹಿಡಿದು ನಿಲ್ಲಿಸಬಲ್ಲದೋ ಆ 'ಕೃತಿ'ಗಳೆಲ್ಲವೂ ಶಿಲ್ಪಗಳೇ ಎಂಬ ಮಾತಿದೆ. ಇಂತಹ ಮೂರ್ತಿಶಿಲ್ಪಗಳು ಆಗಬೇಕಾದರೆ ಮೂರ್ತಿಯ ಸುಂದರವಾದ ಆಕಾರವನ್ನು, ರೂಪಲಕ್ಷಣಗಳನ್ನು ಹೊಂದಿರಬೇಕು.

ಶಿಲ್ಪ ರಚನೆಗೆ ಬಳಸಿಕೊಂಡ ಮಾಧ್ಯಮಗಳು ಹಲವು. ರಚನಾ ವಿಧಾನ, ವೈಖರಿಯೂ ಬಹು ವಿಧವಾಗಿ ಇದೆ. ಶಿಲೆ, ಮರ, ಲೋಹ, ಗಾರೆಗಚ್ಚು, ಮಣ್ಣು, ಪಿಷ್ಟ (ಹಿಟ್ಟು) ಮುಂತಾದ ಮಾಧ್ಯಮಗಳಿಂದ ಶಿಲ್ಪ ರಚಿಸಿದ್ದಾರೆ. ಪ್ರಧಾನ ಕ್ರಮಗಳೆರಡು. ಒಂದು ಊಹ ಇನ್ನೊಂದು ಆಪೋಹವೆಂದು ಹೆಸರು. ಊಹವೆಂದರೆ ಆಯ್ಕೆ ಮಾಡಿಕೊಂಡ ಮಾಧ್ಯಮವನ್ನು ಆ ವಸ್ತುವನ್ನು ಕೂಡಿಸಿ, ಸೇರಿಸಿ ಮಾಡುವುದಾಗಿದೆ. ಅಪೋಹ ವಿಧಾನವೆಂದರೆ ಈಗಾಗಲೇ ವಸ್ತುವೊಂದಿದೆ. ಶಿಲ್ಪವೂ ಅದರಲ್ಲಿದೆ ಆದರೆ ಅದು ಅವ್ಯಕ್ತವಾಗಿದೆ. ಈ ಅವ್ಯಕ್ತವಾಗಿರುವ ಭಾಗವನ್ನು ವ್ಯಕ್ತಗೊಳಿಸಿದರೆ ಅಂದರೆ ಶಿಲ್ಪವಲ್ಲದ ಭಾಗವನ್ನು ಆ ವಸ್ತುವಿನಿಂದ ಬೇರ್ಪಡಿಸಿದರೆ ಶಿಲ್ಪವು ವ್ಯಕ್ತಗೊಳ್ಳುತ್ತದೆ. ಮೇಣ, ಮಣ್ಣು, ಗಾರೆಗಚ್ಚು, ಪಿಷ್ಟದಲ್ಲಿ ರಚಿಸುವ ವಿಧಾನವು ಊಹ ಅಥವಾ ಮೃಣ್ಮಯೀ ವರ್ಗಕ್ಕೆ ಸೇರುತ್ತದೆ. ಶಿಲೆ, ಮರದಲ್ಲಿ ರಚಿಸುವ ಶಿಲ್ಪಗಳು ಆಪೋಹ ಅಥವಾ ಶೈಲೀ ವಿಧಾನಕ್ಕೆ ಸೇರುತ್ತವೆ. ಮೇಣದಲ್ಲಿ ರಚಿಸಿರುವ ವಿಗ್ರಹಗಳನ್ನು ಅದೇ ರೀತಿಯಿಟ್ಟು ಅರ್ಚಿಸಲಾಗದು. ಅದನ್ನು ಲೋಹ ಮಾಧ್ಯಮಕ್ಕೆ ವರ್ಗಾಯಿಸಿಕೊಳ್ಳಬೇಕು. ಈ ವಿಧಾನವೂ ಕೂಡ ನಮ್ಮ ಪ್ರಾಚೀನ ಶಿಲ್ಪ

ರಚನಾ ತಂತ್ರಗಳಲ್ಲೊಂದು. ಜೇನಿನ ಮೇಣದಲ್ಲಿ ಮೂರ್ತಿರಚನಾ ನಂತರದಲ್ಲಿ ಹದಗೊಳಿಸಿದ ನಯವಾದ ಮಣ್ಣು ಅಥವಾ ಹುತ್ತದ ಮಣ್ಣಿನಿಂದ ಆ ಮೂರ್ತಿಯನ್ನ ಮುಚ್ಚುತ್ತಾರೆ. ಒಂದು ಚಿಕ್ಕ ಭಾಗವನ್ನು ತೆರೆದಿರಬೇಕು. ಇದು ಮಣ್ಣಿನ ಅಚ್ಚು(ಮುಚ್ಚಲ್ಪಟ್ಟ ಮೇಣದ ಮೂರ್ತಿ)ನ್ನು ಕಾಯಿಸಿದಾಗ ಒಳಗೆ ವಿಗ್ರಹ ರೂಪದಲ್ಲಿರುವ ಮೇಣವು ಕರಗಿ ಹೊರಬರುವ ಮಾರ್ಗ. ಹೀಗೆ ಮೇಣವನ್ನು ಹೊರತೆಗೆದರೆ ಪದರದಲ್ಲಿ ಮೊದಲು ಮೇಣದಲ್ಲಿ ರಚಿಸಿದ್ದ ವಿವರಗಳೆಲ್ಲ ಮಣ್ಣಿನ ಒಳಪದರದಲ್ಲಿ ಉಳಿಯುತ್ತದೆ. ಅದೇ ಮಣ್ಣಿನ ಅಚ್ಚಿನಲ್ಲಿರುವ ತೆರೆದ ಭಾಗದೊಳಗೆ ಕಾಯಿಸಿದ ದ್ರವರೂಪದ ಲೋಹವನ್ನು ಸುರಿದಾಗ ಮೊದಲು ಮೇಣವಿದ್ದ ಜಾಗವನ್ನು ಈ ಲೋಹವು ಆಕ್ರಮಿಸಿಕೊಂಡಿತು. ಅದೇ ಆಕಾರವನ್ನು ತಳೆಯಿತು. ಬಿಸಿ ಆರಿದ ನಂತರ ಮೇಲ್ಭಾಗಕ್ಕೆ ಮುಚ್ಚಿರುವ ಮಣ್ಣನ್ನು ತೆಗೆದು ಸ್ವಚ್ಛಗೊಳಿಸಿದರೆ ಲೋಹ ಶಿಲ್ಪವು ವ್ಯಕ್ತಗೊಳ್ಳುತ್ತದೆ. ಈ ಕ್ರಮದಲ್ಲಿ ಸಿದ್ಧವಾದ ಅರ್ಚಾಮೂರ್ತಿಗಳನ್ನು ಮತ್ತೆ ಸಂಸ್ಕಾರಕ್ಕೊಳಪಡಿಸಬಾರದು. ಅದನ್ನು ತಿದ್ದುವ ತೀಡುವ ಉಜ್ಜುವ ಕಾರ್ಯ ಮಾಡಬಾರದು. ಮೇಣದ ವಿಗ್ರಹವಿರುವಾಗಲೇ ಎಲ್ಲ ಸಂಸ್ಕಾರಗಳು, ಸೂಕ್ಷ್ಮ ಕೆತ್ತನೆಗಳು ಸಾಧ್ಯವಿರುವುದರಿಂದ ಆ ಹಂತದಲ್ಲೇ 'ಮೂರ್ತಿ'ಕರಣ ಮುಗಿದಿದೆ. ಮೇಣದ ವಿಗ್ರಹವನ್ನು ಲೋಹಕ್ಕೆ ವರ್ಗಾಯಿಸುವ ಕಾರ್ಯ ಮಾತ್ರ ನಂತರದ್ದು. ಈ ವಿಧಾನವನ್ನು 'ಮಧೋಚ್ಚಿಷ್ಟವಿಧಾನ'ವೆಂದು ಹೇಳುತ್ತಾರೆ.

ಶಿಲೆಯಲ್ಲಿ ಶಿಲ್ಪ ನಿರ್ಮಾಣವಾದರೆ ನದೀತೀರ, ಗ್ರಾಮಮಧ್ಯ, ಸ್ಮಶಾನ ಇಂತಹ ಸ್ಥಳದಲ್ಲಿರುವ ಶಿಲೆಯನ್ನು ಶಿಲ್ಪ ನಿರ್ಮಾಣಕ್ಕೆ ಬಳಸಬಾರದು. ಮೊದಲು ಭೂಶೋಧನ ಮಾಡಬೇಕು. ಶಿಲೆಯನ್ನು ಪರೀಕ್ಷಿಸಿ ಸೂಕ್ತವಾದುದನ್ನು ಆಯ್ಕೆ ಮಾಡಿಕೊಳ್ಳಬೇಕು. ಶಿಲೆಯಲ್ಲಿ ಪುಂಶಿಲೆ, ಸ್ತ್ರೀಶಿಲೆ ಹಾಗೂ ನಪುಂಸಕಶಿಲೆಗಳೆಂಬ ಮೂರು ವಿಧಗಳಿವೆ. ದೇವಶಿಲ್ಪನಿರ್ಮಾಣದಲ್ಲಿ ಪ್ರಧಾನ ಬೇರವನ್ನು ಪುಂಶಿಲೆಯಲ್ಲೂ, ಪಾದಪೀಠವನ್ನು ಸ್ತ್ರೀಶಿಲೆಯಲ್ಲೂ, ಆಧಾರಪೀಠವನ್ನು ನಪುಂಸಕಶಿಲೆಯಲ್ಲೂ ನಿರ್ಮಿಸಬೇಕೆಂಬುದು ಶಾಸ್ತ್ರನಿಯಮವಾಗಿದೆ.

ಮರವನ್ನು ಶಿಲ್ಪಕ್ಕಾಗಿ ಆಯ್ಕೆಮಾಡಿಕೊಂಡರೂ ಕೆಲವು ನಿಬಂಧನೆಗಳನ್ನು ಹೇಳುತ್ತಾರೆ. ನದೀತೀರದಲ್ಲಿರುವ ರಾಜಬೀದಿಯಲ್ಲಿರುವ ಮರವನ್ನು ಕತ್ತರಿಸಬಾರದು. ಇತರೆಡೆಗಳಲ್ಲಿರುವ ಮರವಾದರೂ ಅದು ಒಣಗಿದ ಮರವಾಗಿರಬೇಕು. ಶಿಲ್ಪರಚನೆಗೆ ಮುನ್ನ ಅವುಗಳನ್ನು ಪ್ರಾರ್ಥಿಸಿ; ಉದ್ದೇಶವನ್ನು ತಿಳಿಸಿ ಶಿಲ್ಪರಚನೆಗೆ ಶಿಲ್ಪಿಯಾದವನು ತೊಡಗಬೇಕು. ಇದು ಅವನ ಕರ್ತವ್ಯವಾಗಿದೆ.

ಹೀಗೆ ಶಾಸ್ತ್ರಶುದ್ಧವಾಗಿ ಸಿದ್ಧಪಡಿಸಿದ ಮೂರ್ತಿಗಳನ್ನು ಚಲ ಮತ್ತು ಅಚಲ ಎಂಬುದಾಗಿ ವಿಭಾಗ ಮಾಡಿಕೊಂಡಿದ್ದಾರೆ. ದೇವಾಲಯದ ಗರ್ಭ ಗೃಹದಲ್ಲೇ ನೆಲೆಯಾಗಿರುವ, ಪ್ರತಿಷ್ಠಾಪಿಸಿರುವ ಮೂಲಮೂರ್ತಿಯನ್ನು ಅಚಲಮೂರ್ತಿ ಎನ್ನುತ್ತಾರೆ. ಇದೇ ಧ್ರುವಬೇರವೆಂದೂ ಕರೆಸಿಕೊಳ್ಳುತ್ತದೆ. ಸಾಮಾನ್ಯವಾಗಿ ಇವು ಗಾತ್ರದಲ್ಲಿ ದೊಡ್ಡದಾಗಿದ್ದು ಶಿಲಾನಿರ್ಮಿತಿಯಾಗಿರುತ್ತದೆ. ಉತ್ಸವಾದಿಗಳಲ್ಲಿ ಸಭಾಮಂಟಪಕ್ಕೆ, ಊರಬೀದಿಗೆ ಬಂದು ಪೂಜೆ ಸ್ವೀಕರಿಸುವ ಮೂರ್ತಿಗಳು, ರಥೋತ್ಸವದಲ್ಲಿ ರಥದ ಮೇಲೆ ಕುಳ್ಳಿರಿಸುವ ಮೂರ್ತಿಗಳು ಇವೆಲ್ಲರೂ ಚಲಮೂರ್ತಿಗಳು ಅಥವಾ ಉತ್ಸವಮೂರ್ತಿಗಳು.

ಮೂಲಮೂರ್ತಿಯನ್ನು ಸೇರಿಸಿ ಐದು ಮೂರ್ತಿಗಳಿರುತ್ತವೆ. ಕೆಲವು ಆಗಮಗಳು ಇವನ್ನೇ ಪಂಚಬೇರವಿಧಿ ಎನ್ನುವುದಾಗಿ ನಿರ್ದೇಶಿಸಿವೆ. ಮೂಲಮೂರ್ತಿ ಶಿಲಾನಿರ್ಮಿತಿಯಾದರೆ ಉಳಿದ ನಾಲ್ಕೂ ಲೋಹದವು. ಮೂಲವಿಗ್ರಹದ ಪ್ರತಿಕೃತಿಯೇ ಆಗಿರಬೇಕಾದ ಕೌತುಕಬೇರ ನಿತ್ಯಾರ್ಚನೆಗೆ, ಉತ್ಸವ ರಥೋತ್ಸವಾದಿಗಳಿಗೆ ಉತ್ಸವಬೇರ, ಸ್ನಾನಾಭಿಷೇಕಾದಿಗಳಿಗೇ ಮೀಸಲಾದದ್ದು ಸ್ನಪನಬೇರ ಮತ್ತು ಪರಿವಾರ ದೇವತೆಗಳ ಬಲಿಹರಣಕ್ಕಾಗಿ ಬಲಿಬೇರ ಎನ್ನುವುದಾಗಿ ವಿಧಿಸುತ್ತದೆ. ಹೆಚ್ಚಿನ ಕಡೆಗಳಲ್ಲಿ ಮೂಲಮೂರ್ತಿ ಹಾಗೂ ಉತ್ಸವಮೂರ್ತಿಗಳರಡನ್ನೇ ಕಾಣುತ್ತೇವೆ.

ವೈಖಾನಸಾಗಮವು ನಾಲ್ಕು ವಿಧವಾದ ಧ್ರುವಬೇರಗಳನ್ನು ಉಲ್ಲೇಖಿಸುತ್ತದೆ. ಯೋಗ, ಭೋಗ, ವೀರ ಮತ್ತು ಆಭಿಚಾರಿಕ ಎಂಬ ನಾಲ್ಕು ವಿಧಗಳಿವೆ. ಯೋಗಮೂರ್ತಿಗಳು ವಿಶೇಷವಾಗಿ ಯೋಗಾಭ್ಯಾಸಿಗಳ ಉಪಾಸನೆಗಾಗಿ ರಚನೆಯಾಗಿದೆ. ಈ ವಿಭಾಗಕ್ಕೆ ಸೇರಿದ ವಿಗ್ರಹಗಳನ್ನು ಊರ ಹೊರಗೆ ನಿರ್ಜನವಾದ ಪ್ರದೇಶದಲ್ಲಿ, ಕಾಡಿನಲ್ಲಿ , ಬೆಟ್ಟದ ಮೇಲೆ ಅಥವಾ ನದೀತೀರದಲ್ಲಿ ಪ್ರತಿಷ್ಠಾಪಿಸಬೇಕೆಂದು ಆಗಮಗಳು ವಿಧಿಸುತ್ತವೆ. ಭೋಗಮೂರ್ತಿಗಳು ಜನಸಾಮಾನ್ಯರ ಪೂಜೆಗಾಗಿ, ಅನುಕೂಲಕ್ಕಾಗಿ ಇರುವವು. ಆದ್ದರಿಂದ ಈ ವಿಗ್ರಹಗಳನ್ನು ಊರ ಮಧ್ಯದಲ್ಲಿಡಬೇಕು. ವೀರಮೂರ್ತಿಗಳು ಹೆಸರೇ ಸೂಚಿಸುವಂತೆ ಯಾರಿಗೆ ಶೌರ್ಯದ, ಶಕ್ತಿಯ ಬಯಕೆ, ಕೋರಿಕೆಗಳು ಇವೆಯೋ ಅವರ ಉಪಾಸನಾ ಮೂರ್ತಿಗಳು. ಇವು ಊರ ಗಡಿಭಾಗದಲ್ಲಿ ಇರಬೇಕು. ನಾಲ್ಕನೆಯದಾದ ಆಭಿಚಾರಿಕ ಮೂರ್ತಿಯನ್ನು ಯಕ್ಷಿಣಿಗಾರರು, ಮಂತ್ರವಾದಿಗಳು, ತಾಂತ್ರಿಕರು ಪೂಜಿಸುತ್ತಾರೆ. ಇವನ್ನು ದಟ್ಟವಾದ ಅಡವಿಯ ಮಧ್ಯದಲ್ಲಿ , ಎತ್ತರವಾದ ಪರ್ವತದ ಮೇಲೆ ಇಡಬೇಕಾಗಿ ಆಗಮಗಳು ವಿಧಿಸುತ್ತಿವೆ. ಈ ನಾಲ್ಕೂ ವಿಧಗಳಲ್ಲಿ ಉತ್ತಮ, ಮಧ್ಯಮ, ಆಧಮ ಎಂಬ ಮೂರು ಪ್ರಭೇಧಗಳಿವೆ. ಮತ್ತೆ ಈ ವಿಗ್ರಹಗಳ 'ಸ್ಥಿತಿ-ಗತಿ'ಗಳನ್ನು ಅನುಸರಿಸಿ ಸ್ಥಾನಕ, ಆಸೀನ, ಶಯಾನ ಮತ್ತು ಯಾನಕ ಎಂಬ ನಾಲ್ಕು ವಿಧಗಳಿವೆ. ಸ್ಥಾನಕವೆಂದರೆ ದೇವತಾ ವಿಗ್ರಹವು ನಿಂತಿರುವುದು. ಕುಳಿತಿರುವುದಾದರೆ ಆಸೀನ, ಮಲಗಿರುವ ಮೂರ್ತಿ ಶಯಾನ ಮತ್ತು ವಿಗ್ರಹವು ಚಲನಶೀಲವಾಗಿದ್ದರೆ ಅದನ್ನು ಯಾನಕ ಎಂದು ಕರೆಯುತ್ತಾರೆ.

ಮೂರ್ತಿಲಕ್ಷಣ

'ಪ್ರತಿಮೆಯ ಪ್ರಯೋಜನ ಉಪಾಸಕರಿಗೆ ಆಗಬೇಕಾದರೆ ಅದು ಆಕರ್ಷಕವಾಗಿರಬೇಕು. ಲಕ್ಷಣಭರಿತವಾಗಿರಬೇಕು. ಕಣ್ಣಿಗೂ ಮನಸ್ಸಿಗೂ ಹಿತವಾಗಿರಬೇಕು. ಮನಸ್ಸು ಅಲ್ಲಿ ನೆಲೆಯೂರುವಂತಾಗಬೇಕು. ಪ್ರತಿಮೆಯನ್ನು ರಚಿಸುವಾಗ ಶಿಲ್ಪಿಯಾದವನಿಗೆ ಔಚಿತ್ಯಾನೌಚಿತ್ಯಗಳ ತಿಳಿವಳಿಕೆ ಇರಬೇಕು. ಗುಣ ದೋಷಗಳನ್ನು ಗ್ರಹಿಸಿ ಶಿಲ್ಪವನ್ನು ರಚಿಸಬೇಕು. ಇಲ್ಲವಾದಲ್ಲಿ ಮಾಡಿದವನು ಮಾಡಿಸಿದವರು ಇಬ್ಬರೂ ಕೆಡುತ್ತಾರೆ' ಎನ್ನುವುದು ಮಯಶಾಸ್ತ್ರದಲ್ಲಿನ ಮಾತು. ಈ ಕಾರಣದಿಂದಲೇ ಶಿಲ್ಪಿಯಾದವನಿಗೆ ಮೂರ್ತಿಲಕ್ಷಣದ ವಿವರಗಳು ಹಾಗೂ

ಧ್ಯಾನಶ್ಲೋಕಗಳು ನಿರ್ದೇಶಿತವಾಗಿದೆ. ಮೂರ್ತಿಲಕ್ಷಣದಲ್ಲಿ ತಾಳಮಾನಗಳು, ಭಂಗಿಗಳು, ಆಯುಧಗಳು, ಆಭರಣಾದಿ ವಿವರಗಳನ್ನು ತಿಳಿಸುತ್ತಾರೆ. ಈ ವಿವರಗಳನ್ನು ನಮಗೆ ತಿಳಿದು ಬರುವುದು ಶಿಲ್ಪಶಾಸ್ತ್ರಗಳಿಂದ. ಹಾಗೂ ಕೆಲವು ಮಟ್ಟಿಗೆ ಧ್ಯಾನಶ್ಲೋಕಗಳಿಂದ. ಈ ಲಕ್ಷಣಗಳಲ್ಲಿ ಸಾಮಾನ್ಯ ಹಾಗೂ ವಿಶೇಷ ಲಕ್ಷಣಗಳೆಂಬುದಾಗಿ ವಿಂಗಡಿಸಿಕೊಂಡಿದ್ದಾರೆ.



ತಾಳಮಾನ

ತಾಳಮಾನವೆಂದರೆ ಶಿಲ್ಪದ ಪ್ರಮಾಣವನ್ನೂ, ಅದರ ಅಳತೆಗಳನ್ನು ಸೂಚಿಸುವ ಮಾನದಂಡ. ಶಿಲ್ಪಶಾಸ್ತ್ರದಲ್ಲಿನ ಅಳತೆಗಳು ಕೈ ಅಳತೆಯನ್ನು ಅವಲಂಬಿಸಿ ಆಗಿವೆ. 'ತಲ' ಎನ್ನುವುದಕ್ಕೆ ಹಸ್ತ ಎಂಬ ಅರ್ಥವಿದೆ. ಹಸ್ತಮಾನ ಮತ್ತು ತಾಳಮಾನ ಸಮಾನಾರ್ಥಕ ಪದಗಳೇ ಆಗಿವೆ. ಹಸ್ತವನ್ನು ಹರಡಿದಾಗ ಹಸ್ತದ ಹೆಬ್ಬೆರಳ ತುದಿಯಿಂದ ಮಧ್ಯಬೆರಳ ಕೊನೆಯವರೆಗಿನ ಅಳತೆಯನ್ನು ತಾಳಮಾನ ಎನ್ನುತ್ತಾರೆ. ಅಂಗೈ ಮಣಿಕಟ್ಟಿನಿಂದ ಮಧ್ಯಬೆರಳಿನ ತುದಿಯವರೆಗಿನ ಉದ್ದ ಕೂಡ ತಾಳಮಾನವೇ. ಇವೆರಡೂ ಅಳತೆಯೂ ಒಂದೇ ಆಗಿದೆ. ಈ ಅಳತೆಯ ಮುಖದಲ್ಲಿ ಕೇಶಾಂತದಿಂದ ಚಿಬುಕಾಗ್ರದವರೆಗಿನ (ಗಲ್ಲದ ತುದಿ) ಮುಖದ ಉದ್ದಕ್ಕೆ ಸಮವಾಗಿದೆ. ಇವನ್ನು ಆಧರಿಸಿ ಮಾಡಿಕೊಂಡ ಅಳತೆಯೇ ತಾಳಮಾನ, ಹಸ್ತಮಾನ ಅಥವಾ ಮುಖಮಾನವಾಗಿದೆ. ಶಿಲ್ಪರಚನೆಯಲ್ಲಿ ಈ ಅಳತೆ ಬಹುಮುಖ್ಯವಾದದ್ದು.

ಏಕತಾಳದಿಂದ ಷೋಡಶತಾಳದವರೆಗಿನ ಅಳತೆಯಲ್ಲಿ ಬೇರೆ ಬೇರೆ ಶಿಲ್ಪಗಳ ರಚನೆಯ ಕುರಿತು ಶಾಸ್ತ್ರಗ್ರಂಥಗಳು ತಿಳಿಸುತ್ತವೆ. ಪಂಚತಾಳದಿಂದಾರಂಭಿಸಿ ದಶತಾಳದವರೆಗಿನ ಅಳತೆಯಲ್ಲಿ ಮಾತ್ರ ದೇವತಾಶಿಲ್ಪಗಳನ್ನು ನಿರ್ಮಿಸಬೇಕು.

ಪ್ರತಿಮೆಯ ಅಂಗಾಂಗಗಳ ಅಳತೆಯನ್ನು ಅಳೆಯಲು, ತಿಳಿಯಲು ಇನ್ನೂ ಆರು ವಿಧವಾದ ಅಳತೆಗಳಿವೆ.

ಮಾನ - ಪ್ರತಿಮೆಯ ಎತ್ತರ

ಪ್ರಮಾಣ - ಅಗಲದ ಅಳತೆ

ಉನ್ಮಾನ - ದಪ್ಪದ ಅಳತೆ

ಪರಿಮಾಣ - ಅಂಗಾಂಗಗಳ ಸುತ್ತಳತೆ

ಉಪಮಾನ - ಅಂಗ ಉಪಾಂಗಗಳ ನಡುವಿನ ಅಂತರ

ಲಂಬಮಾನ - ಸೂತ್ರಾಧಾರಿತ ಅಳತೆ.

ಶಿಲ್ಪದ ಇನ್ನುಳಿದ ಮುಖ್ಯವಾದ ವಿವರಗಳು ಭಂಗಿ, ಮುದ್ರೆ, ಹಾಗು ಆಯುಧಗಳು. 'ಭಂಗಿ' ಎನ್ನುವುದು ಶಿಲ್ಪ ಸೌಂದರ್ಯದಲ್ಲಿ ಪ್ರಮುಖವಾದುದು. ಭಂಗವೆಂದರೆ ವಾಲಿರುವುದು, ಬಗ್ಗಿರುವುದು, ವಕ್ರಗೊಂಡಿರುವುದು ಎಂದು. ನಿಯತವಾದ ಪ್ರಮಾಣದಲ್ಲಿ ದೇಹವು ಎಡ, ಅಥವಾ ಬಲಕ್ಕೆ ಬಗ್ಗಿದ್ದರೆ ಶಿಲ್ಪಕ್ಕೊಂದು ಮೆರಗು. ಸಮಭಂಗ (ಅಭಂಗ), ಆಭಂಗ, ದ್ವಿಭಂಗ, ತ್ರಿಭಂಗ, ಅತಿಭಂಗ ಎಂಬ ವಿಧಗಳನ್ನು ಗುರುತಿಸಿಕೊಂಡಿದ್ದಾರೆ. ಸಮಭಂಗವೆಂದರೆ ಕಿರೀಟದಿಂದ ಪಾದದವರೆಗೆ ದೇಹವು ಎಲ್ಲಿಯೂ ಬಗ್ಗಿಲ್ಲ, ದೇಹನೇರವಾಗಿದೆ. ಇಲ್ಲಿ ದೇಹವು ಎಲ್ಲಿಯೂ ಭಂಗವಾಗದೆ ಇರುವುದರಿಂದ ಇದನ್ನು ಅಭಂಗವೆಂದೂ ಕರೆಯುತ್ತಾರೆ. ಇನ್ನು ಆಭಂಗವೆಂದರೆ ದೇಹವು ಸ್ವಲ್ಪ ಮಾತ್ರ ಬಗ್ಗಿರುತ್ತದೆ. ಇದು ಸಮಭಂಗಕ್ಕಿಂತ ಸ್ವಲ್ಪ ಮಾತ್ರವೇ ಭಿನ್ನವಾಗಿ ಕಾಣಿಸಿಕೊಳ್ಳುವ ಭಂಗಿಯಾಗಿದೆ. ದ್ವಿಭಂಗವೆಂದರೆ ದೇಹವು ಎರಡು ಕಡೆ ಬಾಗಿದೆ. ಶಿರಭಾಗವು ಬಗ್ಗಿದರೆ ಅದಕ್ಕನುಗುಣವಾಗಿ ನಡುಭಾಗ ಬಾಗಿರುತ್ತದೆ. ನಡುಭಾಗ ವಕ್ರವಾಗಿದ್ದಲ್ಲಿ ಅದನ್ನನುಸರಿಸಿ ಶಿರವು ವಾಲಿರುತ್ತದೆ. ದೇಹದ ಪ್ರಧಾನಾಂಗಗಳು ಎರಡು ಕಡೆ ವಕ್ರಗೊಂಡಿದ್ದರೆ ಅದು ದ್ವಿಭಂಗ. ದೇಹವು ಮೂರು ಭಾಗದಲ್ಲಿ ಬಗ್ಗಿದ್ದರೆ ಅದು ತ್ರಿಭಂಗ. ಅಂದರೆ ದೇಹವು ಮೂರು ವಕ್ರವಿಶೇಷಗಳನ್ನು ಹೊಂದಿ ನಿಂತಿದೆ. ಇದನ್ನು ಭಂಗಿಗಳಲ್ಲೇ ಅತ್ಯಂತ ಲಾಲಿತ್ಯಪೂರ್ಣವಾದ ಭಂಗಿ ಎನ್ನಬಹುದೇನೋ. ಅತಿಭಂಗವೆಂದರೆ ದೇಹದ ಮೇಲ್ಭಾಗ ಅಥವಾ ಕೆಳಭಾಗ ಒಂದು ಕಡೆ ಬಿಸುಟಂತೆ, ಅತಿಯಾದ ವಾಲುವಿಕೆಯಿಂದ ಕೂಡಿದ್ದು ಈ ವಾಲುವಿಕೆಯಲ್ಲಿ ಒಂದು ವೇಗವನ್ನು ಕೂಡ ನೋಡಬಹುದು. ಸಾಮಾನ್ಯವಾಗಿ ಸಂಹಾರ ಮೂರ್ತಿಗಳು ಈ ಭಂಗಿಯನ್ನು ಹೊಂದಿರುತ್ತದೆ. ಆಕೃತಿ ಸೌಂದರ್ಯ ನಿರೂಪಿಸುವ ಭಂಗಿಗಳು, ಕ್ರಿಯೆಯನ್ನು ಸೂಚಿಸಬಲ್ಲದು, ಲಾಲಿತ್ಯಪೂರ್ಣವಾಗಿ ಕೂಡ ಇರುತ್ತದೆ.



ಸಮಭಂಗ (ಅಭಂಗ)



ದ್ವಿಭಂಗ

ತ್ರಿಭಂಗ

ಅತಿಭಂಗ

ಮುದ್ರೆ

ಹಲವು ವಿಧವಾದ ಹಸ್ತವಿನ್ಯಾಸವೇ ಮುದ್ರೆ. ಇದೂ ಒಂದು ಭಾಷೆ. ಇವು ಏನನ್ನೋ ಸಂಕೇತಿಸುತ್ತಿವೆ. ಭಾವಗಳನ್ನು ಅಭಿವ್ಯಕ್ತಿಸುತ್ತಿವೆ. ಪೂಜೆ, ಶಿಲ್ಪ, ಅಭಿನಯದಿಂದ ನಿತ್ಯವ್ಯವಹಾರದಲ್ಲಿ ಕೂಡ ಮುದ್ರೆಯ ಬಳಕೆಯನ್ನು ಕಾಣಬಹುದು. ಪೂಜೆಯಲ್ಲಾದರೆ ಇದು ದೇವತಾ ಮೂರ್ತಿಗಳನ್ನು ಸಂತೋಷಪಡಿಸುವ ಒಂದು ವಿಧಾನವಾದರೆ, ಶಿಲ್ಪದಲ್ಲಿ ದೇವತಾಮೂರ್ತಿಯು ಸ್ವಭಾವ ಹಾಗೂ ಕ್ರಿಯೆಗಳನ್ನು ತೋರಿಸುತ್ತಿದೆ. ದೈನಂದಿನ ವ್ಯವಹಾರದಲ್ಲಿ ಮಾತಿನ ಧೋರಣೆಯನ್ನು, ನಮ್ಮ ಅಭಿವ್ಯಕ್ತಿಯನ್ನು ಇನ್ನಷ್ಟು ಸ್ಪಷ್ಟಪಡಿಸುವ ರೀತಿಯಾಗಿದೆ. ಶಿಲ್ಪಗಳಲ್ಲಿ ಬಳಸಲ್ಪಡುವ ಮುದ್ರೆಗಳ ಕುರಿತು ನಮಗೆ ಒಂದು ಪೂರ್ವಭಾವಿ ಒಪ್ಪಂದವಿದೆ. ಉದಾಹರಣೆಗೆ ದೇವತಾಮೂರ್ತಿಯು ಅಭಯ ಮುದ್ರೆಯನ್ನು ತೋರುತ್ತಿದ್ದರೆ ಅದು ಭಕ್ತನನ್ನು ಕಾಪಾಡುತ್ತೇನೆಂದು ಸಾಂಕೇತಿಕವಾಗಿ ಸೂಚಿಸುತ್ತಿದೆ. ಸೂಚಿಮುದ್ರೆಯಲ್ಲಿದ್ದರೆ ಹೀಗೆಯೇ ಮಾಡಬೇಕೆಂದು ನಿರ್ದೇಶಿಸುತ್ತಿದೆ. ಇಲ್ಲಿ ಸೂಚೀಮುದ್ರೆಯು ಅಭಯವನ್ನು, ಅಭಯ ಮುದ್ರೆಯು ನಿರ್ದೇಶನದ ಅರ್ಥವನ್ನು ಕೊಡಲಾರದು. ಮುದ್ರೆ ಹಾಗೂ ಅದು ಹೇಳುತ್ತಿರಬಹುದಾದ ಅರ್ಥದ ನಡುವೆ ಸಾತತ್ಯವಿರುವುದರಿಂದ ಅವು ದಿಟವಾಗಿ ಸಂಕೇತಿಸಬಲ್ಲವಾಗಿದೆ; ಸಂಕೇತದಲ್ಲೊಂದು ನಿಖರತೆಯೂ ಇದೆ.

ಮುದ್ರೆಗಳಲ್ಲಿ ಸಂಯುಕ್ತ ಹಾಗೂ ಅಸಂಯುಕ್ತವೆಂಬ ಎರಡು ಬಗೆಗಳಿವೆ. ಎರಡೂ ಹಸ್ತಗಳನ್ನು ಸೇರಿಸಿ ಮಾಡುವ, ತೋರುವ ಮುದ್ರೆಗಳನ್ನು ಸಂಯುಕ್ತವೆಂತಲೂ, ಒಂದೇ ಹಸ್ತದಿಂದ ಮುದ್ರೆಯನ್ನು ಪ್ರಕಟಪಡಿಸಿದರೆ ಅದು ಅಸಂಯುಕ್ತವೆಂದು ಕರೆಸಿಕೊಳ್ಳುತ್ತದೆ.



ದಂಡಹಸ್ತ



ಧರ್ಮಚಕ್ರ



ತರ್ಜನೀ ಹಸ್ತ



ಕರ್ತರೀ ಮುಖ



ವ್ಯಾಖ್ಯಾನ



ಸಿಂಹಕರ್ಣ



ವ್ಯಾಖ್ಯಾನ

ಸೂಚೀಹಸ್ತ



ಅಭಯ



ವರದ

ಕಟಕಹಸ್ತ



ಅಲಪದ್ಮ



ವಿಸ್ಮಯ



ಪಲ್ಲವ



ನಿದ್ರಾಹಸ್ತ



ಅರ್ಧಚಂದ್ರ



ತ್ರಿಪತಾಕ



ತ್ರಿಶೂಲ

ಮುಷ್ಟಿ


ಶಿಖರ


ಭೂಸ್ಪರ್ಶ


ಧನುರ್‌ಹಸ್ತ


ಆಲಿಂಗನ


ತಾಡನ



ಡಮರು

ಅಂಜಲಿ



ಕಟಿಹಸ್ತ

ಊರುಹಸ್ತ



ಗಜಹಸ್ತ



ಗಜಶುಂಡ ಹಸ್ತ



ಡೋಲಾಹಸ್ತ



ಪ್ರಸಾರಿತ ಹಸ್ತ



ಪುಷ್ಪಪುಟ



ಧ್ಯಾನಮುದ್ರೆ

ಆಯುಧ

ದೇವತಾ ಮೂರ್ತಿಗಳಲ್ಲಿ ಎರಡು ಕೈಗಳಿಂದ ಹತ್ತಾರು ಕರಗಳಿರುವ ವಿಗ್ರಹಗಳಿವೆ. ಕರಗಳು ಈ ರೀತಿಯಾಗಿ ಮೈದಳೆದಂತೆ ಶಿರವೂ, ಕಾಲುಗಳೂ ಬೆಳೆಯಲಿಲ್ಲ (ಬ್ರಹ್ಮ, ಹೇರಂಭಗಣಪತಿ ಮುಂತಾದವನ್ನು ಹೊರತುಪಡಿಸಿ). ಸೌಂದರ್ಯದ ದೃಷ್ಟಿಯೂ ಒಂದಿರಬಹುದು. ಇವುಗಳನ್ನು ಎರಡರಿಂದ ನಾಲ್ಕು ಕರಗಳಿರುವ ವಿಗ್ರಹಗಳು ಸಾತ್ವಿಕವೆಂದೂ, 6 ರಿಂದ 8 ಕರಗಳಿರುವ ವಿಗ್ರಹಗಳು ರಾಜಸವೆಂದೂ, ಹತ್ತಕ್ಕೂ ಮೇಲ್ಪಟ್ಟು ಕರಗಳಿದ್ದರೆ ಅವನ್ನು ಉಗ್ರ, ತಾಮಸವೆಂತಲೂ ತಿಳಿಯುತ್ತಾರೆ. ಕೈಗಳು ಹಲವಾದಾಗ ಎಲ್ಲವೂ ಮುದ್ರೆಯನ್ನು ತೋರುತ್ತಿರುವುದಕ್ಕಿಂತ ಕೆಲವು ಗುಣವಿಶೇಷಗಳನ್ನು ನಿರ್ದಿಷ್ಟವಾದ ಆಯುಧಗಳಿಂದ ಸಂಕೇತಿಸುವುದು ನಮ್ಮ ಶಿಲ್ಪಶಾಸ್ತ್ರದ ವೈಶಿಷ್ಟ್ಯ. ಉದಾಹರಣೆಗೆ, ಶಿವನಿಗೆ ತ್ರಿಶೂಲ ಹಾಗೂ ಡಮರು; ವಿಷ್ಣುವಿಗೆ ಶಂಖ, ಚಕ್ರ, ಗದೆಗಳು; ಸರಸ್ವತಿಗೆ ವೀಣೆ, ಪುಸ್ತಕ ಹೀಗೆ ಒಂದೊಂದು ಆಯುಧವೂ ಒಂದೊಂದು ಗುಣವನ್ನು ಪ್ರತಿನಿಧಿಸುತ್ತಿವೆ.



ಪರಶು



ಅಂಕುಶ

ಶುಕ



ಕಪಾಲ



ಅಂಕುಶ



ತ್ರಿಶೂಲ



ಪದ್ಮ



ಘಂಟೆ





ಶಕ್ತಿ



ಗದೆ



ಪತಾಕ



ಪದ್ಮ



ಡಮರು



ದಂಡ



ಗದೆ



ತ್ರಿಶೂಲ

ನಾಗ



ದರ್ಪಣ



ಮೃಗ



ಪಾಶ



ಅಕ್ಷಮಾಲ

ಕುಂಡಿಕ

ಖಡ್ಗ

ಆಭರಣಗಳು

ದೇವತಾಮೂರ್ತಿಗಳು ಸರ್ವಾಂಗ ಸುಂದರವೇನೋ ಆದವು. ಆದರೆ ಅಲೌಕಿಕತೆಗೇನೋ ಕಡಿಮೆ ಇದೆ ಎನ್ನಿಸಿರಬೇಕು. ಸಾಧಾರಣ ನೆಲೆಗೆ ಮೀರಿದ ವಿಶೇಷಗುಣ ಅದರಲ್ಲಿರಬೇಕಲ್ಲವೇ? ಸಾಧರಣಕ್ಕಿಂತ ಭಿನ್ನವಾಗಿಯೂ ಕಾಣಿಸಬೇಕಲ್ಲವೇ? ದೇವತಾಮೂರ್ತಿಯನ್ನು ಅಲಂಕರಿಸಿ ಸರ್ವಾಭರಣಭೂಷ್ಯವನ್ನಾಗಿಸಿದರು. ಇದರಿಂದ ದೇವತಾಮೂರ್ತಿಯ ಸ್ಪಷ್ಟ ನಿರ್ದೇಶನವಾಯಿತು. ಯಾವ ಬಗೆಯ ದೇವತಾ ಮೂರ್ತಿಗೆ ಯಾವ ಬಗೆಯ ಆಭರಣವೆಂದೂ ಕೂಡ ನಿರ್ಣಯಿಸಿಕೊಂಡರು. ವಿಷ್ಣುವು ಕಿರೀಟವನ್ನು ಧರಿಸಿದ್ದರೆ, ಶಿವನಿಗೆ ಜಟೆಯೇ ಮುಕುಟವಾಗಿದೆ. ಪ್ರತಿ ಆಭರಣಗಳಲ್ಲೂ ವೈವಿಧ್ಯ ಮೂಡಿಕೊಂಡಿತು. ಕಿರೀಟದಲ್ಲಿ ಕರಂಡಮುಕುಟ, ಕಿರೀಟಮುಕುಟ, ಗೋಪುರ ಮುಕುಟಗಳೆಂಬ ವಿಧಗಳೂ, ಕಿವಿಯೋಲೆಗಳಲ್ಲಿ ಪತ್ರಕುಂಡಲ, ನಕ್ರಕುಂಡಲ (ಮಕರಕುಂಡಲ), ಸರ್ಪಕುಂಡಲಾದಿ ವಿವರಗಳೂ ಹೀಗೆ ಪ್ರತಿಯೊಂದು ಆಭರಣಗಳಲ್ಲೂ ಒಂದಿಷ್ಟು ವಿಶೇಷ ವೈವಿಧ್ಯಗಳುಂಟಾದುವು. ಮೂರ್ತಿಶಿಲ್ಪದಲ್ಲಿ ಈ ಆಭರಣ ವಿವರಗಳನ್ನೆಲ್ಲ ಶಿಲ್ಪಿಯಾದವನು ತೋರಿಸಿರುತ್ತಾನೆ. ವಸ್ತ್ರವಿನ್ಯಾಸವನ್ನು ಮಾಡಿರುತ್ತಾನೆ. ದೇವತಾ ಪ್ರತೀಕವನ್ನು ಸರ್ವಾಭರಣಭೂಷಿತವನ್ನಾಗಿ ಮಾಡುವುದು ಶಿಲ್ಪಿಯ ಕರ್ತವ್ಯವೂ ಆಗಿದೆ. ಅಂಗ ಪ್ರತ್ಯಂಗಗಳಿಂದ ಆಭರಣ ಭಿನ್ನವಾಗಿ ಕಾಣಬೇಕು. ಆರೋಪಿಸಿದಂತಿರಬೇಕು. ಈ ಎಲ್ಲ ವಿವರವಾಗಿಯೂ ಸುಂದರವಾಗಿಯೂ ಕಾಣಿಸಿರುವಾಗ ಪ್ರತಿಷ್ಠಾಪಿಸಿದ ಬಳಿಕ ಮತ್ತೆ ಅದಕ್ಕೆ ಆಭರಣವನ್ನು ಆರೋಪಿಸುವುದಾಗಲಿ, ವಸ್ತ್ರವನ್ನು ತೊಡಿಸುವ, ಸೀರೆಯನ್ನುಡಿಸುವ ಅಗತ್ಯವೇನೂ ಕಾಣಿಸದು. ಹೀಗೆ ಮಾಡುವುದರಿಂದ ಮೂಲವಿಗ್ರಹದ ಸೌಂದರ್ಯ ಕೆಡುವುದೊಂದಾದರೆ ಅದು ಯಾವ ದೇವತೆಯ ವಿಗ್ರಹವೆಂದು ತಿಳಿಯದಿರುವುದಿನ್ನೊಂದು ತೊಂದರೆ.







ಉಪವೀತ



ಕಟಿವಸ್ತ್ರ

ಎದೆಹಾರ











ಕುಚಬಂಧ

ಕಂಠಿ



ಕಿರೀಟ ಮುಕುಟ





ಭುಜವಲಯ



ಕಟಿಬಂಧ











ಕಟಕ (ಬಳೆ)







ಬಿಗಿತಗಳು










ಪಾದಕಡಗ


ಪಾದವಲಯ
ಪಾದಜಾಲಕ
ಕಾಲುಂಗುರ




ಕಾಲ್ಗಡಗ


ಕಟಿಬಂಧ
ಅರ್ಧಪಟ್ಟಿಕ
ಊರುಧಾಮ



ಧ್ಯಾನಶ್ಲೋಕ

ಏಕವಾಗಿದ್ದು ಅನೇಕ ದೇವತೆಗಳಾಗಿ ತೋರಿಕೊಂಡ ಶಕ್ತಿಯನ್ನು ಉಪಾಸನೆಗಾಗಿ ಪ್ರತೀಕವೊಂದರಲ್ಲಿ, ಮೂರ್ತಿಯಲ್ಲಿ ಕಾಣುವುದಾದರೆ, ಒಂದೊಂದು ದೇವತೆಗೂ ನಿರ್ದಿಷ್ಟವಾದ ಧ್ಯಾನಶ್ಲೋಕವಿದ್ದು ಆ ಧ್ಯಾನ ಶ್ಲೋಕದ ವಿವರಗಳಿಂದ ದೇವತೆಯ ಆಕಾರವನ್ನು ಮೂರ್ತಿಕರಿಸುವುದನ್ನು ಒಂದು ವಿಧಾನವಾಗಿ ಶಾಸ್ತ್ರ ತಿಳಿಸುತ್ತದೆ. ಅಮೂರ್ತವಾದುದನ್ನು ಮೂರ್ತದಲ್ಲಿ ಕಾಣುವ ಬಯಕೆ ಉಪಾಸಕನಿಗಿದೆ. ಜಡವೊಂದರ ಮಿತಿಯಲ್ಲಿ ಚೇತನವನ್ನು ನೋಡಬೇಕು. ಮೂರ್ತಸ್ವರೂಪದ ದೀಪದಿಂದ ಅಂತರಂಗಕ್ಕೊಂದು ಬೆಳಕೂ, ಬಹಿರಂಗದಲ್ಲಿ ಶಾಖವೂ ಒದಗಬೇಕಾಗಿದೆ. ಅಂತರಂಗದ ವ್ಯಾಪಾರ ಬಹಿರಂಗವಾಗಿಯೂ, ಬಹಿರಂಗದ ವ್ಯವಹಾರ ಅಂತರಂಗದಲ್ಲಿಯೂ ಮನಸ್ಸಿಗೆ ಹಿತವನ್ನುಂಟುಮಾಡುವಂತಿರಬೇಕು. ಮನಸ್ಸು ಅದರಲ್ಲಿ ನೆಲೆಯೂರುವಂತಿರಬೇಕು. ಇಂತಹ ಶಿಲ್ಪವೊಂದನ್ನು ರಚಿಸಬೇಕಾದರೆ ಶಿಲ್ಪಿಯ ಅಂತಸ್ಥವಾದ ಸಂಸ್ಕಾರ ಪರಿಶುದ್ಧವಾಗಿರಬೇಕು. ಅಂತಹ ಶಿಲ್ಪದ ಲಕ್ಷಣಗಳನ್ನು ಆತ ತಿಳಿದು ಶಿಲ್ಪ ರಚಿಸಬೇಕು. ಈ ಮೂರ್ತಿ ಲಕ್ಷಣಗಳ ವಿವರಗಳು ಧ್ಯಾನಶ್ಲೋಕಗಳಿಂದಲೂ ಲಭ್ಯ.

'ಧ್ಯಾನ' ಎನ್ನುವುದು 'ಧ್ಯೈ ಚಿಂತಾಯಾಮ್' ಎಂಬ ಧಾತು ಮೂಲವಾಗಿದೆ. ಒಂದರ ಕುರಿತು ಚಿಂತನೆ ನಡೆಸುವುದು, ಆಲೋಚಿಸುವುದು, ಮತ್ತೆ ಮತ್ತೆ ಮನನ ಮಾಡಬೇಕಾದುದು ಎಂದರ್ಥವಿದೆ. ಇಲ್ಲಿ ಧ್ಯಾನ ಮಾಡಬೇಕಾದವನು ಶಿಲ್ಪಿ, ಧ್ಯಾನಿಸುವುದು ಏನನ್ನು ಎಂದರೆ ಇವೇ ಧ್ಯಾನಶ್ಲೋಕಗಳನ್ನು ಇವು ಸಂಸ್ಕೃತಶ್ಲೋಕ ರೂಪದಲ್ಲಿದ್ದು ನಿರ್ದಿಷ್ಟವಾದ ದೇವತೆಯು ಹೊಂದಿರಬಹುದಾದ ಅಥವಾ ಅಳವಡಿಸಿರುವ ವಿವರಗಳನ್ನೊಳಗೊಂಡಿರುತ್ತವೆ. ದೇವತಾ ಮೂರ್ತಿಯ ವರ್ಣ, ದೇಹಭಂಗಿ, ಶಿರಗಳೆಷ್ಟು, ಕರಗಳೆಷ್ಟು, ಆಯುಧಗಳು, ವಾಹನ ವಿವರ, ಆಭರಣ ಕೇಶವಿನ್ಯಾಸಾದಿ ವಿವರ, ತಾಳಮಾನಗಳು, ಹಾಗೂ ಪರಿವಾರ ದೇವತೆಗಳಿದ್ದರೆ ಆ ವಿವರಗಳನ್ನೊಳಗೊಂಡಿರುತ್ತದೆ, ಸಾಂದರ್ಭಿಕವಾಗಿ ಸನ್ನಿವೇಶಗಳ ವಿವರಣೆಯೂ ಇದೆ. ಈ ಧ್ಯಾನಶ್ಲೋಕಗಳನ್ನು ಶಿಲ್ಪಿಯಾದವನು ಧ್ಯಾನಿಸುತ್ತಿರಬೇಕು. ಯಾವ ದೇವತೆಯ ವಿಗ್ರಹವನ್ನು ರಚಿಸಬೇಕೋ ಅದರ ವಿವರಗಳಿರುವ ಧ್ಯಾನಶ್ಲೋಕಗಳನ್ನು ಶಿಲ್ಪಿಯು ಮನನ ಮಾಡುತ್ತಿದ್ದಲ್ಲಿ ಆ ದೇವತಾ ವಿವರಗಳೆಲ್ಲ ಮನಸ್ಸಿನಲ್ಲಿ ಬಿಚ್ಚಿಕೊಂಡು ದೇವತಾ ಕಲ್ಪನೆ ಸ್ಫುಟವಾಗಿ ಮೈದಳೆಯುತ್ತದೆ. ಶಿಲ್ಪಿಯ ಮನಸ್ಸಿಗೆ ಗೋಚರಿಸಿದ ಸ್ಪಷ್ಟಚಿತ್ರಣ ಅವನು ಮೂರ್ತೀಕರಿಸಲು ಆಯ್ಕೆಮಾಡಿಕೊಂಡ ಮಾಧ್ಯಮದಲ್ಲಿ ಕಾಣುವಂತಾಗಬೇಕು. ಶಿಲ್ಪಿಯಾದವನಿಗೆ ಯಾವ ಪರಿಕರಗಳ ಸಹಾಯವಿಲ್ಲದೇ ಮೂರ್ತಿರಚಿಸಬೇಕಾದ ಶಿಲೆಯಲ್ಲಿ ದೇವತಾರೂಪವನ್ನು ಕಾಣುವಂತಾಗಬೇಕು. ಶಿಲೆಯಲ್ಲಿನ ದೇವತಾರೂಪವಲ್ಲದ ಭಾಗವನ್ನು ತೆಗೆದರೆ ಶಿಲ್ಪ ಸ್ಫುಟವಾಗಿ ಮೈದಳೆಯುತ್ತದೆ.

ದೇವತೆಯಾಗದವನು ದೇವತೆಯನ್ನು ಪೂಜಿಸಬಾರದೆಂಬ ನಿಯಮವಿದೆ. ಇದು ಶಿಲ್ಪಿಗೂ ಅನ್ವಯಿಸುವ ಮಾತಾಗಿದೆ. ಶಿಲ್ಪರಚನೆಯ ಕಾಲದಲ್ಲಿ ಶಿಲ್ಪಿ ದೇವತೆಯ ಕುರಿತಾದ ಆಲೋಚನೆಯಲ್ಲೇ ಇದ್ದರೆ ಅದೇ

ಅವನಿಗೊಂದು ಸಂಸ್ಕಾರವನ್ನು ನೀಡಿ ದೈವತ್ವವನ್ನು ಆರೋಪಿಸಿ ಕೊಡಬಲ್ಲದು. ಧ್ಯಾನಶ್ಲೋಕಗಳ ಮನನ ಇದಕ್ಕೆ ಸಹಾಯಕವಾಗಬಲ್ಲದು. ದೇವತಾ ಪ್ರತೀಕವೆನಿಸಿಕೊಳ್ಳುವ ವಸ್ತುವನ್ನು ಮೂರ್ತಿಯಾಗಿಸುವ ಮೊದಲು ಯಾವ ರೀತಿ ಸಂಸ್ಕರಿಸುತ್ತೆವೆಯೋ ಅದೇ ರೀತಿ ಶಿಲ್ಪಿಯಾದವನೂ ಸಹ ಸಂಸ್ಕಾರಕ್ಕೊಳಪಡಬೇಕು.

ಧ್ಯಾನಶ್ಲೋಕಗಳು ಶಿಲ್ಪರಚನೆಗೆ ಪೂರಕವಾದ ಒಂದು ಮಾರ್ಗವಷ್ಟೇ. ಇಲ್ಲಿಯೂ ಒಂದು ಮಿತಿಯೆಂಬುದು ಇದ್ದೇ ಇದೆ. ಎಲ್ಲ ವಿವರಗಳನ್ನು ಧ್ಯಾನಶ್ಲೋಕದಲ್ಲೇನೂ ಕಾಣಲಾರೆವು. ಮೂರ್ತಿಯ ಬಾಹ್ಯಲಕ್ಷಣದ ಹೊರತಾದ ವಿವರಗಳು ಕಾಣುವುದು ಕಡಿಮೆಯೇ. ಅಂತಮೂರ್ತಿಯ ಭೇದಗಳನ್ನು ಸೂಕ್ಷ್ಮವಾಗಿ ಹೇಳುತ್ತಿಲ್ಲ, ಸ್ಥೂಲವಾದ ನಿರ್ದೇಶನ ಮಾತ್ರವಿದೆ. ಎಲ್ಲ ವಿವರಗಳೂ ಶ್ಲೋಕದಲ್ಲಿ ಇರಬೇಕಾಗಿಯೂ ಇಲ್ಲ. ಪ್ರತಿಧ್ಯಾನಶ್ಲೋಕದಲ್ಲೂ ಶಿಲ್ಪವು ಸುಂದರವಾಗಿರಬೇಕು, ಅಂಗಪ್ರತ್ಯಂಗಗಳನ್ನು ಹೊಂದಿರಬೇಕೆಂದೇನೂ ಹೇಳುವುದಿಲ್ಲ, ಹೇಳಬೇಕಾಗಿಯೂ ಇಲ್ಲ. ಇವೆಲ್ಲ ಸಾಮಾನ್ಯ ವಿವರಗಳು, ಎಲ್ಲ ದೇವತೆಗಳಲ್ಲೂ ಇರಬೇಕಾದದ್ದೇ. ಇಷ್ಟರ ಹೊರತಾದ ವಿಶೇಷ ವಿವರ, ಲಕ್ಷಣಗಳಿದ್ದಲ್ಲಿ ಅವುಗಳನ್ನು ಶ್ಲೋಕಗಳಿಂದ ತಿಳಿಯಬಹುದು.

ಎಲ್ಲವನ್ನು ಧ್ಯಾನಶ್ಲೋಕಗಳ ನಿರ್ದೇಶನದಂತೆ ಮಾಡುವುದಾದಲ್ಲಿ ಶಿಲ್ಪಿಯ ಕೆಲಸವೇನು, ಅವನ ಸ್ವಾತಂತ್ರ್ಯದ ಗತಿಯೇನೆಂಬ ಪ್ರಶ್ನೆ ಏಳಬಹುದು. ಶ್ಲೋಕಗಳ ವಿವರಗಳಿಗೆ ಹೊರತಾದ ವಿಗ್ರಹವನ್ನು ರಚಿಸಲೇಬಾರದೆಂಬ ನಿಯಮವನವನ್ನೇನೂ ವಿಧಿಸುತ್ತಿಲ್ಲ. ಶಿಲ್ಪಿಗೆ ಆ ಸಾಮರ್ಥ್ಯ, ಪ್ರತಿಭೆ, ವ್ಯುತ್ಪತ್ತಿ, ದರ್ಶನಗಳಿದ್ದರೆ ರಚಿಸಲೇನಡ್ಡಿಯಿಲ್ಲ. ಹಲವು ಶ್ಲೋಕಗಳನ್ನು ವಿವರಗಳನ್ನು ರಚಿಸಿದವರು, ನೀಡಿದವರು ಶಿಲ್ಪಾಚಾರ್ಯರು ಹಾಗೂ ಶಿಲ್ಪಿಗಳೇ ಆಗಿದ್ದಾರೆ. ಇಲ್ಲಿ ಶಿಲ್ಪಿಯಾದವನ ಕಾರ್ಯವೇನೂ ಕಡಿಮೆಯಾದುದೇನಲ್ಲ. ಶಾಬ್ದಿಕ ವಿವರಗಳಿರುವ ಶ್ಲೋಕಗಳನ್ನು ರೂಪಕ್ಕೆ ಅನ್ವಯಮಾಡಿ ಅದರಲ್ಲೊಂದು ಅಲೌಕಿಕತೆ ಮೂಡುವಂತೆ ಮಾಡುವುದು ಶಿಲ್ಪಿಯ ಕಾರ್ಯವೇ ಆಗಿದೆ. ಧ್ಯಾನ ಶ್ಲೋಕಗಳ ಜೊತೆ ಶಿಲ್ಪಿಯ ಪ್ರತಿಭೆಯು ಮೇಳವಿಸಿದರೆ ಶಿಲ್ಪವು ದಿಟವಾಗಿ ಮೆರಗನ್ನು ಪಡೆಯುತ್ತದೆ.

ಧ್ಯಾನ ಶ್ಲೋಕಗಳು ಸಾವಿರಾರು. ಒಂದೇ ದೇವತೆಗೆ ಹಲವು ಶ್ಲೋಕಗಳಿವೆ. ದೇವತೆಯ ರೂಪ ಭೇದವನ್ನು ಅವಲಂಬಿಸಿವೆ. ಒಂದು ಶ್ಲೋಕದಲ್ಲಿಲ್ಲದ ವಿವರ ಇನ್ನೊಂದರಲ್ಲಿರಬಹುದು. ದೀರ್ಘವಾದ ಧ್ಯಾನ ಶ್ಲೋಕಗಳೂ ಇಲ್ಲದಿಲ್ಲ. ಈ ಧ್ಯಾನಶ್ಲೋಕಗಳಲ್ಲಿ ಕೆಲವನ್ನು ಮಾತ್ರ ಆಯ್ಕೆ ಮಾಡಿಕೊಂಡು ಮುಂದೆ ಕೊಡಲಾಗಿದೆ.

ಪಂಚಾಯತನ ಪೂಜಾವಿಧಾನವು ಪೂಜಾ ಕ್ರಮದಲ್ಲೊಂದು ವಿಧ. ಪ್ರಸ್ತುತದಲ್ಲಿ ಅದೇ ಕ್ರಮವನ್ನು ಮುಂದುವರಿಸಿ ಐದು ಪ್ರಧಾನ ದೇವತೆಗಳು ಹಾಗೂ ಅವುಗಳ ಪ್ರಭೇದಗಳು, ಅವತಾರ

ವಿಶೇಷಗಳಗನುಗುಣವಾದ ಧ್ಯಾನಶ್ಲೋಕಗಳು, ವಿವರಣೆ ಹಾಗೂ ಚಿತ್ರಗಳನ್ನು ಕೊಡಲಾಗಿದೆ. ಇವುಗಳ ಜೊತೆಯಲ್ಲಿ ಕೆಲವು ಪರಿವಾರ ದೇವತೆಗಳ ವಿವರಗಳನ್ನು ಕೊಡಲಾಗಿದೆ.

ಚಿತ್ರ ಹಾಗೂ ಶಿಲ್ಪಗಳ ನಡುವಿನ ಸಂಬಂಧ ಅವಿನಾಭಾವವಾದದ್ದು. ವಿಷ್ಣುಧರ್ಮೋತ್ತರಪುರಾಣದಲ್ಲಿ ಮಾರ್ಕಂಡೇಯನು ವಜ್ರರಾಜನಿಗೆ ಹೇಳಿರುವ ಮಾತು ತುಂಬ ಪ್ರಸಕ್ತವಾದದ್ದು. ವಜ್ರನು ದೇವತಾರೂಪ ನಿರ್ಮಾಣವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಮಾರ್ಕಂಡೇಯನು ಚಿತ್ರಸೂತ್ರವನ್ನು ತಿಳಿಯದ ಹೊರತು ಪ್ರತಿಮಾಲಕ್ಷಣಗಳನ್ನು ಹೇಳಲಾಗದು ಎನ್ನುತ್ತಾನೆ. ಚಿತ್ರಸೂತ್ರವನ್ನು ಅರುಹು ಎಂದು ಕೇಳಿದಾಗ ನೃತ್ಯಶಾಸ್ತ್ರದ ಅರಿವಿಲ್ಲದೇ ಚಿತ್ರಕರ್ಮ ತಿಳಿಯದು ಎನ್ನುತ್ತಾನೆ. ನೃತ್ಯದಿಂದ ವಾದ್ಯವಾದನಗಳು, ಅದರಿಂದ ಗಾಯನ ಹೀಗೆ ಒಂದರಿಂದ ಇನ್ನೊಂದರ ಸಂಬಂಧ, ಆಲಂಬನೆಯನ್ನು ತಿಳಿಸುತ್ತಾನೆ. ಇಲ್ಲಿ ಒಂದು ಶಾಸ್ತ್ರದಿಂದ ಇನ್ನೊಂದರ ಸಂಬಂಧ, ಸಾಮರಸ್ಯಗಳು ಗಮನಾರ್ಹ ಅಂಶವಾಗಿವೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಚಿತ್ರದ ಜೊತೆ ನೇರವಾದ ಸಂಬಂಧ ಶಿಲ್ಪಕ್ಕಿದೆ. ಎಲ್ಲಕ್ಕೂ ಬುನಾದಿಯಾಗಿರುವುದು ರೇಖಾಚಿತ್ರವೇ ಆಗಿದೆ. ಚಿತ್ರವಿರಲಿ ಶಿಲ್ಪವಿರಲಿ ಮೊದಲು ರೇಖಾಚಿತ್ರವಾಗಿಯೇ ಮೂಡಿಕೊಳ್ಳಬೇಕು. ಶಿಲ್ಪಿಯಾದವನ ಕಲ್ಪನೆ ಮೈದಳೆದು ಬರುವುದು ಮೊದಲು ಸಹಜವಾದ ರೇಖೆಗಳಲ್ಲೇ ಆಗಿದೆ. ಮುಂದೆ ಅದನ್ನು ಬೇಕಾದ ಮಾಧ್ಯಮದಲ್ಲಿ ಪರಿಕರಗಳ ನೆರವಿನಿಂದ ಶಿಲ್ಪ ಅಥವಾ ಚಿತ್ರವಾಗಿಸಬಹುದು.

ಹಲವು ವಿವರಣೆಗಳು ನೀಡಲಾದ ಚಿತ್ರಣವನ್ನು ಒಂದು ಚಿತ್ರ ನೀಡಬಹುದಷ್ಟೆ? ಪ್ರಸ್ತುತದಲ್ಲಿ ದೇವತಾ ಧ್ಯಾನಶ್ಲೋಕ, ಅದರ ವಿವರಣೆಗಳ ಜೊತೆ ಅದಕ್ಕನುಗುಣವಾದ ಚಿತ್ರಗಳನ್ನು ಕೊಡಲಾಗಿದೆ. ಇವು ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಗಳಾಗಿದ್ದು, ರೇಖಾಪ್ರಧಾನವಾದ ವರ್ಣಚಿತ್ರಗಳಾಗಿವೆ. ಈ ಚಿತ್ರಗಳಲ್ಲಿನ ರೇಖೆಗಳ ನವುರು, ಲಾಲಿತ್ಯ, ಗೆರೆಗಳ ಓಟ, ರೇಖೆಗಳ ಖಚಿತೆ ಇವು ದಿಟವಾಗಿ ಚಿತ್ರದ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರೇರಣೆಯಿಂದ, ಆದೇಶದಂತೆ ರಚನೆಯಾದ ಚಿತ್ರಗಳು. ಇವು ಧ್ಯಾನಶ್ಲೋಕಗಳಿಗನುಗುಣವಾಗಿ ಒಡಮೂಡಿದ ಚಿತ್ರಗಳೇ ಆಗಿದೆ. ಇಲ್ಲಿನ ಚಿತ್ರದ ಚೌಕಟ್ಟು ಸಾಂಪ್ರದಾಯಿಕ ಹಾಗೂ ವಿಷಯ ದೇವತಾ ಮೂರ್ತಿಗಳೇ ಆಗಿವೆ. ಆಸ್ಥಾನವಿದ್ವಾಂಸರು ಚಿತ್ರಗಾರರಿಗೆ ಧ್ಯಾನಶ್ಲೋಕಗಳನ್ನು ಒದಗಿಸಿದರೆಂಬ ಉಲ್ಲೇಖವಿದೆ. ಈ ಚಿತ್ರಗಳಲ್ಲಿ ಚಿತ್ರಗಾರನ ಸ್ವಾತಂತ್ರ್ಯ ಹಾಗೂ ಕೌಶಲಗಳೆರಡನ್ನೂ ನೋಡಬಹುದು. ಇವುಗಳ ಜತೆ ಸಂಪ್ರದಾಯ ಶಿಲ್ಪದ ರೇಖಾಚಿತ್ರಗಳನ್ನು ಕೊಡಲಾಗಿದೆ. ಶಿಲ್ಪಿಗಳಿಗೆ ಆಸರೆಯಾಗಿ, ಆಕರವಾಗಿ ಪ್ರೇರಣೆ ನೀಡಬಹುದೆಂದು ಈ ಚಿತ್ರಗಳನ್ನು ಕೊಡಲಾಗಿದೆ.

'ಶಾಸ್ತ್ರಮಾನೇನ ಯೋ ರಮ್ಯಃ ಸರಮ್ಯೋ ನಾನ್ಯ ಏವ ಹಿ'. ಇದೇ ಸಂಪ್ರದಾಯ ಶಿಲ್ಪದ ದೃಷ್ಟಿಯಲ್ಲವೆ?

✤ ✤ ✤



1. ಗಣಪತಿ

ಗಣಪತಿಯು ಬಹುಜನಪ್ರಿಯನಾದ ದೇವತೆ. ಎಲ್ಲರನ್ನೂ ಒಂದಲ್ಲ ಒಂದು ರೀತಿಯಿಂದ ತನ್ನತ್ತ ಸೆಳೆದುಕೊಂಡವನು. ಕಲಾವಿದರಿಂದ ಮೊದಲುಗೊಂಡು ತಂತ್ರಸಾಧಕರವರೆಗೆ ಗಣೇಶನ ಆಕರ್ಷಣೆ ಬಹುವಿಧವಾದದ್ದು. ವಿಘ್ನನಿವಾರಕನೆಂದೋ, ಕ್ಷಿಪ್ರದಾಯಕನೆಂದೋ ಅಥವಾ ವಿಚಿತ್ರವಾದ, ವಿಲಕ್ಷಣವಾದ, ವಿಶೇಷವಾದ ಆಕಾರದಿಂದಲೋ ಆಕರ್ಷಣೆಗೊಂಡೋ ಒಂದಲ್ಲ ಒಂದು ಕಾರಣದಿಂದ ಎಲ್ಲರೂ ಗಣಪತಿಯನ್ನು ಆಶ್ರಯಿಸಿದವರೇ.

ಹಲವಾರು ಪುರಾಣಗಳಲ್ಲಿ ಗಣಪತಿಯ ಉಲ್ಲೇಖವಿದ್ದರೂ ಮುದ್ಗಲ ಪುರಾಣವೆನ್ನುವ ಗ್ರಂಥವೊಂದು ಗಣೇಶನ ಹಿರಿಮೆಯಷ್ಟನ್ನೇ ಒಳಗೊಂಡಿದೆ. ಇದು ಒಂದು ಉಪಪುರಾಣ. ಒಂಬತ್ತು ಖಂಡಗಳಿಂದ ಕೂಡಿದೆ. ಈ ಗ್ರಂಥದಲ್ಲಿ ಮೂವತ್ತೆರಡು ವಿಧದ ಗಣಪತಿಯನ್ನು ಉಲ್ಲೇಖಿಸುತ್ತಾರೆ. ಶಿಲ್ಪದಲ್ಲಾಗಲೀ, ಪೂಜೆಯಲ್ಲಾಗಲೀ ವಿಶೇಷವಾಗಿ ಬಳಕೆಯಲ್ಲಿರುವ ರೂಪಗಳು ಕೆಲವು. ಪ್ರಸ್ತುತ ಈ 32 ವಿಧವಾದ ಗಣಪತಿಯ ಧ್ಯಾನಶ್ಲೋಕಗಳಲ್ಲಿ ವಿವರಗಳೂ ಹಾಗೂ ಚಿತ್ರಗಳನ್ನು ಕೊಡಲಾಗಿದೆ.

1. ಬಾಲಗಣಪತಿ

ಕರಸ್ಥ ಕದಲೀ ಚೂತಪನಸೇಕ್ಷುಕ ಮೋದಕಂ ।
ಬಾಲಸೂರ್ಯನಿಭಂ ವಂದೇ ದೇವಂ ಬಾಲಗಣಾಧಿಪಂ ॥

ನಾಲ್ಕು ಕೈಗಳು; ಕ್ರಮವಾಗಿ ಮಾವಿನಹಣ್ಣು, ಮಾವಿನ ಚಿಗರು, ಕಬ್ಬಿನ ಜಲ್ಲೆ, ಮೋದಕಗಳಿವೆ. ಎಳೆಯ ಸೂರ್ಯನಂತೆ ಬೆಳಗುವವನು ಬಾಲಗಣಪತಿ ಎಂದಿದ್ದಾರೆ. ರಕ್ತವರ್ಣದವನಾಗಿದ್ದಾನೆ.



ಬಾಲಗಣಪತಿ

ಬಾಲಗಣಪತಿ

ತರುಣಗಣಪತಿ

2. ತರುಣಗಣಪತಿ

ಪಾಶಾಂಕುಶಾಪೂಪಕಪಿತ್ಥ ಜಂಬೂ-
ಸ್ವದಂತ ಶಾಲೀಕ್ಷುಮಪಿ ಸ್ವಹಸ್ತೈಃ ।
ಧತ್ತೇ ಸದಾ ಯಸ್ತರುಣಾರುಣಾಭಃ
ಪಾಯಾತ್ಸ ಯುಷ್ಮಾಂಸ್ತರುಣೋ ಗಣೇಶಃ ॥

ಎಂಟು ಕೈಗಳು, ಕ್ರಮವಾಗಿ ತನ್ನ ದಾಡೆ, ಕಬ್ಬಿನ ಜಲ್ಲೆ, ಅಪೂಪ, ಅಂಕುಶ, ಪಾಶ, ಕಪಿತ್ಥ (ಬೇಲದಕಾಯಿ) ಭತ್ತದ ತೆನೆ, ಜಂಬುಫಲಗಳಿವೆ. ಸೂರ್ಯನುದಯಿಸುವ ಮೊದಲು ಕಾಣಿಸಿಕೊಳ್ಳುವ ಕೆಂಪು ಬಣ್ಣದವನು.



ತರುಣಗಣಪತಿ

3. ಭಕ್ತಗಣಪತಿ

ನಾಳಿಕೇರಾಮ್ರಕದಲೀಗುಡಪಾಯಸಧಾರಿಣಂ ।
ಶರಚ್ಚಂದ್ರಾಭವಪುಷಂ ಭಜೇ ಭಕ್ತಗಣಾಧಿಪಂ ॥

ನಾಲ್ಕು ಕೈಗಳು; ಕ್ರಮವಾಗಿ ತೆಂಗಿನಕಾಯಿ, ಮಾವಿನಹಣ್ಣು, ಬಾಳೆಯ ಹಣ್ಣು, ಪಾಯಸ ತುಂಬಿದ ಪಾತ್ರೆಯಿದೆ. ಭಕ್ತವೆಂದರೆ ಅನ್ನ, ಆಹಾರ, ಕೈಗಳಲ್ಲಿ ಕೇವಲ ಆಹಾರ ಪದಾರ್ಥಗಳೇ ಇರುವುದರಿಂದ ಭಕ್ತ ಗಣಪತಿಯಾಗಿದ್ದಾನೆ. ಶ್ವೇತವರ್ಣದವನಾಗಿದ್ದಾನೆ.



ಭಕ್ತಗಣಪತಿ

ಭಕ್ತಗಣಪತಿ

4. ವೀರಗಣಪತಿ

ವೇತಾಲಶಕ್ತಿಶರಕಾರ್ಮುಕಚಕ್ರಖಡ್ಗ
ಖಟ್ವಾಂಗಮುದ್ಗರಗದಾಂಕುಶನಾಗಪಾಶಾನ್
ಶೂಲಂ ಚ ಕುಂತಪರಶುಧ್ವಜಮುದ್ವಹಂತಂ
ವೀರಂ ಗಣೇಶಮರುಣಂ ಸತತಂ ಸ್ಮರಾಮಿ ॥

ಹದಿನಾರು ಕೈಗಳು; ಕ್ರಮವಾಗಿ ತ್ರಿಶೂಲ, ಬೇತಾಳ, ಖಟ್ವಾಂಗ (ಮೂಳೆಯ ಕಡ್ಡಿಗೆ ತಲೆಬುರುಡೆಯನ್ನು ಸಿಕ್ಕಿಸಿ ಮಾಡಿದ ಆಯುಧ), ಕೊಡಲಿ, ಬಾಣ, ಖಡ್ಗ ಚಕ್ರ, ಅಂಕುಶ, ಪಾಶ, ಗದೆ, ಕುಂತ ಅಥವಾ ಶಕ್ತ್ಯಾಯುಧ, ನಾಗಪಾಶ, ಮುದ್ಗರ, ಧ್ವಜ, ಧನಸ್ಸು, ಘಂಟೆ ಅಥವಾ ಡಮರುಗಳಿವೆ. ಈ ಆಯುಧಗಳು ವೀರೋತ್ಸಾಹದ ಸೂಚಕವಾದ್ದರಿಂದ ಇವನ್ನು ಧರಿಸಿದವನಾಗಿ ವೀರಗಣಪತಿಯಾಗಿದ್ದಾನೆ. ರಕ್ತವರ್ಣದವನು.



ವೀರಗಣಪತಿ

ವೀರಗಣಪತಿ

5. ಶಕ್ತಿಗಣಪತಿ

ಆಲಿಂಗ್ಯ ದೇವೀಂ ಹರಿತಾಂಗಯಷ್ಟಿಂ
ಪರಸ್ಪರಾಶ್ಲಿಷ್ಟ ಕಟಿಪ್ರದೇಶಂ
ಸಂಧ್ಯಾರುಣಂ ಪಾಶಸೃಣೀ ವಹಂತಂ
ಭಯಾಪಹಂ ಶಕ್ತಿ ಗಣೇಶಮೀಡೆ ॥

ನಾಲ್ಕು ಕೈಗಳು; ಕ್ರಮವಾಗಿ ಅಭಯ ಮುದ್ರೆ, ಅಂಕುಶ, ಪಾಶ ಮತ್ತು ಇನ್ನೊಂದು ಕೈಯಲ್ಲಿ ದೇವಿಯನ್ನು ಸೊಂಟವನ್ನು ಬಳಸಿಬಂದಿದೆ. ದೇವಿಯನ್ನು ತನ್ನ ಎಡತೊಡೆಯ ಮೇಲೆ ಕೂಡಿಸಿಕೊಂಡು ಸುಖಾಸೀನನಾಗಿ ಕುಳಿತಿದ್ದಾನೆ. ಸೊಂಡಿಲಿನಲ್ಲಿ ದೇವಿಯ ಒಂದು ಸ್ತನವನ್ನು ಹಿಡಿದಿದ್ದಾನೆ. ಗಣಪತಿಯು ಸಂಜೆಯ ನಸುಗೆಂಪಿನ ವರ್ಣದವನು. ದೇವಿಯು ಹಸಿರು ಬಣ್ಣದವಳು.



ಶಕ್ತಿಗಣಪತಿ

ಶಕ್ತಿಗಣಪತಿ

6. ದ್ವಿಜಗಣಪತಿ

ಯಂ ಪುಸ್ತಕಾಕ್ಷಗುಣದಂಡಕಮಂಡಲು ಶ್ರೀ
ವಿದ್ಯೋತಮಾನಕರ ಭೂಷಣಮಿಂದುವರ್ಣಂ ।
ಸ್ತಂಬೇರಮಾನನ ಚತುಷ್ಟಯ ಶೋಭಮಾನಂ
ತ್ವಾಂ ಯಃ ಸ್ಮರೇದ್ವಿಜಗಣಾಧಿಪತೇ ಸ ಧನ್ಯಃ ॥

ನಾಲ್ಕು ಕರಗಳು ; ಕ್ರಮವಾಗಿ ಅಕ್ಷಮಾಲೆ, ಕಮಂಡಲು, ದಂಡ ಹಾಗೂ ಪುಸ್ತಕಗಳಿವೆ. ನಾಲ್ಕು ಶಿರಗಳಿವೆ. ಚತುರ್ಮುಖ ಬ್ರಹ್ಮನ ಗುಣ ವಿಶೇಷಗಳನ್ನು ಅಳವಡಿಸಿಕೊಂಡ ರೂಪ ಇದು. ಇಲ್ಲಿ ದ್ವಿಜ ಎಂದರೆ ಬ್ರಹ್ಮನಾಗಿದ್ದಾನೆ. ಗಣಪತಿಯು ಬಿಳಿಯ ಬಣ್ಣದವನು.



ದ್ವಿಜಗಣಪತಿ

ದ್ವಿಜಗಣಪತಿ

7. ಸಿದ್ಧಿಗಣಪತಿ

ಪಕ್ವಚೂತಫಲಪುಷ್ಪಮಂಜರೀ
ಚೇಕ್ಷುದಂಡತಿಲಮೋದಕೈಸ್ಸಹ ।
ಉದ್ವಹನ್ ಪರಶುಮಸ್ತುತೇ ನಮಃ
ಶ್ರೀ ಸಮೃದ್ಧಿಯುತ ಹೇಮಪಿಂಗಲ ॥

ನಾಲ್ಕು ಕೈಗಳು; ಕ್ರಮವಾಗಿ ಕೊಡಲಿ, ಅಕ್ಷಮಾಲೆ, ಕಬ್ಬಿನ ಜಲ್ಲೆ, ಕಳಿತ ಮಾವಿನ ಹಣ್ಣಿದೆ. ಕಳಿತ ಮಾವಿನ ಹಣ್ಣು ಸಿದ್ಧಿಯ ಸಂಕೇತವಾಗಿದೆ. ಗಣಪತಿಯ ಬಣ್ಣ ಬಂಗಾರದ ಬಣ್ಣ.



ಸಿದ್ಧಿಗಣಪತಿ

ಸಿದ್ಧಿಗಣಪತಿ

8. ಉಚ್ಛಿಷ್ಟಗಣಪತಿ

ನೀಲಾಬ್ಜದಾಡಿಮವೀಣಾಗುಂಜಾಕ್ಷಸೂತ್ರಂ
ದಧದುಚ್ಛಿಷ್ಟನಾಮಾಯಂ ಗಣೇಶ: ಪಾತು ಮೇಚಕ: ॥
ಗ್ರಂಥಾಂತರೇ 'ನಾರಿಯೋನಿ ರಸಾಸ್ವಾದ ಲೋಲುಪಂ ಕಾಮಮೋಹಿತಮಿತಿ' ।

ಆರು ಕರಗಳು; ಕ್ರಮ ಕ್ರಮವಾಗಿ ಅಕ್ಷಮಾಲೆ, ಭತ್ತದ ತೆನೆ, ಗುಂಜಾಫಲ, ನೀಲಕಮಲ, ವೀಣೆ ಮತ್ತು ಇನ್ನೊಂದು ಕೈಯಿಂದ ದೇವಿಯನ್ನು ಅಪ್ಪಿಕೊಂಡಿದ್ದಾನೆ. ಎಡತೊಡೆಯ ಮೇಲೆ ದೇವಿಯಿದ್ದಾಳೆ, ಸೊಂಡಿಲು ಆಕೆಯ ಗುಹ್ಯಸ್ಥಾನವನ್ನು ಮುಟ್ಟುತ್ತಿದೆ. ಗಣಪತಿಯ ಬಣ್ಣ ನೀಲಿ ಹಾಗೂ ದೇವಿಯ ಬಣ್ಣ ಸಿಂಧೂರವಾಗಿದೆ. ತಾಂತ್ರಿಕ ಸಾಧನೆಯಲ್ಲಿ ವಾಮಮಾರ್ಗಿಗಳು ಈ ರೂಪವನ್ನು ಉಪಾಸಿಸುತ್ತಾರೆ.



ಉಚ್ಛಿಷ್ಟಗಣಪತಿ

ಉಚ್ಚಿಷ್ಟಗಣಪತಿ

9. ವಿಘ್ನಗಣಪತಿ

ಶಂಖೇಕ್ಷುಚಾಪ ಕುಸುಮೇಷು ಕುಠಾರ ಪಾಶ
ಚಕ್ರ ಸ್ವದಂತ ಸೃಣಿ ಮಂಜರಿಕಾ ಶರೌಘೈಃ ।
ಪಾಣಿಶ್ರಿತೈಃ ಪರಶುವಿಹಿತ ಭೂಷಣ ಶ್ರೀಃ
ವಿಘ್ನೇಶ್ವರೋ ವಿಜಯತೇ ತಪನೀಯ ಗೌರ ಃ ॥

ಎಂಟು ಕೈಗಳು; ಕ್ರಮವಾಗಿ ಸ್ವದಂತ, ಕೊಡಲಿ, ಚಕ್ರ ಶಂಖ, ಕಬ್ಬಿನ ಜಲ್ಲೆ, ಪಾಶ ಮತ್ತು ಕುಠಾರಗಳಿವೆ. ಸೊಂಡಿಲಲ್ಲಿ ಚಿಗುರೆಲೆಗಳ ಗೊಂಚಲಿದೆ. ತೊಂದರೆಗಳನ್ನೊಡ್ಡುವ, ನೀಗಿಸುವ ಗಣೇಶ ಇವನಾಗಿದ್ದಾನೆ. ಬಣ್ಣ ಬಿಳಿ.



ವಿಘ್ನಗಣಪತಿ

ವಿಘ್ನಗಣಪತಿ

10. ಕ್ಷಿಪ್ರಗಣಪತಿ

ದಂತಕಲ್ಪಲತಾ ಪಾಶರತ್ನ ಕುಂಭಾಂಕುಶೋಜ್ವಲಮ್
ಬಂಧೂಕಕಮನೀಯಾಭಂ ಧ್ಯಾಯೇತ್ ಕ್ಷಿಪ್ರ ಗಣಾಧಿಪಂ ॥

ನಾಲ್ಕು ಕರಗಳು; ಕ್ರಮವಾಗಿ ಸ್ವದಂತ, ಅಂಕುಶ, ಕಲ್ಪವೃಕ್ಷದ ರೆಂಬೆ, ಪಾಶಗಳಿವೆ. ಸೊಂಡಿಲಿನಲ್ಲಿ ರತ್ನಕಲಶವಿದೆ. ಬಂಧೂಕಪುಷ್ಪದ ಮೈಬಣ್ಣ.



ಕ್ಷಿಪ್ರಗಣಪತಿ



ಕ್ಷಿಪ್ರಗಣಪತಿ

11. ಹೇರಂಬಗಣಪತಿ

ಅಭಯವರದಹಸ್ತಃ ಪಾಶದಂತಾಕ್ಷಮಾಲಾ
ಸೃಣಿಪರಶು ದಧಾನೋ ಮುದ್ಗರಂ ಮೋದಕಂ ಚ ।
ಫಲಮಧಿಗತಸಿಂಹಃ ಪಂಚಮಾತಂಗವಕ್ತ್ರೋ
ಗಣಪತಿರತಿಗೌರಃ ಪಾತುಹೇರಂಬನಾಮಾ ॥

ಹತ್ತು ಕೈಗಳು; ಕ್ರಮವಾಗಿ ಅಭಯ ಮುದ್ರೆ, ಅಕ್ಷರಮಾಲೆ, ಮೋದಕ, ಪಾಶ, ಸೃಣಿ (ಅಂಕುಶ), ಮುದ್ಗರ, ಪರಶು, ದಾಡೆ, ಮೋದಕ ಮತ್ತು ವರದಮುದ್ರೆ ಇದೆ. ಐದು ತಲೆಗಳಿವೆ. ಸಿಂಹವಾಹನವಿದೆ. ಬಿಳಿಯ ಮೈಬಣ್ಣ.



ಹೇರಂಬಗಣಪತಿ

ಹೇರಂಬಗಣಪತಿ

12. ಲಕ್ಷ್ಮೀಗಣಪತಿ

ಬಿಭ್ರಾಣಃ ಶುಕಬೀಜಪೂರಕ ಮಿಲನ್ಮಾಣಿಕ್ಯ ಕುಂಭಾಂಕುಶಾನ್
ಪಾಶಂ ಕಲ್ಪಲತಾಂ ಚ ಖಡ್ಗವಿಲಸ-ಜ್ಜ್ಯೋತಿಃ ಸುಧಾನಿರ್ಝರಃ ।
ಶ್ಯಾಮೇನಾತ್ತ ಸರೋರುಹೇಣಸಹಿತಂ ದೇವೀ ದ್ವಯಂ ಚಾಂತಿಕೇ
ಗೌರಾಂಗೋ ವರದಾನಹಸ್ತಸಹಿತೋ ಲಕ್ಷ್ಮೀ ಗಣೇಶೋಽವತಾತ್॥

ಎಂಟು ಕೈಗಳು ; ಕ್ರಮವಾಗಿ ದಾಳಿಂಬೆ, ಖಡ್ಗ, ಕಲ್ಪಲತೆ, ಅಂಕುಶ, ಗಿಣಿ, ಪಾಶ, ರತ್ನಕುಂಭ ಮತ್ತು ಒಂದು ಕೈ ದೇವಿಯ ನಡುವನ್ನು ಬಳಸಿದೆ. ಎಡ-ಬಲ ತೊಡೆಗಳ ಮೇಲೆ ದೇವಿಯರಿಬ್ಬರು ಕುಳಿತುಕೊಂಡಿದ್ದಾರೆ. ದೇವಿಯರ ಕೈಗಳಲ್ಲಿ ನೀಲಕಮಲವಿದೆ. ಇವರೀರ್ವರನ್ನು ಸಿದ್ಧಿ ಹಾಗೂ ಬುದ್ಧಿ ಎಂದು ನಿರ್ದೇಶಿಸುವುದು ವಾಡಿಕೆ. ಗಣಪತಿಯ ಮೈಬಣ್ಣ ಬಿಳಿ ಹಾಗೂ ದೇವಿಯರದು ಗೌರವರ್ಣ.



ಲಕ್ಷ್ಮೀಗಣಪತಿ

ಲಕ್ಷ್ಮೀಗಣಪತಿ

13. ಮಹಾಗಣಪತಿ

ಹಸ್ತೇಂದ್ರಾನನಮಿಂದುಚೂಡಮರುಣಚ್ಛಾಯಂ ತ್ರಿಣೇತ್ರಂ ರಸಾ-
ದಾಶ್ಲಿಷ್ಟಂ ಪ್ರಿಯಯಾ ಸಪದ್ಮ-ಕರಯಾ ಸ್ವಾಂಕಸ್ಥಯಾ ಸಂತತಂ

ಬೀಜಾಪೂರಗದೇಕ್ಷು ಕಾರ್ಮುಕ-ಲಸಚ್ಚಕ್ರಾಬ್ಜಪಾಶೋತ್ಪಲ-
ವ್ರೀಹ್ಯಗ್ರ ಸ್ವವಿಷಾಣ ರತ್ನಕಲಶಾನ್ ಹಸ್ತೈರ್ವಹಂತಂ ಭಜೇ ॥

ಹತ್ತು ಕೈಗಳು ; ಕ್ರಮವಾಗಿ ಸ್ವದಂತ, ದಾಳಿಂಬೆ, ಗದೆ, ಕಬ್ಬಿನ ಜಲ್ಲೆ, ಚಕ್ರ ಶಂಖ, ಪಾಶ, ಕನ್ನೈದಿಲೆ ಹೂ, ಬತ್ತದ ತೆನೆ, ರತ್ನಕಲಶಗಳಿವೆ. ಗಣಪತಿಯ ಶಿರದಲ್ಲಿ ಚಂದ್ರನಿದ್ದಾನೆ. ತ್ರಿನೇತ್ರನೂ ಹೌದು. ಎಡತೊಡೆಯ ಮೇಲೆ ದೇವಿಯನ್ನು ಕುಳ್ಳಿರಿಸಿಕೊಂಡಿದ್ದಾನೆ. ದೇವಿಯ ಕೈಯಲ್ಲಿ ಕಮಲವಿದೆ. ಗಣಪತಿಯ ಮೈಬಣ್ಣ ನಸುಗೆಂಪು.



ಮಹಾಗಣಪತಿ

ಮಹಾಗಣಪತಿ

14. ವಿಜಯಗಣಪತಿ

ಪಾಶಾಂಕುಶ ಸ್ವದಂತಾಮ್ರಫಲವಾನಾಖುವಾಹನಃ ।
ವಿಘ್ನಂ ನಿಹಂತು ಸಃ ಸರ್ವಂ ರಕ್ತವರ್ಣೋ ವಿನಾಯಕಃ ॥

ನಾಲ್ಕು ಕರಗಳು, ಕ್ರಮವಾಗಿ ತನ್ನ ದಂತ, ಅಂಕುಶ, ಪಾಶ, ಮತ್ತು ಮಾವಿನ ಹಣ್ಣಿದೆ. ಇಲಿಯ ಮೇಲೇರಿ ಹೋಗುತ್ತಿದ್ದಾನೆ. ಗಣಪತಿಯ ಮೈಬಣ್ಣ ಕೆಂಪು.



ವಿಜಯಗಣಪತಿ

ವಿಜಯಗಣಪತಿ

15. ನೃತ್ಯಗಣಪತಿ

ಪಾಶಾಂಕುಶಾಪೂಪ ಕುಠಾರದಂತ-
ಚಂಚತ್ಕರಾಕ್ಲಪ್ತ ವರಾಂಗುಲೀಯಕಂ
ಪೀತಪ್ರಭಂ ಕಲ್ಪತರೋರಧಸ್ಥಂ
ಭಜಾಮಿ ನೃತ್ತೋಪಪದಂ ಗಣೇಶಂ ॥

ನಾಲ್ಕು ಕೈಗಳು; ಕ್ರಮವಾಗಿ ದಂತ, ಅಂಕುಶ, ಪಾಶ, ಸಣ್ಣಕೊಡಲಿ ಇದೆ. ನೃತ್ಯ ಮಾಡುತ್ತಿರುವ ರೂಪ ಇದಾಗಿದ್ದು ಕಲ್ಪವೃಕ್ಷದ ಕೆಳಗೆ ನರ್ತನಗೈಯುತ್ತಿದ್ದಾನೆ. ಮೈಬಣ್ಣ ಹಳದಿ.

ನೃತ್ಯಗಣಪತಿ



ನೃತ್ಯಗಣಪತಿ

16. ಊರ್ಧ್ವಗಣಪತಿ

ಕಹ್ಲಾರಶಾಲಿಕಮಲೇಕ್ಷುಕಚಾಪಬಾಣ
ದಂತಪ್ರರೋಹಕಗದೀಕನಕೋಜ್ವಲಾಂಗಂ ।
ಆಲಿಂಗನೋದ್ಯತಕರೋ ಹರಿತಾಂಗಯಷ್ಟ್ಯಾ
ದೇವ್ಯಾ ಕರೋತು ಶುಭಮೂರ್ಧ್ವಗಣಾಧಿಪೋ ಮೇ ॥

ಎಂಟು ಕೈಗಳು : ಕ್ರಮವಾಗಿ ದಂತ, ಹೂಗೊಂಚಲು, ಕಲ್ಹಾರ, ಕಮಲ, ಭತ್ತದ ತೆನೆ, ಕಬ್ಬಿನ ಜಲ್ಲೆ, ಗದೆ ಹಾಗೂ ಇನ್ನೊಂದು ಕೈಯಿಂದ ದೇವಿಯ ನಡುವನ್ನು ಬಳಸಿದ್ದಾನೆ. ದೇವಿಯು ಗಣಪತಿಯ ಎಡತೊಡೆಯ ಮೇಲಿದ್ದಾಳೆ. ಗಣಪತಿಯ ಮೈಬಣ್ಣ ಬಂಗಾರ ಬಣ್ಣ, ದೇವಿ ಹಸಿರು ವರ್ಣ.



ಊರ್ಧ್ವಗಣಪತಿ

ಊರ್ಧ್ವಗಣಪತಿ

17. ಏಕಾಕ್ಷರಗಣಪತಿ

ರಕ್ತೋ ರಕ್ತಾಂಗ ರಾಗಾಂಶುಕ ಕುಸುಮಯುತಸ್ತುಂದಿಲಶ್ಚಂದ್ರಮೌಲಿಃ ।
ರತ್ನೈರ್ಯುಕ್ತಸ್ತ್ರಿಭಿರ್ವಾಮನಕರಚರಣೋ ಬೀಜಪೂರಂ ದಧಾನಃ ॥
ಹಸ್ತಾಗ್ರಕ್ಲಪ್ತ ಪಾಶಾಂಕುಶರದವರದೋ ನಾಗವಕ್ತ್ರೋಹಿಭೂಷಾ
ದೇವಃ ಪದ್ಮಾಸನಸ್ಥೋ ಭವತು ಸುಖಕರೋ ಭೂತಯೇ ವಿಘ್ನರಾಜಃ ॥

ನಾಲ್ಕು ಕೈಗಳು ; ಕ್ರಮವಾಗಿ ತನ್ನ ದಂತ, ಅಂಕುಶ, ಪಾಶ, ಮೋದಕ ಇದೆ. ಸೊಂಡಿಲಿನಲ್ಲಿ ದಾಳಿಂಬೆ ಹಣ್ಣು ಇದೆ. ಚಂದ್ರನು ತಲೆಯ ಮೇಲೆ ಇದ್ದಾನೆ. ಏಕಾಕ್ಷರವೆಂದರೆ ಪ್ರಣವ, ಓಂಕಾರ; ಅಥವಾ ಗಣಪತಿಯ ಬೀಜಾಕ್ಷರವಾದ 'ಗಂ'. ಬೊಜ್ಜು ಹೊಟ್ಟೆ (ತುಂದಿಲ), ಗಿಡ್ಡ ಮೈ (ವಾಮನ) ಪದ್ಮಾಸನದಲ್ಲಿ ಕುಳಿತಿದ್ದಾನೆ. ಮೈಬಣ್ಣ ಹಾಗೂ ಬಟ್ಟೆ ಎರಡೂ ಕೆಂಪಾಗಿವೆ.



ಏಕಾಕ್ಷರಗಣಪತಿ

ಏಕಾಕ್ಷರಗಣಪತಿ

20. ಕ್ಷಿಪ್ರಪ್ರಸಾದಗಣಪತಿ

ಧೃತಪಾಶಾಂಕುಶ ಕಲ್ಪಲತಾ ಸ್ವದಂತಶ್ಚ ಬೀಜಪೂರಯುತಃ ।
ಶಶಿಶಕಲಕಲಿತಮೌಲಿ ಸ್ತ್ರಿಲೋಚನೋರುಣಶ್ಚಗಜವದನಃ ।
ಭಾಸುರಭೂಷಣದೀಪ್ತೋ ಬೃಹದುದರಃ ಪದ್ಮವಿಷ್ಟರೋಲ್ಲಸಿತಃ ।
ವಿಘ್ನಪಯೋಧರಪವನಃ ಕರಧೃತ ಕಮಲಃ ಸದಾಸ್ತು ಮೇ ಭೂತ್ಯೈ॥

ಆರು ಕೈಗಳು; ಕ್ರಮವಾಗಿ ದಂತ, ಕೆಂದಾವರೆ, ಅಂಕುಶ, ಪಾಶ, ಕಲ್ಪಲತೆ, ದಾಳಿಂಬೆ ಇದೆ. ಮೂರು ಕಣ್ಣುಗಳಿರುವ ರೂಪ. ತಲೆಯ ಮೇಲೆ ಚಂದ್ರ. ದೊಡ್ಡ ಹೊಟ್ಟೆ. ಮೈಬಣ್ಣ ನಸುಗೆಂಪು. ಪೂಜಿಸಿದರೆ ಒಡನೆಯೇ ಪ್ರಸನ್ನನಾಗುವ ಗಣಪತಿ.



ಕ್ಷಿಪ್ರಪ್ರಸಾದಗಣಪತಿ

ಕ್ಷಿಪ್ರಪ್ರಸಾದಗಣಪತಿ

21. ಹರಿದ್ರಾಗಣಪತಿ

ಹರಿದ್ರಾಭಂ ಚತುರ್ಬಾಹುಂ ಹರಿದ್ರಾವದನಂ ಪ್ರಭುಂ
ಪಾಶಾಂಕುಶೌ ಧರಂ ದೇವಂ ಮೋದಕಂ ದಂತಮೇವಚ ।
ಭಕ್ತಾಭಯಪ್ರದಾತಾರಂ ವಂದೇ ವಿಘ್ನವಿನಾಶನಂ ॥

ನಾಲ್ಕು ಕೈಗಳು ; ಕ್ರಮವಾಗಿ ದಂತ, ಅಂಕುಶ, ಪಾಶ, ಮೋದಕ ಇದೆ. ದಂತವನ್ನು ಹಿಡಿದ ಬಲಗೈ ಅಭಯಮುದ್ರೆಯಲ್ಲೂ, ಮೋದಕವಿರುವ ಎಡಗೈ ವರದ ಮುದ್ರೆಯಲ್ಲೂ ಇದೆ. ಅರಿಶಿನ ಬಣ್ಣದ ಮೈ ಎಂದು ಹರಿದ್ರಾಗಣಪತಿ. ಅರಿಶಿನದ ಕೊಂಬಿನಲ್ಲಿ ಗಣಪತಿಯನ್ನು ಆವಾಹಿಸಿ ಪೂಜಿಸುವ ವಾಡಿಕೆ ಇದೆ. ಗಣಪತಿಯ ಕಳೆಯನ್ನು ತಳೆದ ಅರಸಿನದ ಕೊಂಬೇ ದಿಟವಾಗಿ ಹರಿದ್ರಾಗಣಪತಿ. ಇಲ್ಲಿ ಇದಕ್ಕೊಂದು ಮೂರ್ತಿಯನ್ನು ಕಲ್ಪಿಸಲಾಗಿದೆ.



ಹರಿದ್ರಾಗಣಪತಿ



ಹರಿದ್ರಾಗಣಪತಿ

22. ಏಕದಂತಗಣಪತಿ

ಲಂಬೋದರಂ ಶ್ಯಾಮತನುಂ ಗಣೇಶಂ
ಕುಠಾರಮಕ್ಷಸ್ರಜಮೂರ್ಧ್ವಗಾತ್ರಂ ।
ಸಲಡ್ಡುಕಂ ದಂತಮಧಃ ಕರಾಭ್ಯಾಂ
ವಾಮೇತರಾಭ್ಯಂ ಚ ದಧಾನ ಮೀಡೇ ॥

ನಾಲ್ಕು ಕೈಗಳು ; ಕ್ರಮವಾಗಿ ದಂತ, ಅಕ್ಷರಮಾಲೆ, ಸಣ್ಣ ಕೊಡಲಿ, ಲಡ್ಡು ಇದೆ. ಶ್ಯಾಮವರ್ಣದವನಾಗಿದ್ದಾನೆ. ಗಣಪತಿಯ ಎಲ್ಲ ರೂಪಗಳಲ್ಲೂ ಸಾಮಾನ್ಯವಾಗಿ ಒಂದೇ ದಂತವಾದರು 'ಏಕದಂತ'ವೆಂಬುದೇ ಒಂದು ರೂಪಭೇದವಾಗಿದೆ.



ಏಕದಂತಗಣಪತಿ

ಏಕದಂತಗಣಪತಿ

23. ಸೃಷ್ಟಿಗಣಪತಿ

ಪಾಶಾಂಕುಶ ಸ್ವದಂತಾಮ್ರಫಲವಾನಾಖುವಾಹನಂ
ವಿಘ್ನಂ ನಿಹಂತು ನಃ ಶೋಣಃ ಸೃಷ್ಟಿದಕ್ಷೋ ವಿನಾಯಕಃ ॥

ನಾಲ್ಕು ಕೈಗಳು ; ಕ್ರಮವಾಗಿ ದಂತ, ಅಂಕುಶ, ಪಾಶ, ಮಾವಿನ ಹಣ್ಣು ಇದೆ. ಇಲಿಯನ್ನೇರಿ ಸಾಗುತ್ತಿದ್ದಾನೆ. ಮೈಬಣ್ಣ ಕೆಂಪು. ಗಣಪತಿಯು ಸೃಷ್ಟಿದಕ್ಷನೆಂದು ಹೇಳುತ್ತಿದೆ.



ಸೃಷ್ಟಿಗಣಪತಿ



ಸೃಷ್ಟಿಗಣಪತಿ

24. ಉದ್ದಂಡಗಣಪತಿ

ಕಹ್ಲಾರಾಂಬುಜಬೀಜಪೂರಕಗದಾದಂತೇಕ್ಷುಚಾಪಂ ಸುಮಂ ।
ಬಿಭ್ರಾಣೋಮಣಿಕುಂಭಶಾಲಿಕಲಶಂ ಪಾಶಂ ಸೃಣಿಂ ಚಾಬ್ಜಕಂ
ಗೌರಾಂಗ್ಯಾ ರುಚಿಕಾರವಿಂದ ಕರಯಾ ದೇವ್ಯಾ ಸಮಾಲಿಂಗತಃ ।
ಶೋಣಾಂಗಃ ಶುಭಮಾತನೋತು ಭಜತಾಮುದ್ದಂಡವಿಘ್ನೇಶ್ವರಂ ॥

ದೇವಿಯನ್ನು ಎಡತೊಡೆಯ ಮೇಲೆ ಕುಳ್ಳಿರಿಸಿಕೊಂಡಿದ್ದಾನೆ. ಹನ್ನೆರಡು ಕೈಗಳಿವೆ; ಕ್ರಮವಾಗಿ ದಂತ, ಕಲಶ, ಶಂಖ ಪಾಶ, ಸುಮ, ಅಂಕುಶ, ಕುಂಭ, ಕಬ್ಬಿನ ಜಲ್ಲೆ, ಗದೆ, ತಾವರೆ, ಕಲ್ಹಾರ ಪುಷ್ಪ ದಾಳಿಂಬೆ ಇದೆ. ದೇವಿಯು ಬಿಳಿಯ ಬಣ್ಣದವಳಾಗಿದ್ದು ಕೈಯಲ್ಲಿ ತಾವರೆ ಹೂ ಹಿಡಿದಿದ್ದಾಳೆ, ಗಣಪತಿಯ ಮೈಬಣ್ಣ ಕೆಂಪು.



ಉದ್ದಂಡಗಣಪತಿ

ಉದ್ದಂಡಗಣಪತಿ

25. ಋಣವಿಮೋಚಕಗಣಪತಿ

ಪಾಶಾಂಕುಶೌ ದಂತಜಂಬು ದಧಾನಃ ಸ್ಫಾಟಿಕ ಪ್ರಭಃ
ರಕ್ತಾಂಶುಕೋ ಗಣಪತಿರ್ಮುದೇ ಸ್ಯಾದೃಣಮೋಚಕಃ ॥

ನಾಲ್ಕು ಕೈಗಳು, ಕ್ರಮವಾಗಿ ದಂತ, ಅಂಕುಶ, ಪಾಶ, ಜಂಬೂಫಲ ಇದೆ. ಸ್ಫಟಿಕದಂತೆ ಹೊಳೆಯುವ ಮೈಬಣ್ಣ. ಕೆಂಪು ಬಣ್ಣದ ಬಟ್ಟೆಯನ್ನುಟ್ಟಿದ್ದಾನೆ.



ಋಣವಿಮೋಚಕಗಣಪತಿ



ಋಣವಿಮೋಚಕಗಣಪತಿ

26. ಧುಂಢಿಗಣಪತಿ

ಅಕ್ಷಮಾಲಾಂ ಕುಠಾರಂ ಚ ರತ್ನಪಾತ್ರಂ ಸ್ವದಂತಕಂ।
ಧತ್ತೇ ಕರೈರ್ವಿಘ್ನರಾಜೋ ದುಂಢೀನಾಮಾ ಮುದೇಽಸ್ತುನಃ ॥

ನಾಲ್ಕು ಕೈಗಳು; ಕ್ರಮವಾಗಿ ತನ್ನ ದಂತ, ಅಕ್ಷಮಾಲೆ, ಸಣ್ಣ ಕೊಡಲಿ (ಕುಠಾರ), ರತ್ನಪಾತ್ರೆ ಇದೆ. ಗಣಪತಿಯ ಮೈಬಣ್ಣ ಸಿಂಧೂರ ವರ್ಣ.



ಧುಂಢಿಗಣಪತಿ

ಧುಂಢಿಗಣಪತಿ

27. ದ್ವಿಮುಖಗಣಪತಿ

ಸ್ವದಂತ ಪಾಶಾಂಕುಶ ರತ್ನಪಾತ್ರಂ
ಕರೈರ್ದಧಾನೋ ಹರಿನೀಲಗಾತ್ರಃ ।
ರಕ್ತಾಂಶುಕೋ ರತ್ನಕರೀಟಮಾಲೀ
ಭೂತ್ಯೈಸದಾ ಮೇ ದ್ವಿಮುಖೋ ಗಣೇಶಃ ॥

ಎರಡು ತಲೆಗಳು, ನಾಲ್ಕು ಕರಗಳಿವೆ ; ಕ್ರಮವಾಗಿ ದಾಡೇ (ದಂತ), ಅಂಕುಶ, ಪಾಶ, ರತ್ನಪಾತ್ರೆ ಇದೆ. ಕೆಂಪುಬಣ್ಣದ ಬಟ್ಟೆ ಉಟ್ಟಿದ್ದಾನೆ. ಮೈಬಣ್ಣ ಹಸಿರು ಬಣ್ಣ.



ದ್ವಿಮುಖಗಣಪತಿ

ದ್ವಿಮುಖಗಣಪತಿ

28. ತ್ರಿಮುಖಗಣಪತಿ

ಶ್ರೀಮತ್ತೀಕ್ಷ್ಣ ಶಿಖಾಂಕುಶಾಕ್ಷ ವರದಾನ್ ದಕ್ಷೇ ದಧಾನಃ ಕರೈಃ
ಪಾಶಂ ಚಾಮೃತ ಪೂರ್ಣಕುಂಭಮಭಯಂ ವಾಮೇ ದಧಾನೋ ಮುದಾ ।
ಪೀಠೇ ಸ್ವರ್ಣಮಯಾರವಿಂದ ವಿಲಸತ್ ಸತ್ಕರ್ಣಿಕಾ ಭಾಸುರೇ
ಸ್ವಾಸೀನ ಸ್ತ್ರಿಮುಖಃ ಪಲಾಶರುಚಿರೋ ನಾಗಾನನಃ ಪಾತು ನಃ ॥

ಮೂರು ತಲೆಗಳ ರೂಪ. ಆರು ಕೈಗಳಿವೆ; ಕ್ರಮವಾಗಿ ವರದ ಮುದ್ರೆ, ಅಕ್ಷಮಾಲೆ, ಅಂಕುಶ, ಪಾಶ, ಅಮೃತಪೂರ್ಣಕುಂಭ ಅಭಯ ಮುದ್ರೆ ಇದೆ. ಬಂಗಾರದ ಕಮಲದ ಮೇಲೆ ಕುಳಿತಿದ್ದಾನೆ ಎನ್ನುವುದು ಧ್ಯಾನಶ್ಲೋಕದ ವಿವರ. ಮುತ್ತುಗದ ಹೂವಿನ ಮೈಬಣ್ಣವಿದೆ (ಪಲಾಶರುಚಿರ).



ತ್ರಿಮುಖಗಣಪತಿ

ತ್ರಿಮುಖಗಣಪತಿ

29. ಸಿಂಹಗಣಪತಿ

ವೀಣಾಂ ಕಲ್ಪಲತಾಮರಿಂ ಚ ವರದಂ ಧತ್ತೇ ವಿಧತ್ತೇ ಕರೈಃ
ವಾಮೇ ತಾಮರಸಂ ಚ ರತ್ನಕಲಶಂ ಸನ್ಮಂಜರೀಂ ಚಾಭಯಂ ।
ಶುಂಡಾದಂಡಲಸನ್ ಮೃಗೇಂದ್ರವದನಃ ಶಂಖೇಂದು ಗೌರಃ ಶುಭೋ
ದೀವ್ಯದ್ರತ್ನ ನಿಭಾಂಶುಕೋ ಗಣಪತಿಃ ಪಾಯಾದಪಾಯಾತ್ಸನಃ ॥

ಸಿಂಹಮುಖ, ಆನೆಯ ಸೊಂಡಿಲು ಕೂಡಿರುವ ರೂಪ. ಎಂಟು ಕೈಗಳು ; ಕ್ರಮವಾಗಿ ವರದ ಮುದ್ರೆ, ವೀಣೆ, ಕಲ್ಪಲತೆ, ಚಕ್ರ ರತ್ನಕಲಶ, ಹೂಗೊಂಚಲು, ತಾವರೆ ಹೂ, ಅಭಯ ಮುದ್ರೆ ಇದೆ. ಶಂಖದಂತೆ ಬೆಳ್ಳಗಿರುವ ಮೈಬಣ್ಣ.



ಸಿಂಹಗಣಪತಿ



ಸಿಂಹಗಣಪತಿ

30. ಯೋಗಗಣಪತಿ

ಯೋಗಾರೂಢೋ ಯೋಗ ಪಟ್ಟಾಭಿರಾಮೋ
ಬಾಲಾರ್ಕಾಭಶ್ಚಂದ್ರ ನೀಲಾಂಶುಕಾಢ್ಯಃ ।
ಪಾಶೇಕ್ಷ್ವಕ್ಷಾನ್ ಯೋಗದಂಡಂ ದಧಾನಃ
ಪಾಯಾನ್ನಿತ್ಯಂ ಯೋಗವಿಘ್ನೇಶ್ವರೋ ನಃ ॥

ಯೋಗಪಟ್ಟದಲ್ಲಿ ಯೋಗಾರೂಢನಾಗಿ ಕುಳಿತ ರೂಪ. ನಾಲ್ಕು ಕೈಗಳು; ಕ್ರಮವಾಗಿ ಅಕ್ಷಮಾಲೆ, ಯೋಗದಂಡ, ಪಾಶ, ಕಬ್ಬಿನಜಲ್ಲೆ ಇದೆ. ಎಳೆಯ ಸೂರ್ಯನಂತೆ ಹೊಳೆಯುವವನು ಎಂಬ ವರ್ಣನೆ ಧ್ಯಾನಶ್ಲೋಕದಲ್ಲಿದೆ.



ಯೋಗಗಣಪತಿ

ಯೋಗಗಣಪತಿ

31. ದುರ್ಗಾಗಣಪತಿ

ತಪ್ತಕಾಂಚನಸಂಕಾಶಷ್ಟಹಸ್ತೋ ಮಹತ್ತನುಃ
ದೀಪ್ತಾಂಕುಶಂ ಶರಚಾಕ್ಷಂ ದಂತಂ ದಕ್ಷೇ ವಹನ್ ಕರೈಃ ।
ವಾಮೇಪಾಶಂ ಕಾರ್ಮುಕಂ ಚ ಲತಾಂ ಜಂಬು ಧಧತ್ಕರೈಃ
ರಕ್ತಾಂಶುಕಃ ಸದಾ ಭೂಯಾದ್ದುರ್ಗಾಗಣಪತಿರ್ಮುದೇ ॥

ಎಂಟು ಕೈಗಳು ; ಕ್ರಮವಾಗಿ ದಾಡೆ (ದಂತ), ಅಕ್ಷಮಾಲೆ, ಬಾಣ, ಅಂಕುಶ, ಪಾಶ, ಕಲ್ಪಲತೆ, ಜಂಬೂಫಲ ಇದೆ. ಬಂಗಾರ ಬಣ್ಣದ ದೇಹ. ಉಟ್ಟಿರುವುದು ಕೆಂಪು ಬಟ್ಟೆ. ಕಷ್ಟಗಳನ್ನು ದಾಟಿಸುವ ಗಣಪತಿಯಾಗಿದ್ದಾನೆ.



ದುರ್ಗಾಗಣಪತಿ



ದುರ್ಗಾಗಣಪತಿ

32. ಸಂಕಟಹರಗಣಪತಿ

ಬಾಲಾರ್ಕಾರುಣಕಾಂತಿರ್ವಾಮೇ ಬಾಲಾಂ ವಹನ್ನಂಕೇ ।
ಲಸದಿಂದೀವರಹಸ್ತಾಂ ಗೌರಾಂಗೀಂ ರತ್ನಶೋಭಾಢ್ಯಾಂ ।
ದಕ್ಷೇಽಂಕುಶವರದಾನಂ ವಾಮೇ ಪಾಶಂ ಚ ಪಾಯಸಪಾತ್ರಂ
ನೀಲಾಂಶುಕಲಸಮಾನಃ ಪೀಠೇ ಪದ್ಮಾರುಣೇ ತಿಷ್ಠನ್ ।
ಸಂಕಟಹರಣಃ ಪಾಯಾತ್ ಸಂಕಟ ಪೂಗಾದ್ಗಜಾನನೋ ನಿತ್ಯಂ ॥

ತನ್ನ ಎಡತೊಡೆಯ ಮೇಲೆ ದೇವಿಯನ್ನು ಕುಳ್ಳಿರಿಸಿಕೊಂಡಿದ್ದಾನೆ. ನಾಲ್ಕು ಕೈಗಳು ; ಕ್ರಮವಾಗಿ ವರದ ಮುದ್ರೆ, ಅಂಕುಶ, ಪಾಶ, ಮತ್ತು ಪಾಯಸಪಾತ್ರೆಯನ್ನು ಹಿಡಿದುಕೊಂಡು ದೇವಿಯನ್ನು ಆಲಂಗಿಸಿಕೊಂಡಿದ್ದಾನೆ. ದೇವಿಯ ಕೈಯಲ್ಲಿ ಕನ್ನೈದಿಲೆ ಹೂ (ಇಂದೀವರ) ಇದೆ. ಗಣಪತಿಯ ಮೈಬಣ್ಣ ನಸುಗೆಂಪು, ದೇವಿಯ ಮೈಬಣ್ಣ ಬಿಳಿಯಾಗಿದೆ. ಮೇಲೆರಗಿಬರುವ ತೊಂದರೆಗಳನ್ನು ನೀಗಿಸುವ ರೂಪ ಇದಾಗಿದೆ.



ಸಂಕಟಹರಗಣಪತಿ

ಸಂಕಟಹರಗಣಪತಿ

2. ದೇವಿ

'ದೇವ' ಶಬ್ದವು 'ದಿವ್' ಧಾತುವಿನಿಂದಾಗಿದೆ. ಯಾವುದು ಬೆಳಗುತ್ತಿದೆಯೋ, ಎಲ್ಲವನ್ನು ಬೆಳಗಿಸುತ್ತಿದೆಯೋ ಅದು ದೇವ. ದೇವ ಶಬ್ದದ ಸ್ತ್ರೀಲಿಂಗ ರೂಪ 'ದೇವಿ'ಯಾಗಿದೆ. ಇಲ್ಲಿ ದೇವತ್ವದ ಜತೆ ಮಾತೃತ್ವವೂ ಸೇರಿಕೊಂಡಿದೆ. ಸೌಂದರ್ಯವಂತೂ ಇದ್ದೇ ಇದೆ. ಅಂದಾಗ 'ಬೆಳಕು' ಇನ್ನಷ್ಟು ಪ್ರಕಾಶಿಸದೇ ಉಳಿದೀತೇ? ಇಲ್ಲಿ ದೇವಿಯರು ಯಾವುದೋ ದೇವತೆಗಳ ಪತ್ನಿಯರು, ಪರಿವಾರ ಎನ್ನುವುದಕ್ಕಿಂತ ಇವೇ ಸ್ವತಂತ್ರವಾದ ಅಸ್ತಿತ್ವವುಳ್ಳ ದೇವತೆಗಳು ಎಂದರೆ ತಪ್ಪಾಗಲಾರದು. ಸಪ್ತಮಾತೃಕೆಯರಾಗಿ, ನವವಿಧ ದೇವಿಯರಾಗಿ, ದುರ್ಗೆಯರಾಗಿ ಹೀಗೆ ಹಲವು ವಿಧದಲ್ಲಿ ಮಾತೃತ್ವದ ಕಲ್ಪನೆ ದೇವಿಯರಾಗಿ ಮೈದಳೆಯಿತು. ಎಲ್ಲ ದೇವತೆಗಳೂ ಪ್ರತಿನಿಧಿಸುತ್ತಿರುವುದು ಒಂದೇ ಶಕ್ತಿಯನ್ನು ಎಂಬುದು ಶಾಸ್ತ್ರಾಭಿಮತ. ಬ್ರಾಹ್ಮೀ, ಮಾಹೇಶ್ವರೀ, ಕೌಮಾರಿ, ಕಾರ್ತಿಕೇಯಿ (ಮಾಯೂರಿ), ವೈಷ್ಣವಿ, ವಾರಾಹಿ, ಇಂದ್ರಾಣಿ ಎನ್ನುವುದಾಗಿ ಏಳು ಎಂಬ ಒಂದು ರೀತಿಯ ಅಭಿಮತವಾದರೆ ಚಾಮುಂಡಾ(ಚಂಡಿಕಾ)ವನ್ನು ಸೇರಿಸಿ ಅಷ್ಟಮಾತೃಕೆಯರು ಎಂದು ವಿಧಿಸಿರುವುದೂ ಇದೆ. ಬ್ರಾಹ್ಮಿಯ ಬಲಕ್ಕೆ ವೀರಭದ್ರನೂ ಚಾಮುಂಡಿಯ ಎಡಭಾಗದಲ್ಲಿ ಗಣೇಶನನ್ನು ಇರಿಸಿ ನಡುವೆ ಮಾತೃಕೆಯರ ಪಂಕ್ತಿಯನ್ನು ಪ್ರತಿಷ್ಠಾಪಿಸಬೇಕೆಂಬುದು ಶಾಸ್ತ್ರವಿಧಿ.

ದೇವಿಯು ಒಲಿದಾಗ ಒಂದಷ್ಟು ರೂಪಗಳು, ಮುನಿದಾಗ ಇನ್ನೊಂದಷ್ಟು ರೂಪಗಳು ಕಾಣಿಸಿಕೊಂಡವು. ಇವುಗಳ ಉಪಾಸನೆಯಲ್ಲಿ ಎರಡು ಕವಲುಗಳಾದವು, ದಕ್ಷಿಣಾಚಾರ ಮತ್ತು ವಾಮಾಚಾರವೆಂಬ ಹೆಸರುಗಳು. ಇವೇ ಸಾತ್ವಿಕ ಮತ್ತು ಉಗ್ರೋಪಾಸನೆ ಎನ್ನಿಸಿಕೊಂಡವು.

ದಕ್ಷಿಣಾಚಾರವು ವೈದಿಕಸಮ್ಮತವಾದರೆ ವಾಮಾಚಾರವು ತಂತ್ರಸಮ್ಮತವಾಯಿತು.

1. ಲಕ್ಷ್ಮೀ

ಅರುಣ ಕಮಲ ಸಂಸ್ಥಾ ತದ್ರಜಃ ಪುಂಜವರ್ಣಾ
ಕರಕಮಲಧೃತೇಷ್ಟಾಽಭೀತಿಯುಗ್ಮಾಂಬುಜಾ ಚ
ಮಣಿ ಮಕುಟ ವಿಚಿತ್ರಾಲಂಕೃತಾ ಕಲ್ಪಜಾತೈ
ರ್ಭವತು ಭುವನಮಾತಾ ಸಂತತಂ ಶ್ರೀಃ ಶ್ರಿಯೈ ನಃ ॥

(ಮಹಾಲಕ್ಷ್ಮೀರತ್ನಕೋಶ)

ಲಕ್ಷ್ಮೀಯು ಕೆಂಪಾದ ಕಮಲದಲ್ಲಿ ಕುಳಿತಿದ್ದಾಳೆ. ನಾಲ್ಕು ಕರಗಳಿವೆ. ನಿಜಹಸ್ತಗಳು ಅಭಯವರದ ಮುದ್ರೆಗಳಲ್ಲೂ, ಪರಹಸ್ತದ ಎರಡೂ ಕರಗಳಲ್ಲಿ ಪದ್ಮಗಳನ್ನು ಹಿಡಿದಿದ್ದಾಳೆ. ಮಣಿಗಳಿಂದಾದ ಕಿರೀಟವನ್ನು, ಆಭರಣಗಳನ್ನು ಧರಿಸಿದ್ದಾಳೆ. ಈ ಆಭರಣಗಳು ಕಲ್ಪವೃಕ್ಷದಿಂದ ಹುಟ್ಟಿದವಾಗಿದೆ ಎನ್ನುವುದಾಗಿ ಹೇಳುತ್ತಿದೆ. ಲಕ್ಷ್ಮಿಯು ಬಂಗಾರ. ಬಣ್ಣದವಳಾಗಿದ್ದಾಳೆ.

ಲಕ್ಷ್ಮೀ ಎಂಬ ಶಬ್ದವೇ ಸೌಂದರ್ಯವನ್ನು, ಸಿರಿತನ, ಸಮೃದ್ಧಿ, ಅದೃಷ್ಟಗಳನ್ನು ಸೂಚಿಸುತ್ತಿದೆ. ಲಕ್ಷ್ಮೀಯನ್ನು ಆರಾಧಿಸದೇ ಇರುವವರು ಇಲ್ಲವೆನ್ನಬಹುದು. ಲಕ್ಷ್ಮೀ ಹಾಗೂ ಕೆಂದಾವರೆಯ ನಡುವಿನ ಸಂಬಂಧ ಪುರಾತನವಾದದ್ದೇ, ಆಕೆಯೇ ಸ್ವತಃ ಪದ್ಮವೆಂದೂ, ಪದ್ಮದಲ್ಲೇ ಇರುವವಳು (ಪದ್ಮಸ್ಥಿತೇ); ಪದ್ಮಗಳನ್ನೇ ಹಿಡಿದುಕೊಂಡವಳು (ಪದ್ಮಹಸ್ತೇ) ; ಪದ್ಮದಂತೆ ಮುಖವುಳ್ಳವಳು (ಪದ್ಮಾನನೇ) ; ಪದ್ಮಗಳೇ ಆಭರಣಗಳು (ಪದ್ಮಮಾಲಿನಿ) ಮತ್ತು ದೇಹವೂ ಕೂಡ ಪದ್ಮವರ್ಣವೇ ಆಗಿರುವುದು ವಿಶೇಷ. ಲಕ್ಷ್ಮೀಯನ್ನು ಬೇರೆ ಬೇರೆ ಎಂಟು ಹೆಸರುಗಳಿಂದ ರೂಪವ್ಯತ್ಯಾಸ ಮಾಡಿಕೊಂಡು ಕರೆಯುವುದು ವಾಡಿಕೆ. ಆದ್ಯಲಕ್ಷ್ಮೀ, ವಿದ್ಯಾಲಕ್ಷ್ಮೀ, ಸಂತಾನಲಕ್ಷ್ಮೀ, ಸೌಭಾಗ್ಯಲಕ್ಷ್ಮೀ, ಧನಲಕ್ಷ್ಮೀ, ವೀರ್ಯಲಕ್ಷ್ಮೀ, ವಿಜಯಲಕ್ಷ್ಮೀ, ಮತ್ತು ಮಹಾಲಕ್ಷ್ಮೀ ಎಂಬ ಒಂದು ಕ್ರಮವಾದರೆ, ಆದಿಲಕ್ಷ್ಮೀ, ಸಂತಾನಲಕ್ಷ್ಮೀ, ಗಜಲಕ್ಷ್ಮೀ, ಧನಲಕ್ಷ್ಮೀ, ಧಾನ್ಯಲಕ್ಷ್ಮೀ, ವಿಜಯಲಕ್ಷ್ಮೀ, ಐಶ್ವರ್ಯಲಕ್ಷ್ಮೀ, ವೀರಲಕ್ಷ್ಮೀ ಎಂಬ ಎಣಿಕೆಯೂ ಇದೆ.

ಲಕ್ಷ್ಮೀ

2. ಗಜಲಕ್ಷ್ಮೀ

ಲಕ್ಷ್ಮೀ ಶುಕ್ಲಾಂಬರಾ ದೇವಿ ರೂಪೇಣಾ ಪ್ರತಿಮಾ ಭುವಿ ।
ಪೃಥಕ್ಚತುರ್ಭುಜಾ ಕಾರ್ಯಾ ದೇವೀ ಸಿಂಹಾಸನೇ ಶುಭಾ ॥
ಸಿಂಹಾಸನೇಸ್ಯಾ ಕರ್ತವ್ಯಂ ಕಮಲಂ ಚಾರುಕರ್ಣಿಕಂ ।
ಅಷ್ಟಪತ್ರಂ ಮಹಾಭಾಗ ಕರ್ಣಿಕಾಯಾಂ ಸುಸಂಸ್ಥಿತಾ ॥
ವಿನಾಯಕವದಾಸೀನಾ ದೇವೀ ಕಾರ್ಯಾ ಚತುರ್ಭುಜಾ ।
ಬೃಹಂನ್ನಾಳಂಕರೆ ಕಾರ್ಯಂ ತಸ್ಯಾಶ್ಚ ಕಮಲಂ ಶುಭಂ ॥
ದಕ್ಷಿಣೇ ಯಾದವ ಶ್ರೇಷ್ಠ ಕೇಯೂರ ಪ್ರಾಂತಸಂಸ್ಥಿತಂ ।
ವಾಮೇಽಮೃತಘಟಃ ಕಾರ್ಯಸ್ತಥಾ ರಾಜನ್ಮನೋಹರಃ ॥
ತಸ್ಯಾಽನ್ಯಾ ಅನ್ಯಾಕರೌ ಕಾರ್ಯೌ ಬಿಲ್ವಶಂಖಧರೌ ದ್ವಿಜ ।
ವರ್ಜಿತಕರಂ ಕಾರ್ಯಂ ತತ್ಪೃಷ್ಠೇ ಕುಂಜರದ್ವಯಂ ॥
ದೇವ್ಯಶ್ಚ ಮಸ್ತಕೇ ಕಾರ್ಯಂ ಪದ್ಮಂ ಚಾಪಿ ಮನೋಹರಂ ॥

(ಪಾಂಚರಾತ್ರಾಗಮ)

ಎಂಟು ದಳಗಳ ಕಮಲದ ನಡುವೆ ಕುಳಿತಿದ್ದಾಳೆ. ಹೊಂಬಣ್ಣದ ಮೈಗೆ ಬಿಳಿಯ ಬಟ್ಟೆಯನ್ನುಟ್ಟಿದ್ದಾಳೆ. ನಾಲ್ಕು ಕೈಗಳು; ಎರಡು ಕೈಗಳಲ್ಲಿ ಶಂಖ, ಚಕ್ರಗಳಿವೆ, ಇನ್ನೆರಡರಲ್ಲಿ ಕಮಲ ಹಾಗೂ ಅಮೃತಘಟ ಇವೆ. ಹಿಂಭಾಗದಲ್ಲಿ ಎರಡು ಆನೆಗಳು ಆಕೆಯ ತಲೆಯ ಮೇಲೆ ತಮ್ಮ ಸೊಂಡಿಲುಗಳನ್ನು ಚಾಚಿರುವಂತೆ ಕಾಣಿಸಬೇಕು.



ಗಜಲಕ್ಷ್ಮೀ

ಲಕ್ಷ್ಮೀ

ಗಜಲಕ್ಷ್ಮೀ

3. ಮಹಾಲಕ್ಷ್ಮೀ

ಕ್ಷೇತ್ರಾತ್ಕೊಲ್ಲಾಪುರಾದನ್ಯಾ ಮಹಾಲಕ್ಷ್ಮೀರ್ಯದೋಚ್ಯತೇ ।
ಲಕ್ಷ್ಮೀವತ್ಸಾ ತದಾ ಕಾರ್ಯಾ ಸರ್ವಾಭರಣಭೂಷಿತಾ ॥
ದಕ್ಷಿಣಾಧಃ ಕರೇ ಪಾತ್ರಮೂರ್ಧ್ವೇ ಕೌಮೋದಕೀಂ ತತಃ।
ವಾಮೇಥ ಖೇಟಕಂ ಧತ್ತೇ ಶ್ರೀಫಲಂ ತದಧಃ ಕರೇ ॥
ಭಿಭ್ರತೀ ಮಸ್ತಕೇ ಲಿಂಗಂ ಪೂಜನೀಯ್ಯಾ ವಿಭೂತಯೇ ।

(ನೃಸಿಂಹಪ್ರಾಸಾದ)

ನಾಲ್ಕು ಕರಗಳಿವೆ. ನಿಜಹಸ್ತಗಳಲ್ಲಿ ಪಾನಪಾತ್ರೆ ಹಾಗೂ ಶ್ರೀಫಲ, ಪರಹಸ್ತಗಳಲ್ಲಿ ಗದೆ ಮತ್ತು ಗುರಾಣಿಗಳಿವೆ. ತಲೆಯ ಮೇಲೆ ಲಿಂಗ ಇರುವಂತೆ ಕಾಣಿಸಬೇಕು. ಬಂಗಾರದ ವರ್ಣವನ್ನು ಹೊಂದಿದ್ದಾಳೆ.

ಮಹಾಲಕ್ಷ್ಮೀ

ಮಹಾಲಕ್ಷ್ಮೀ

4. ಶ್ರೀದೇವಿ

ಪಾಶಾಕ್ಷಮಾರಿಕಾಂಭೋಜಸೃಣಿಭಿರ್ಯಾಮ್ಯಸೌಮ್ಯಯೋಃ ।
ಪದ್ಮಾಸನಸ್ಥಾಂ ಕುರ್ವೀತ ಶ್ರಿಯಂ ತ್ರೈಲೋಕ್ಯಮಾತರಂ ॥
(ಮಯೂಖಸ್ಮೃತಿ, ದಾನವಖಂಡ)

ಹೊಂಬಣ್ಣದ ಮೈಬಣ್ಣ ಹೊಂದಿರುವ ಶ್ರೀದೇವಿಯು ಲಕ್ಷ್ಮಿಯ ರೂಪವೇ ಆಗಿದೆ. ತಾವರೆಯ ಮೇಲೆ ಕುಳಿತಿದ್ದಾಳೆ. ನಾಲ್ಕು ಕೈಗಳು ನಿಜ ಹಸ್ತಗಳಲ್ಲಿ ಜಪಮಾಲೆ, ಕಮಲ; ಪರಹಸ್ತಗಳಲ್ಲಿ ಪಾಶ ಅಂಕುಶಗಳನ್ನು ಧರಿಸಿದ್ದಾಳೆ.

ಶ್ರೀದೇವಿ

5. ವೀರಲಕ್ಷ್ಮೀ

ವೀರಲಕ್ಷ್ಮೀತಿ ವಿಖ್ಯಾತಾ ವರದಾಭಯ ಹಸ್ತಿನೀ ।
ಊರ್ಧ್ವಪದ್ಮದ್ವಯೌಹಸ್ತೌ ತಥಾ ಪದ್ಮಾಸನೇ ಸ್ಥಿತಾ ॥
(ಪಾಂಚರಾತ್ರಾಗಮ)

ನಾಲ್ಕು ಕೈಗಳಿವೆ. ನಿಜಹಸ್ತಗಳೂ ವರದ ಅಭಯ ಮುದ್ರೆಯಲ್ಲಿವೆ. ಪರಹಸ್ತಗಳಲ್ಲಿ ಕಮಲಗಳಿವೆ. ಲಕ್ಷ್ಮಿಯು ಕಮಲದ ಮೇಲೆ ಕುಳಿತಿದ್ದಾಳೆ. ಹೊಂಬಣ್ಣದ ಮೈಕಾಂತಿಯನ್ನು ಹೊಂದಿದ್ದಾಳೆ.

ವೀರಲಕ್ಷ್ಮೀ

6. ದ್ವಿಭುಜ ವೀರಲಕ್ಷ್ಮೀ

ದಕ್ಷಿಣಂ ತ್ವಭಯಂ ಚೈವ ಉತ್ತರಂ ವರದಂತಥಾ ।
ಊರುಪದ್ಮದಳಾಕಾರಾ ವೀರಶ್ರೀಮೂರ್ತಿ ಲಕ್ಷಣಂ ॥
(ಪಾಂಚರಾತ್ರಾಗಮ)

ಎರಡು ಕೈಗಳಿವೆ. ಅಭಯ ವರದ ಮುದ್ರೆಗಳಲ್ಲಿವೆ. ತಾವರೆ ದಳಗಳಂತಹ ತೊಡೆಗಳನ್ನು ಹೊಂದಿದ್ದಾಳೆ. ಬಂಗಾರದ ವರ್ಣದವಳಾಗಿದ್ದಾಳೆ.

ದ್ವಿಭುಜ ವೀರಕ್ಷ್ಮೀ

ದ್ವಿಭುಜ ವೀರಲಕ್ಷ್ಮೀ

7. ಅಷ್ಟಭುಜ ವೀರಲಕ್ಷ್ಮೀ

ಪಾಶಾಂಕುಶಾಕ್ಷಸೂತ್ರವರಾಭಯಗದಾಪದ್ಮ ಪಾತ್ರಹಸ್ತಾ ಕಾರ್ಯಾ ।
(ಪಾಂಚರಾತ್ರಾಗಮ)

ಎಂಟು ಕೈಗಳನ್ನು ಹೊಂದಿರುವ ರೂಪ, ಕೈಗಳಲ್ಲಿ ಪಾಶ, ಅಂಕುಶ, ಜಪಮಾಲೆ, ಗದೆ, ಪದ್ಮ, ಪಾತ್ರೆ ಮತ್ತು ವರದ ಅಭಯ ಮುದ್ರೆ ಇದೆ.



ಅಷ್ಟಭುಜ ವೀರಲಕ್ಷ್ಮೀ

ಅಷ್ಟಭುಜ ವೀರಲಕ್ಷ್ಮೀ

8. ಪ್ರಸನ್ನಲಕ್ಷ್ಮೀ

ವಂದೇ ಲಕ್ಷ್ಮೀಂ ಪರಶಿವಮಯೀಂ ಶುದ್ಧ ಜಾಂಬೂನದಾಭಾಂ
ತೇಜೋರೂಪಾಂ ಕನಕವಸನಾಂ ಸರ್ವಭೂಷೋಜ್ವಲಾಂಗೀಂ ।
ಬೀಜಾಪೂರಂ ಕನಕಕಲಶಂ ಹೇಮಪದ್ಮಂ ದಧಾನಾಮ್
ಆದ್ಯಾಂ ಶಕ್ತೀಂ ಸಕಲಜನನೀಂ ವಿಷ್ಣು ವಾಮಾಂಕ ಸಂಸ್ಥಾಂ ॥

(ಅಥರ್ವಣರಹಸ್ಯ)

ವಿಷ್ಣುವಿನ ಎಡತೊಡೆಯ ಮೇಲೆ ಕುಳಿತಿರುವ ರೂಪ. ಬೀಜಾಪೂರ, ಹೇಮಕುಂಭ ಹಾಗೂ ಕಮಲಗಳನ್ನು ಹಿಡಿದಿದ್ದಾಳೆ. ಹೊಂಬಣ್ಣದ ಮೈ ಉಳ್ಳವಳು.



ಪ್ರಸನ್ನಲಕ್ಷ್ಮೀ

ಪ್ರಸನ್ನಲಕ್ಷ್ಮೀ

9. ದುರ್ಗಾ

ಸಿಂಹಸ್ಥಾ ಶಶಿಶೇಖರಾ ಮರಕತ ಪ್ರಖ್ಯೈಶ್ಚತುರ್ಭಿರ್ಭುಜೈಃ ।
ಶಂಖಂಚಕ್ರಧನುಃ ಶರಾಂಶ್ಚ ದಧತೀ ನೇತ್ರಸ್ತ್ರಿಭಿಶ್ಶೋಭಿತಾ ॥

ಆಮುಕ್ತಾಂಗದಹಾರಕಂಕಣರಣತ್ಕಾಂಚೀಕಣನ್ನೂಪುರಾ।
ದುರ್ಗಾ ದುರ್ಗತಿಹಾರಿಣೀ ಭವತು ನೋ ರತ್ನೋಲ್ಲಸತ್ಕುಂಡಲಾ ॥

ಸಿಂಹದ ಮೇಲೆ ಕುಳಿತಿದ್ದಾಳೆ. ಶಿರದಲ್ಲಿ ಚಂದ್ರನಿದ್ದಾನೆ. ನಾಲ್ಕು ಕರಗಳಿಂದ ಕಂಗೊಳಿಸುತ್ತಿದ್ದಾಳೆ. ಕರಗಳಲ್ಲಿ ನಿಜಹಸ್ತದಲ್ಲಿ ಬಾಣ ಮತ್ತು ಧನುಸ್ಸು ಪರಹಸ್ತದಲ್ಲಿ ಶಂಖಚಕ್ರಗಳಿವೆ. ತ್ರಿನೇತ್ರೆಯೂ ಹೌದು. ಕರ್ಣಗಳಲ್ಲಿ ರತ್ನಕುಂಡಲಗಳಿವೆ. ಸರ್ವಾಭರಣಭೂಷಿತೆಯಾದ ದುರ್ಗೆ ದುರ್ಗತಿಯನ್ನು ಹೋಗಲಾಡಿಸುವವಳಾಗಿದ್ದಾಳೆ.

ದುರ್ಗಾ

10. ಸರಸ್ವತೀ

ದೇವೀ ಸರಸ್ವತೀ ಕಾರ್ಯಾ ಸರ್ವಾಭರಣ ಭೂಷಿತಾ ।
ಚತುರ್ಭುಜಾ ಸಾ ಕರ್ತವ್ಯಾ ತಥೈವ ಚ ಸಮಸ್ಥಿತಾ ॥
ಪುಸ್ತಕಂ ಚಾಕ್ಷಮಾಲಾಂ ಚ ತಸ್ಯಾ ದಕ್ಷಿಣಹಸ್ತಯೋಃ ।
ವಾಮಯೋಶ್ಚ ತಥಾ ಕಾರ್ಯಂ ವೈಣವೀಂ ಚ ಕಮಂಡಲುಂ ।
ಸಮಪಾದಾ ಪ್ರತಿಷ್ಠಾಪ್ಯಾ ಕಾರ್ಯಾ ಸೌಮ್ಯಮುಖೀ ಸಿತಾ ।
(ನೃಸಿಂಹಪ್ರಸಾದ)

ನಾಲ್ಕು ಕೈಗಳು ; ಜಪಮಾಲೆ, ಪುಸ್ತಕ, ಕಮಂಡಲು, ವೀಣೆಗಳಿವೆ. ಸೌಮ್ಯ ಮುಖಭಾವ ಹೊಂದಿದ ಸರಸ್ವತೀ ಸಮಭಂಗಿಯಲ್ಲಿ ಕುಳಿತಂತೆ ಅಥವಾ ನಿಂತಿರುವಂತಿರುತ್ತಾಳೆ. ದೇಹದ ಬಣ್ಣ ಬಿಳಿಯಾಗಿದ್ದು ಸರ್ವಾಭರಣಭೂಷಿತೆಯಾಗಿದ್ದಾಳೆ.

ಸರಸ್ವತೀ

11. ಸರಸ್ವತೀ

ಸರಸ್ವತೀ ಚತುರ್ಹಸ್ತಾ ಶ್ವೇತಪದ್ಮಾಸನಾಂಚಿತಾ
ಜಟಾಮುಕುಟ ಸಂಯುಕ್ತಾ ಶುಕ್ಲವರ್ಣಾ ಸಿತಾಂಬರಾ ।
ಯಜ್ಞೋಪವೀತ ಸಂಯುಕ್ತಾ ಮುಕ್ತಾಹಾರ ಸುಲೋಚನಾ
ಸರ್ವಾಭರಣ ಸಂಯುಕ್ತಾ ರಕ್ತಕುಂಡಲ ಮಂಡಿತಾ ।
ವ್ಯಾಖ್ಯಾಮುದ್ರಾಂಚಾಕ್ಷ ಸೂತ್ರಂ ದಕ್ಷಿಣೇತು ಕರದ್ವಯೇ
ಪುಸ್ತಕಂ ಕುಂಡಿಕಾಂ ವಾಮೇ ತ್ರಿನೇತ್ರಾ ಚಾರು ರೂಪಿಣೆ ॥

(ಕಾಶ್ಯಪಶಿಲ್ಪ)

ಬಿಳಿಯ ಕಮಲದ ಮೇಲೆ ಸರಸ್ವತಿಯು ಆಸೀನಳಾಗಿದ್ದಾಳೆ. ನಾಲ್ಕು ಕರಗಳು; ಕ್ರಮವಾಗಿ ವ್ಯಾಖ್ಯಾನಮುದ್ರೆ (ಜ್ಞಾನಮುದ್ರೆ), ಅಕ್ಷಮಾಲೆ, ಪುಸ್ತಕ ಹಾಗೂ ಕುಂಡಿಕಾ (ಕಮಂಡಲು)ವನ್ನು ಹಿಡಿದಿದ್ದಾಳೆ. ಶಿರೋಭಾಗದಲ್ಲಿ ಜಟಾ ಮುಕುಟವಿದೆ. ಯಜ್ಞೋಪವೀತವೂ ಇದೆ. ಸರ್ವಾಭರಣಗಳಿಂದ ಭೂಷಿತಳಾಗಿದ್ದಾಳೆ. ದೇಹದ ಬಣ್ಣ ಬಿಳಿ, ಉಟ್ಟಿರುವ ಬಟ್ಟೆ ಕೂಡ ಬಿಳಿಯ ಬಣ್ಣದ್ದಾಗಿದೆ. ಮೂರು ಕಣ್ಣುಗಳಿಂದ ಶೋಭಿಸುತ್ತಿದ್ದಾಳೆ.



ಸರಸ್ವತೀ

12. ಅನ್ನಪೂರ್ಣ

ವಾಮೇ ಮಾಣಿಕ್ಯಪಾತ್ರಂ ಮಧುರಸಭರಿತಂ ವಿಭ್ರತೀಂ ಪಾಣಿ ಪದ್ಮೇ
ಹಾವ್ಯೈರತ್ನೈಃ ಪ್ರಪೂರ್ಣಾಂ ಧೃತಮಣಿವಲಯೇ ದಕ್ಷಿಣೇ ರತ್ನದರ್ವೀಮ್ ।
ರಕ್ತಾಂಗೀಂ ಪೀನತುಂಗಸ್ತನಭರವಿಲಸತ್ತಾರಹಾರಾಂ ತ್ರಿಣೇತ್ರಾಂ
ವಂದೇ ಪೂರ್ಣೇಂದುಬಿಂಬಪ್ರತಿನಿಧಿವದನಾಮಂಬಿಕಾಮನ್ನಪೂರ್ಣಾಮ್ ॥

(ಕಾರಣಾಗಮ)

ಪೂರ್ಣಚಂದ್ರನ ಕಾಂತಿಯಂತಿರುವ ಸುಂದರ ಮುಖ. ಎರಡು ಕೈಗಳು ಬಲಗೈಯಲ್ಲಿ ರತ್ನ ಖಚಿತವಾದ ಸೌಟು (ರತ್ನದರ್ವೀ) ಎಡಗೈಯಲ್ಲಿ ಅಮೃತದಿಂದ ತುಂಬಿದ ಮಾಣಿಕ್ಯಪಾತ್ರ. ರತ್ನ, ಮಣಿಗಳಿಂದಾದ ಆಭರಣಗಳನ್ನು ಧರಿಸಿದ್ದಾಳೆ. ಕೆಂಪು ಬಣ್ಣದ ದೇಹ. ಜೊತೆಗೆ ಅನುಪಮವಾದ ದೇಹ ಸೌಂದರ್ಯ. ಮೂರು ಕಣ್ಣುಗಳನ್ನು ಹೊಂದಿದ್ದಾರೆ.

13. ಚಾಮುಂಡೇಶ್ವರಿ

ಶ್ರೀಮತ್ಕಾರ್ಣಾಟ ರಾಜ್ಯಶ್ರೀರಾಜೇಂದ್ರ ಕುಲದೇವತಾಮ್ ।
ಮಹಾಬಲಾಚಲಾವಾಸಾಂ ಶ್ಯಾಮಾಮಷ್ಟಭುಜಾನ್ವಿತಾಮ್ ॥

ಕೌಸುಂಬವಸನೋಪೇತಾಂ ದಿವ್ಯಕಂಚುಕಧಾರಿಣೀಮ್ ।
ಅಪ್ರಾಕೃತ ವಿಭೂಷಾಢ್ಯಾಂ ತೇಜಸ್ತ್ರಯ ವಿಲೋಚನಾಮ್ ॥

ದುರ್ಗಾಂ ದೇವ್ಯಾದಿಸಂಸ್ತುತ್ಯಾಂ ಸರ್ವಚೈತನ್ಯ ರೂಪಿಣೀಮ್ ।
ಚಂಡಮುಂಡಾಶಿರಶ್ಛೇತ್ರೀಂ ಮಹಿಷಾಸುರಮರ್ದಿನೀಮ್ ॥

ಸಿಂಹಾರೂಢಾಂ ಚಂದ್ರಚೂಡಾಂ ರುಂಡಮಾಲಾವಿಭೂಷಿತಾಮ್ ।
ಶೂಲಾಸಿಶಂಖಚಕ್ರಾದಿಧಾರಿಣೀಂ ಜಯದಾಯಿನೀಮ್ ॥

(ಶ್ರೀತತ್ತ್ವನಿಧಿ)

ಚಾಮುಂಡಿಯು ಶ್ಯಾಮವರ್ಣಳು. ಎಂಟು ಕೈಗಳಿವೆ, ತ್ರಿಶೂಲ, ಧನುರ್ಬಾಣಗಳು, ಖಡ್ಗ ಗುರಾಣಿಗಳು, ಶಂಖಚಕ್ರಗಳಿವೆ. ತ್ರಿನೇತ್ರಳೂ ಹೌದು. ದಿವ್ಯಾಭರಣಗಳನ್ನು ಧರಿಸಿದ್ದಾಳೆ. ಚಂಡ ಮುಂಡರನ್ನು ಸಂಹಾರ ಮಾಡಿದವಳು ಈಕೆಯೇ. ಇಲ್ಲಿ ಮಹಿಷಾಸುರನನ್ನು ಕೊಲ್ಲುತ್ತಿದ್ದಾಳೆ. ದೇವಿಯ ತಳಭಾಗದಲ್ಲಿ ತಲೆ ತರಿದ ಕೋಣ ಬಿದ್ದಿದೆ; ಅದರ ಕತ್ತಿನಿಂದ ಮಹಿಷಾಸುರ ಕಾಣಿಸಿಕೊಂಡಿದ್ದಾನೆ. ದೇವಿಯು ತನ್ನ ಬಲಗಾಲನ್ನು ರಾಕ್ಷಸನ ಮೇಲಿಟ್ಟು ತುಳಿಯುತ್ತಿದ್ದಾಳೆ. ದೇವಿಯು ಸಿಂಹದ ಮೇಲೆ ಇದ್ದಾಳೆ. ಶಿರದಲ್ಲಿ ಚಂದ್ರನನ್ನು ಧರಿಸಿದ್ದಾಳೆ.

ಚಾಮುಂಡೇಶ್ವರಿ

ಚಾಮುಂಡೇಶ್ವರಿ

14. ಗಾಯತ್ರಿ

ದೇವೀಂ ಪೂರ್ವಾಹ್ಣ ಸಂಧ್ಯಾಯಂ ಗಾಯತ್ರೀಂ ವಹ್ನಿ ರೂಪಿಣೀಮ್
ಕುಮಾರೀಂ ರಕ್ತ ವಸ್ತ್ರಾಂಗೀಂ ರಕ್ತಸ್ರಗನುಲೇಪನಾಮ್ ।

ಚತುರ್ಭುಜಾಂ ಚತುರ್ವಕ್ತ್ರಾಂ ವರದಾಂಚಾಷ್ಟಲೋಚನಾಮ್
ಪದ್ಮಾಕ್ಷಮಾಲಾವಲಯಂ ಬಿಭ್ರತೀಂ ದಕ್ಷಿಣೇ ಕರೇ ॥

ವಾಮೇಕಮಂಡಲುಂ ಪಾಣೌ ಸ್ರುವಂಸವ್ಯೇತರೇ ಕರೇ
ಅಭಯಂ ವಾಮಹಸ್ತೇ ಚ ಪದ್ಮಪೀಠೇ ಪ್ರತಿಷ್ಠಿತಾಮ್ ॥

ಋಗ್ವೇದ ರೂಪಿಣೀಂ ಪ್ರಾತಸ್ಸವನಾಂ ಹಂಸವಾಹನಾಮ್
ರಸಾಯನಾಂ ಚ ಬೃಹತೀಂ ಗಾರ್ಹಪತ್ಯೇ ಪ್ರತಿಷ್ಠಿತಾಮ್ ॥

(ಮಾರ್ಕಾಂಡೇಯಪುರಾಣ)

ನಾಲ್ಕು ಮುಖಗಳು, ಎಂಟು ಕಣ್ಣುಗಳು, ಹಾಗೂ ನಾಲ್ಕು ಕರಗಳನ್ನು ಹೊಂದಿರುವ ರೂಪ. ಕೈಗಳಲ್ಲಿ ಕ್ರಮವಾಗಿ ವರದಮುದ್ರೆ, ಜೊತೆಯಲ್ಲಿ ಅಕ್ಷಮಾಲೆ, ಸ್ರುವ, (ಯಜ್ಞಗಳಲ್ಲಿ ಬಳಸುವ ಸೌಟಿನ ಆಕಾರದ ಪರಿಕರ), ಕಮಂಡಲು ಮತ್ತು ಅಭಯ ಮುದ್ರೆಯಿದೆ. ಪದ್ಮಪೀಠದಲ್ಲಿ ಕುಳಿತಿದ್ದಾಳೆ.

ಹಂಸವನ್ನು ವಾಹನವಾಗಿಸಿಕೊಂಡಿದ್ದಾಳೆ. ಕೆಂಪು ಹಾರ, ಕೆಂಪು ವಸ್ತ್ರ ಹಾಗೂ ಕೆಂಪಾದ ಮೈ ಬಣ್ಣವಿದ್ದು ಅಗ್ನಿರೂಪಿಣಿಯಾಗಿ ಕಾಣುತ್ತಿದ್ದಾಳೆ. ಕಾಲವಿಭಾಗದಿಂದಾಗಿ ಬೆಳಗಿನ ದೇವಿಯು ಗಾಯತ್ರಿ, ಮಧ್ಯಾಹ್ನ ಸಾವಿತ್ರಿ, ಸಾಯಂ ಸರಸ್ವತಿ ಎನಿಸಿದ್ದಾಳೆ. ಋಗ್ವೇದವು ಗಾಯತ್ರಿ, ಯರ್ಜುವೇದವು ಸಾವಿತ್ರಿ, ಸಾಮವೇದವು ಸರಸ್ವತಿ ರೂಪ ಎನ್ನುವುದಾಗಿ ತಿಳಿಯುತ್ತಾರೆ. ಗಾಯತ್ರಿಯು ಗಾರ್ಹಪತ್ಯಾಗ್ನಿಯಲ್ಲಿ, ಸಾವಿತ್ರಿ ದಕ್ಷಿಣಾಗ್ನಿಯಲ್ಲಿ ಸರಸ್ವತಿ ಆಹವನಾಗ್ನಿಯಲ್ಲಿ ಪ್ರತಿಷ್ಠಿತರಾಗಿದ್ದಾರೆ.

ಗಾಯತ್ರಿ

15. ರಾಜರಾಜೇಶ್ವರೀ

ಚತುರ್ಭುಜೇ ಚಂದ್ರಕಲಾವತಂಸೇ
ಕುಚೋನ್ನತೇ ಕುಂಕುಮರಾಗಶೋಣೇ ।
ಪುಂಡ್ರೇಕ್ಷು ಪಾಶಾಂಕುಶ ಪುಷ್ಪಬಾಣ
ಹಸ್ತೇ ನಮಸ್ತೇ ಜಗದೇಕಮಾತಾ ॥

ಜಗತ್ತಿಗೇ ಮಾತೃಸ್ವರೂಪಳು. ನಾಲ್ಕು ಕರಗಳನ್ನು ಹೊಂದಿದ್ದಾಳೆ. ನಿಜಹಸ್ತದಲ್ಲಿ ಬಲಗೈಯಲ್ಲಿ ಬಾಣವಾಗಿಸಿಕೊಂಡು ಎಡಗೈನಲ್ಲಿ ಕಬ್ಬನ್ನೆ ಬಿಲ್ಲಾಗಿಸಿ ಹಿಡಿದುಕೊಂಡಿದ್ದಾಳೆ. ಪರಹಸ್ತದಲ್ಲಿ ಪಾಶ ಮತ್ತು ಅಂಕುಶಗಳನ್ನು ಹಿಡಿದಿದ್ದಾಳೆ. ಕೆಂಪು ಬಣ್ಣದವಳಾದ ಮಾತೆಯ ಶಿರವು ಚಂದ್ರನಿಂದ ಭೂಷಿತವಾಗಿದೆ.

ರಾಜರಾಜೇಶ್ವರೀ

ರಾಜರಾಜೇಶ್ವರೀ

16. ಕಾಮಕಲೇಶ್ವರೀ

ಪಂಕಜ ಪಾಶೇಕ್ಷುಧನುಃ
ಕಿಂಶುಕ ಶಾಲ್ಯಗ್ರಪಂಚಬಾಣಧರಾಮ್ ।
ಸತತಾಭಯ ವರಹಸ್ತಾಂ
ಕಲಯೇ ಕಾಮಪಿ ಕಲಾಧರಾಮಂಬಾಮ್ ॥

(ಮಹಾಲಕ್ಷ್ಮೀರತ್ನಕೋಶ)

ಎಂಟು ಕರಗಳಿವೆ. ಕ್ರಮವಾಗಿ ಅಭಯ ಮುದ್ರೆ, ಧಾನ್ಯದ ತೆನೆಗಳು, ಕಮಲ, ಐದು ವಿಧವಾದ ಪುಷ್ಪಗಳು, ಕಬ್ಬು, ಪುಷ್ಪ ಪಾಶ ಹಾಗೂ ವರದ ಹಸ್ತವಿದೆ. ತನ್ನ ಕಿರೀಟದಲ್ಲಿ ಚಂದ್ರನನ್ನು ಹೊಂದಿದ್ದಾಳೆ.

ಕಾಮಕಲೇಶ್ವರೀ

ಕಾಮಕಲೇಶ್ವರೀ

17. ಭುವನೇಶ್ವರೀ

ಉದ್ಯದ್ದಾಸ್ವತ್ಸಮಾಭಾಂ ವಿಜಿತನವಜಪಾಮಿಂದುಖಂಡಾವನದ್ಧಾಂ
ಜ್ಯೋತಿರ್ಮಾಲಾಂ ತ್ರಿಣೇತ್ರಾಂ ವಿವಿಧ ಮಣಿಲಸತ್ಕುಂಡಲಾಂ ಪದ್ಮಸಂಸ್ಥಾಮ್ ।
ಹಾರಗ್ರೈವೇಯ ಕಾಂಚೀ ಮಣಿಗಣವಲಯೈಃ ಸಂಯುತಾಮಂಬರಾಢ್ಯಾ
ಅದ್ಯಾಂ ಪಾಶಾಂಕುಶಾಭ್ಯಾಮಭಯವರಕರಾಂಭಾವಯೇ ದ್ಭೌವನೇಶೀಮ್ ॥

-(ಮಹಾಲಕ್ಷ್ಮೀರತ್ನಕೋಶ)

ಸೂರ್ಯಕಾಂತಿಗೆ ಸಮವಾದ ಶರೀರಕಾಂತಿಯನ್ನು ಹೊಂದಿರುವ ರೂಪ. ಪದ್ಮದಲ್ಲಿ ಕುಳಿತಿದ್ದಾಳೆ. ಮೂರು ಕಣ್ಣುಗಳಿವೆ. ನಾಲ್ಕು ಕೈಗಳು; ಕ್ರಮವಾಗಿ ಅಭಯ ಮುದ್ರೆ, ಅಂಕುಶ, ಪಾಶ ಹಾಗೂ ವರದ ಮುದ್ರೆಗಳನ್ನು ಹೊಂದಿದ್ದಾಳೆ. ಶಿರದಲ್ಲಿ ಚಂದ್ರರೇಖೆಯಿದೆ. ದೇವಿಯ ಮೈಬಣ್ಣ ಕೆಂಪು.



ಭುವನೇಶ್ವರೀ

ಭುವನೇಶ್ವರೀ

18. ಗೌರಿ

ಶ್ಯಾಮಾಂ ತಿಣೇತ್ರಾಂ ದ್ವಿಭುಜಾಂ ತ್ರಿಭಂಗೀಮ್
ಸವ್ಯಾಪಸವ್ಯಸ್ಥಿತ ಕುಂಚಿತಾಂಘ್ರೀಮ್।
ಸವ್ಯೇತು ನೀಲೋತ್ಪಲ ಪಾಣಿ ಮೀಡೇ
ದೇವಸ್ಯ ವಾಮಸ್ಥಿತ ಪದ್ಮಪೀಠಾಮ್ ॥

ಶ್ಯಾಮವರ್ಣಳು. ತ್ರಿನೇತ್ರವನ್ನು ಹೊಂದಿದ್ದಾಳೆ. ಎರಡು ಕರಗಳು. ಬಲಗೈಯಲ್ಲಿ ನೈದಿಲೆ ಇದೆ. ಎಡಗಾಲು ಸ್ಥಿರವಾಗಿದ್ದು ಬಲಗಾಲನ್ನು ಸ್ವಲ್ಪವೇ ಬಗ್ಗಿಸಿ ತ್ರಿಭಂಗಿಯಲ್ಲಿ ನಿಂತಿದ್ದಾಳೆ. ದೇವಿಯು ಪದ್ಮದ ಮೇಲಿದ್ದಾಳೆ.

ಗೌರಿ

ಸಪ್ತಮಾತೃಕೆಯರು

19. ಬ್ರಾಹ್ಮೀ

ಚತುರ್ವಕ್ತ್ರಾ ಷಡ್ಭುಜಾ ಹಂಸಸಂಸ್ಥಿತಾ ।
ಪಿಂಗಾಭಾ ಭೂಷಣೋಪೇತಾ ಮೃಗಚರ್ಮೋತ್ತರೀಯ್ಯಕಾ ।
ವರಂ ಸೂತ್ರಂ ಸ್ರುವಂ ಧತ್ತೇ ದಕ್ಷಬಾಹುತ್ರಯೇ ಕ್ರಮಾತ್ ।
ವಾಮೇತು ಪುಸ್ತಕಂ ಕುಂಡೀಂ ಬಿಭ್ರತೀ ಚಾಭಯಪ್ರದಮ್ ।

ನಾಲ್ಕು ಮುಖಗಳಿವೆ. ಆರು ಕರಗಳು; ಕ್ರಮವಾಗಿ ವರದ ಮುದ್ರೆ, ಅಕ್ಷಮಾಲೆ, ಸ್ರುಕ್, ಪುಸ್ತಕ, ಕುಂಡಿಕೆ ಹಾಗೂ ಅಭಯ ಮುದ್ರೆಯನ್ನು ಧರಿಸಿದ್ದಾಳೆ. ಹಂಸದ ಮೇಲೆ ಕುಳಿತಿದ್ದಾಳೆ. ಕೃಷ್ಣಾಜಿನವನ್ನು ಉತ್ತರೀಯವಾಗಿ ಹೊದ್ದಿದ್ದಾಳೆ. ಹಳದೀ ಮೈಬಣ್ಣ ಹೊಂದಿದ್ದಾಳೆ.

ಬ್ರಾಹ್ಮೀ

ಬ್ರಾಹ್ಮೀ

20. ಮಾಹೇಶ್ವರೀ

ಮಾಹೇಶ್ವರೀ ವೃಷಾರೂಢಾ ಪಂಚವಕ್ತ್ರತ್ರಿಲೋಚನಾ ।
ಶ್ವೇತವರ್ಣಾ ದಶಭುಜಾ ಚಂದ್ರರೇಖಾವಿಭೂಷಿತಾ ।
ಖಡ್ಗಂ ವಜ್ರಂ ತ್ರಿಶೂಲಂ ಚ ಪರಶುಂ ಚಾಭಯಂ ವರಂ ।
ಪಾಶಂ ಘಂಟಾಂ ತಥಾ ನಾಗಮಂಕುಶಂ ಬಿಭ್ರತೀ ಕರೈಃ ॥

ಐದು ಮುಖಗಳಿವೆ. ಪ್ರತಿ ಮುಖವೂ ಮೂರು ಕಣ್ಣುಗಳಿಂದ ಕೂಡಿದೆ. ಹತ್ತು ಕೈಗಳು; ಕ್ರಮವಾಗಿ ಅಭಯ ಮುದ್ರೆ, ಕೊಡಲಿ, ಖಡ್ಗ, ವಜ್ರಾಯುಧ, ತ್ರಿಶೂಲ, ನಾಗಪಾಶ, ಪಾಶ, ಅಂಕುಶ, ಘಂಟೆ ಹಾಗೂ ವರದ ಮುದ್ರೆಯನ್ನು ಹೊಂದಿದ್ದಾಳೆ. ತಲೆಯ ಮೇಲೆ ಚಂದ್ರರೇಖೆ ಇದೆ. ವೃಷಭದ ಮೇಲೆ ಕುಳಿತಿದ್ದಾಳೆ.



ಮಾಹೇಶ್ವರೀ

ಮಾಹೇಶ್ವರೀ

21. ಕೌಮಾರೀ

ಷಡಾನನಾ ತು ಕೌಮಾರೀ ಪಾಟಲಾಭಾ ಸುಶೀಲಕಾ ।
ರವಿಬಾಹುರ್ಮಯೂರಸ್ಥಾ ವರದಾ ಶಕ್ತಿಧಾರಿಣೀ ।
ಪತಾಕಾಂ ಬಿಭ್ರತೀ ದಂಡಂ ಪಾತ್ರಂ ಬಾಣಂ ಚ ದಕ್ಷಿಣೇ ।
ವಾಮೇಚಾಪಮಧೋ ಘಂಟಾಂ ಕಮಲಂ ತು ಕುಕ್ಕಟಂ ತಥಾ ।
ಪರಶುಂ ಬಿಭ್ರತೀ ಚೈವ ತದಧಸ್ತ್ವಭಯಾನ್ವಿತಾ ।

ಆರು ಮುಖಗಳು. ಹನ್ನೆರಡು ಕರಗಳಿವೆ; ಕ್ರಮವಾಗಿ ವರದ ಮುದ್ರೆ, ಶಕ್ತ್ಯಾಯುಧ, ಪತಾಕೆ, ದಂಡ, ಪಾತ್ರೆ, ಬಾಣ, ಬಿಲ್ಲು, ಕಮಲ, ಕೋಳಿ, ಕೊಡಲಿ, ಘಂಟೆ ಹಾಗೂ ಅಭಯ ಮುದ್ರೆಗಳಿವೆ. ನವಿಲನ್ನೇರಿ ಕುಳಿತಿದ್ದಾಳೆ. ಪಾಟಲವರ್ಣದವಳು.



ಕೌಮಾರೀ

ಕೌಮಾರೀ

22. ವೈಷ್ಣವೀ

ವೈಷ್ಣವೀ ತಾರ್ಕ್ಷ್ಯಗಾ ಶ್ಯಾಮಾ ಷಡ್ಭುಜಾ ವನಮಾಲಿನೀ ।
ವರದಾ ಗದಿನೀ ದಕ್ಷೇ ಭಿಭ್ರತೀ ಚ ಕರೇಂಬುಜಂ ।
ಶಂಖಚಕ್ರಾಭಯಾನ್ವಾಮೇ ಸಾ ಚೆಯಂ ವಿಲಸದ್ಭುಜಾ ।

ಆರು ಕರಗಳು ; ಕ್ರಮವಾಗಿ ವರದಮುದ್ರೆ, ಪದ್ಮ, ಗದೆ, ಚಕ್ರ, ಶಂಖ ಹಾಗೂ ಅಭಯ ಮುದ್ರೆಯನ್ನು ಹೊಂದಿದ್ದಾಳೆ. ಗರುಡನ ಮೇಲೆ ಕುಳಿತಿದ್ದಾಳೆ. ವನಮಾಲೆಯನ್ನು ಧರಿಸಿದ್ದಾಳೆ. ನೀಲವರ್ಣದವಳಾಗಿದ್ದಾಳೆ.



ವೈಷ್ಣವೀ

ವೈಷ್ಣವೀ

23. ವಾರಾಹೀ

ಕೃಷ್ಣವರ್ಣಾ ತು ವಾರಾಹೀ ಮಹಿಷಸ್ಥಾ ಮಹೋದರೀ ।
ವರದಾ ದಂಡಿನೀ ಖಡ್ಗಂ ಬಿಭ್ರತೀ ದಕ್ಷಿಣೇ ಕರೇ ।
ಖೇಟಪಾತ್ರಾಭಯಾನ್ವಾಮೇ ಸೂಕರಸ್ಯಾ ಲಸದ್ಭುಜಾ ।

ಆರು ಕೈಗಳು ; ಕ್ರಮವಾಗಿ ವರದ ಮುದ್ರೆ, ದಂಡ, ಖಡ್ಗ ಗುರಾಣಿ, ಪಾತ್ರೆ ಹಾಗೂ ಅಭಯ ಮುದ್ರೆ ಇದೆ. ಹಂದಿಯ ಮುಖವನ್ನು ಹೊಂದಿದ್ದಾಳೆ. ದೊಡ್ಡ ಹೊಟ್ಟೆ, ಕಪ್ಪುಬಣ್ಣದ ಮೈ, ಕೋಣವನ್ನೇರಿ ಕುಳಿತಿದ್ದಾಳೆ.



ವಾರಾಹೀ

ವಾರಾಹೀ

24. ಐಂದ್ರೀ (ಇಂದ್ರಾಣಿ)

ಐಂದ್ರೀ ಸಹಸ್ರದೃಕ್ಸೌಮ್ಯಾ ಹೇಮಾಭಾ ಗಜಸಂಸ್ಥಿತಾ ।
ವರದಾ ಸೂತ್ರಿಣೀ ವಜ್ರಂ ಬಿಭ್ರತ್ಯೂರ್ಧ್ವಂ ತು ದಕ್ಷಿಣೇ ।
ವಾಮೇ ತು ಕಮಲಂ ಪಾತ್ರಂ ಹ್ಯಭಯಂ ತದದಃ ಕರೇ ।

ಆರು ಕರಗಳು; ಕ್ರಮವಾಗಿ ಅಭಯಹಸ್ತ, ಪಾಶ, ವಜ್ರಾಯುಧ, ಕಮಲ, ಪಾತ್ರೆ, ವರದ ಹಸ್ತವಿದೆ. ಸೌಮ್ಯಸ್ವಭಾವ. ಬಂಗಾರಬಣ್ಣದವಳು. ಆನೆಯನ್ನೇರಿ ಕುಳಿತಿದ್ದಾಳೆ.



ಐಂದ್ರೀ (ಇಂದ್ರಾಣಿ)

ಐಂದ್ರೀ (ಇಂದ್ರಾಣಿ)

25. ಚಾಮುಂಡಾ

ಚಾಮುಂಡಾ ಪ್ರೇತಗಾ ಕೃಷ್ಣಾ ವಿಕೃತಾ ಚಾಹಿಭೂಷಣಾ ।
ದಂಷ್ಟ್ರಾಳಾ ಕ್ಷೀಣದೇಹಾ ಚ ಗರ್ತಾಕ್ಷೀ ಕಾಮರೂಪಿಣೀ ।
ದಿಗ್ಬಾಹು ಕ್ಷಾಮಕುಕ್ಷಿಶ್ಚ ಮುಸಲಂ ಛತ್ರ ಚಾಮರೇ ।
ಅಂಕುಶಂ ಬಿಭ್ರತೀ ಖಡ್ಗಂ ದಕ್ಷಿಣೇ ಚಾಥ ವಾಮಕೆ ।
ಖೇಟಪಾಶಂ ಧನುರ್ದಂಡಂ ಕುಠಾರಂ ಚೇತಿ ಬಿಭ್ರತೀ ।

ಹತ್ತು ಕೈಗಳು; ಒನಕೆ, ಛತ್ರ, ಚಾಮರ, ಅಂಕುಶ, ಕತ್ತಿ, ಗುರಾಣಿ, ಪಾಶ, ಬಿಲ್ಲು, ಬಾಣ, ಕೊಡಲಿಗಳನ್ನು ಹಿಡಿದಿರುವವಳು. ಹೆಣದ ಮೇಲೆ ಕುಳಿತಿದ್ದಾಳೆ. ಕಪ್ಪುಬಣ್ಣ ಹಾಗೂ ವಿಕೃತಗೊಂಡ ದೇಹ. ಗುಳಿಬಿದ್ದ ಕಣ್ಣುಗಳು. ಕೃಶವಾದ ದೇಹ. ಸೊರಗಿದ ಹೊಟ್ಟೆ , ಹಾವುಗಳೇ ಆಭರಣಗಳಾಗಿವೆ.



ಚಾಮುಂಡಾ

26. ಚಂಡಿಕಾ

ಚಂಡಿಕಾ ಶ್ವೇತವರ್ಣಾ ಸಾ ಶಿವರೂಪಾ ಚ ಸಿಂಹಗಾ ।
ಜಟಿಲಾ ವರ್ತುಳತ್ರ್ಯಕ್ಷಾ ವರದಾ ಶೂಲಧಾರಿಣೀ ।
ಕರ್ತ್ರಿಕಾಂ ಭಿಭ್ರತೀ ದಕ್ಷೇ ಪಾಶಪಾತ್ರಾಭಯಾನ್ವಿತಾ ॥
(ನೃಸಿಂಹಪ್ರಸಾದ)

ಚಂಡಿಕೆಯು ಸಿಂಹದ ಮೇಲೇರಿ ಸಾಗುತ್ತಿದ್ದಾಳೆ. ತಲೆಗೂದಲು ಜಟೆಯಾಗಿ ಕಟ್ಟಲ್ಪಟ್ಟಿದೆ. ಮೂರು ಕಣ್ಣುಗಳಿವೆ. ಆರು ಕೈಗಳು. ಕೈಗಳಲ್ಲಿ ಆಭಯ ವರದ ಮುದ್ರೆಗಳು, ಶೂಲ, ಕತ್ತರಿ, ಪಾರ, ಪಾತ್ರೆಯನ್ನು ಹಿಡಿದಿದ್ದಾಳೆ. ಬಿಳಿಯ ಬಣ್ಣದವಳಾಗಿದ್ದಾಳೆ.

ಕೆಲವು ಸಂಪ್ರದಾಯಗಳಲ್ಲಿ ಚಾಮುಂಡಿಯ ಬದಲ ಚಂಡಿಕೆಯನ್ನು ಸೇರಿಸಿಕೊಳ್ಳುವ ಕ್ರಮವಿದೆ.

ಮೇಲಿನ ಎಂಟೂ ಶ್ಲೋಕಗಳನ್ನು ನೃಸಿಂಹಪ್ರಸಾದದಿಂದ ಆಯ್ದುಕೊಳ್ಳಲಾಗಿದೆ.

ಚಂಡಿಕಾ

ಚಂಡಿಕಾ

3. ವಿಷ್ಣು

ವ್ಯಾಪಕತ್ವಾತ್ ವಿಷ್ಣುಃ ; ಎಲ್ಲದರಲ್ಲಿಯೂ ಇರುವವನು, ಎಲ್ಲ ಕಡೆ ವ್ಯಾಪಿಸಿರುವವನು ಮತ್ತು ಎಲ್ಲವನ್ನೂ ಒಳಗೊಂಡವನು ಎಂಬರ್ಥವಿದೆ. ವಿಷ್ಣುವಿನ ರೂಪಗಳು ಹಲವು. ಅವುಗಳಲ್ಲಿ ಪ್ರಧಾನವಾಗಿ ಹತ್ತು ಅವತಾರಗಳು ಮತ್ತು ಇಪ್ಪತ್ನಾಲ್ಕು ರೂಪಗಳನ್ನು ಪುರಾಣಾದಿಗಳಲ್ಲಿ ಉಲ್ಲೇಖಿಸುತ್ತಾರೆ. ದಶಾವತಾರಗಳಲ್ಲಿ ಪ್ರತಿಯೊಂದು ಅವತಾರವೂ ವಿಭಿನ್ನ ರೂಪವನ್ನೇ ಹೊಂದಿದೆ. ಇವುಗಳಲ್ಲಿ ರಾಮ, ಕೃಷ್ಣ ಮತ್ತು ನರಸಿಂಹ ಹೆಚ್ಚು ಜನಪ್ರಿಯ.

ಇಪ್ಪತ್ನಾಲ್ಕು ಬೇರೆ ಬೇರೆ ಹೆಸರುಗಳಿಂದ ಸೂಚಿಸಲ್ಪಡುವ ವಿಷ್ಣುರೂಪಗಳೆಲ್ಲವೂ ಸಮಸ್ಥಾನಕದಲ್ಲಿವೆ. ಸೌಮ್ಯವದನ, ಕಿರೀಟಮುಕುಟ, ಮಕರಕುಂಡಲ, ಪೀತಾಂಬರ, ಎದೆಯ ಮೇಲೆ ಶ್ರೀವತ್ಸಲಾಂಛನ, ಕೌಸ್ತುಭಹಾರ, ವನಮಾಲೆ ಹಾಗೂ ನಾಲ್ಕು ಕೈಗಳು 24 ಮೂರ್ತಿಗಳಲ್ಲೂ ನೋಡಬಹುದು. ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ ಕೂಡ ಇದೆ. ಕೇವಲ ಈ ಆಯುಧಗಳನ್ನು ಹಿಡಿದಿರುವ ಕ್ರಮದಿಂದಾಗಿ, ಕ್ರಮವ್ಯತ್ಯಾಸದಿಂದಾಗಿ ಇವು ಬೇರೆ ಬೇರೆ ಎನಿಸಿಕೊಂಡಿವೆ.

ಪದ್ಮವು ಸೃಷ್ಟಿಸಂಕೇತ, ಚಕ್ರವು ಸ್ಥಿತಿ ಸಂಕೇತ, ಗದೆ ಸಂಹಾರದ ಸಂಕೇತ ಹಾಗೂ ಶಂಖವು ಮುಕ್ತಿಗೆ ಸಂಕೇತವಾಗಿದೆ.

ಉಳಿದಂತೆ ವಿಷ್ಣುಮೂರ್ತಿಗಳಲಿ ಸ್ಥಾನಕ, ಆಸೀನ, ಶಯಾನ ಮತ್ತು ಯಾನಕವೆಂಬ ವಿಧಗಳನ್ನು ಗುರುತಿಸುತ್ತಾರೆ. ಮೇಲೆ ಹೇಳಿದಲ್ಲಿ ಚತುರ್ವಿಂಶತಿ ಮೂರ್ತಿಗಳೆಲ್ಲ ಸ್ಥಾನಕ(ನಿಂತಿರುವ ರೀತಿ)ದಲ್ಲಿವೆ. ಪರವಾಸುದೇವನೆಂದು ಕರೆಯಲ್ಪಡುವ ರೂಪ ಆಸೀನ ಸ್ಥಿತಿಯಲ್ಲಿದೆ. ನರಸಿಂಹನ ಕೆಲವು ರೂಪಗಳೂ ಆಸೀನವಾಗಿಯೇ ಇವೆ. ಶಯಾನ ಸ್ಥಿತಿಯಲ್ಲಿರುವವನು ರಂಗನಾಥನೊಬ್ಬನೇ ಎಂದರೂ ತಪ್ಪಾಗಲಾರದು. ತ್ರಿವಿಕ್ರಮನ ರೂಪವು ಯಾನಕಭಂಗಿಯಲ್ಲಿದೆ. ಈ ರೀತಿಯಾದ ನಾಲ್ಕು ಭೇದಗಳಲ್ಲಿ ಮತ್ತೆ ಯೋಗ, ಭೋಗ, ವೀರ ಮತ್ತು ಆಭಿಚಾರಿಕ ಎಂಬ ನಾಲ್ಕು ಪ್ರಭೇದಗಳಿವೆ.

ವೈಖಾನಸ ಮತ್ತು ಪಾಂಚರಾತ್ರಾಗಮಗಳಲ್ಲಿ ವಿಶೇಷವಾಗಿ ವಿಷ್ಣುವಿನ ಕುರಿತೇ ಉಲ್ಲೇಖಗಳಿವೆ.

1. ವಿಷ್ಣು (ಅನಂತಶಯನ)

ದೇವದೇವಸ್ತು ಕರ್ತವ್ಯಂ ಶೇಷಸುಪ್ತೋ ದ್ವಿಬಾಹುಕಃ ।
ಏಕಪಾದೋಽಸ್ಯ ಕರ್ತವ್ಯೋ ಲಕ್ಷ್ಮ್ಯುತ್ಸಂಗಗತಃ ಪ್ರಭೋಃ
ತಥಾಪರಶ್ಚ ಕರ್ತವ್ಯಶ್ಶೇಷಭೋಗಾಂಕ ಸಂಸ್ಥಿತಃ ॥
ಏಕಃ ಕರೋಽಸ್ಯ ಕರ್ತವ್ಯಸ್ಸವ್ಯಜಾನೌ ಪ್ರಸಾರಿತಃ ॥
ಕರ್ತವ್ಯೋ ಮೂರ್ಧಶಸ್ಸ್ತಥಾ ತಸ್ಯಾಪರಃ ಕರಃ ॥
ನಾಭಿಸಂಭೂತಕಮಲೇ ಸುಖಾಸೀನಃ ಪಿತಾಮಹಃ
ನಾಳಲಗ್ನೌ ತು ಕರ್ತವ್ಯೌ ಪದ್ಮಸ್ಯ ಮಧುಕೈಟಭೌ ।
ಶಂಖಚಕ್ರಗದಾದೀನಿ ಮೂರ್ತಾನಿ ಪರಿತೋ ನ್ಯಸೇತ್ ॥

(ಪದ್ಮಪುರಾಣ)

ವಿಷ್ಣುವು ಶೇಷನ ಮೇಲೆ ಮಲಗಿರುವ ರೂಪ. ಎರಡೇ ಕೈಗಳು. ಎಡಗೈಯನ್ನು ಚಾಚಿ ಮಂಡಿಯ ಮೇಲಿರಿಸಿಕೊಂಡಿದ್ದಾನೆ. ಬಲಗೈ ತಲೆಯಡಿಯಲ್ಲಿದೆ. ಮಲಗಿರುವ ಭಂಗಿಯಲ್ಲಿ ಒಂದು ಕಾಲು ಲಕ್ಷ್ಮಿಯ ತೊಡೆಯ ಮೇಲಿದೆ; ಇನ್ನೊಂದು ಶೇಷನ ಮೈಮೇಲಿದೆ. ವಿಷ್ಣುವಿನ ನಾಭಿಯಿಂದ ಕಮಲವೊಂದು ಮೇಲೆದ್ದು ಅದರಲ್ಲಿ ಬ್ರಹ್ಮ ಕುಳಿತಿದ್ದಾನೆ. ಕಮಲದ ದಂಟಿನ ಸಮೀಪ ಮಧುಕೈಟಭರೆಂಬ ಅಸುರರನ್ನು ಕಾಣಿಸಬೇಕು. ವಿಷ್ಣುವಿನ ಆಯುಧಗಳನ್ನು ಸುತ್ತಲೂ ತೋರಿಸಬೇಕು. ವಿಷ್ಣು ಕಾರ್ಮೋಡಬಣ್ಣದವನಾಗಿದ್ದಾನೆ.



ವಿಷ್ಣು
(ಅನಂತಶಯನ)



ವಿಷ್ಣು (ಅನಂತಶಯನ)

2. ವೈಕುಂಠನಾರಾಯಣ

ಸವ್ಯಂ ಪಾದಂ ಪ್ರಸಾರ್ಯಂ ಶ್ರಿತದುರಿತಹರಂ ದಕ್ಷಿಣಂ ಕುಂಚಯಿತ್ವಾ
ಜಾನುನ್ಯಾಧಾಯ ಸವ್ಯೇಽತರಭುಜಂ ನಾಗಭೋಗೇ ನಿಧಾಯ ।
ಪಶ್ಚಾದ್ಬಾಹುದ್ವಯೇನ ಪ್ರತಿಭಟಶಮನೇ ಧಾರಯನ್ ಶಂಖಚಕ್ರೇ
ದೇವೀ ಭೂಷಾದಿ ಜುಷ್ಟೋ ಜನಯತಿ ಜಗತಾಂ ಶರ್ಮ ವೈಕುಂಠನಾಥಃ ॥

(ಅಷ್ಟಾಕ್ಷರೀಕಲ್ಪ)

ವಿಷ್ಣುವು ಶೇಷನ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಎಡಗಾಲು ಕೆಳಗೆ ಚಾಚಿದೆ. ಬಲಗಾಲು ಮೇಲೆತ್ತಿ ಮಡಚಿದೆ. ನಿಜಹಸ್ತದ ಬಲಗೈ ಮಂಡಿಯ ಮೇಲಿದೆ. ಎಡಗೈ ಹಾವಿನ ಮೇಲೆ ಊರಿಕೊಂಡಿದ್ದಾನೆ. ಪರಹಸ್ತಗಳಲ್ಲಿ ಶಂಖಚಕ್ರಗಳಿವೆ.



ವೈಕುಂಠನಾರಾಯಣ

3. ವಿಷ್ಣು

ಉದ್ಯದ್ಕೋಟಿ ದಿವಾಕರಾಭಮನಿಷಂ ಶಂಖಂ ಗದಾಂ ಪಂಕಜಮ್
ಚಕ್ರಂಬಿಭ್ರತಮಿಂದಿರಾವಸುಮತೀ ಸಂಶೋಭಿ ಪಾರ್ಶ್ವದ್ವಯಮ್ ।
ಕೋಟೀರಾಂಗದ ಹಾರಕುಂಡಲಧರಮ್ ಪೀತಾಂಬರಮ್ ಕೌಸ್ತುಭೋ-
ದ್ದೀಪ್ತಂ ವಿಶ್ವದರಂ ಸ್ವವಕ್ಷಸಿ ಲಸಚ್ಛ್ರೀವತ್ಸ ಚಿಹ್ನಂ ಭಜೇ ॥

ಇಂದಿರಾ ಹಾಗೂ ವಸುಮತಿಯರನ್ನ ತನ್ನೆರಡೂ ಪಕ್ಕಗಳಲ್ಲಿ ಕುಳ್ಳಿರಿಸಿಕೊಂಡಿರುವ ವಿಷ್ಣುವು ಉದಯಿಸುತ್ತಿರುವ ಸೂರ್ಯನಂತೆ ಶೋಭಿಸುತ್ತಿದ್ದಾನೆ. ನಾಲ್ಕು ಕೈಗಳಿವೆ; ಕ್ರಮವಾಗಿ ಕಮಲ, ಶಂಖ, ಚಕ್ರ, ಗದೆಗಳನ್ನು ಹಿಡಿದಿದ್ದಾನೆ. ಕೌಸ್ತುಭದಿಂದ ಬೆಳಗುತ್ತಿರುವ ವಕ್ಷಸ್ಥಲದಲ್ಲಿ ಶ್ರೀವತ್ಸ ಲಾಂಛನವಿದೆ.



ವಿಷ್ಣು

4. ಮತ್ಸ್ಯಮೂರ್ತಿ

ವಾಮೇ ಶಂಖಂ ಗದಾಂ ದಕ್ಷೇ ದ್ವಿಭುಜೋ ಮತ್ಸ್ಯರೂಪಧೃತ್ ।
ನರಾಂಘ್ರಿರ್ಮತ್ಸ್ಯರೂಪೋ ವಾ ಮತ್ಸ್ಯರೂಪಿ ಜನಾರ್ದನಃ ॥
(ಪಾಂಚರಾತ್ರ)

ಮತ್ಸ್ಯರೂಪದ ವಿಷ್ಣುವು ದ್ವಿಭುಜನಾಗಿದ್ದು ಎಡಗೈಯಲ್ಲಿ ಶಂಖ ಹಾಗೂ ಬಲಗೈಯಲ್ಲಿ ಗದೆಯನ್ನು ಹಿಡಿದಿದ್ದಾನೆ. ಕೆಳಭಾಗವು ಮೀನಿನದೇ ಆಗಿದ್ದು ಮೇಲ್ಭಾಗ ಪುರುಷಾಕೃತಿ ಇರಬಹುದು. ಅಥವಾ ಕಾಲುಗಳು ಮನುಷ್ಯರೀತಿಯಲ್ಲಿರಬಹುದು.

ಇಲ್ಲಿರುವ ಚಿತ್ರದಲ್ಲಿ ನಾಲ್ಕು ಕರಗಳಿದ್ದು ಕ್ರಮವಾಗಿ ಅಭಯ, ಚಕ್ರ, ಶಂಖ ಹಾಗೂ ವರದ ಮುದ್ರೆಯನ್ನು ಹೊಂದಿದ್ದು, ದೇಹದ ಕೆಳಭಾಗ ಮೀನಿನ ರೀತಿಯಲ್ಲಿದೆ.

ಮತ್ಸ್ಯಮೂರ್ತಿ



ಮತ್ಸ್ಯಮೂರ್ತಿ

5. ಕೂರ್ಮ

ಕೂರ್ಮಸ್ತು ಕಚ್ಛಪಾಕಾರೋ ಮತ್ಸ್ಯರೂಪೋಕ್ತರೂಪಮಾನ್ ॥

(ಪಾಂಚರಾತ್ರ)

ಕೂರ್ಮರೂಪವೂ ಕೂಡ ಮತ್ಸ್ಯಾಕಾರದ ಲಕ್ಷಣವನ್ನೇ ಹೊಂದಿದ್ದು ಮೀನಿನ ಆಕಾರದ ಬದಲು ಆಮೆಯ ಆಕಾರವನ್ನು ಮಾಡಬೇಕು.

ಇಲ್ಲಿರುವ ಚಿತ್ರದಲ್ಲಿ ನಾಲ್ಕು ಕರಗಳಿದ್ದು ಅಭಯ ಮುದ್ರೆ, ಚಕ್ರ, ಶಂಖ ಹಾಗೂ ವರದ ಮುದ್ರೆಯನ್ನು ಹೊಂದಿವೆ. ದೇಹದ ಕೆಳಭಾಗ ಆಮೆಯ ಆಕಾರವನ್ನು ಹೊಂದಿದೆ.

ಕೂರ್ಮ



ಕೂರ್ಮ

6. ವರಾಹ

ಕೃಷ್ಣಾಂಗಂತ್ವತಿನೀಲವಕ್ತ್ರನಲಿನಂ ಪದ್ಮಸ್ಥಿತಂ ಸ್ವಾಂಕಗ-
ಕ್ಷೋಣೀಶಕ್ತಿಮುದಾರ ಬಾಹುಭಿರತೋ ಶಂಖಂಗದಾಮಂಬುಜಮ್ ।
ಚಕ್ರಂ ಬಿಭ್ರತಮುಗ್ರಕಾಂತಿಮನಿಷಂ ದೇವಂ ವರಾಹಂ ಭಜೇ ॥

ಪದ್ಮದ ಮೇಲೆ ಕುಳಿತಿದ್ದಾನೆ. ಭೂದೇವಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಒಂದು ಕೈಯಿಂದ ಆಲಂಗಿಸಿಕೊಂಡಿದ್ದಾನೆ. ಉಳಿದ ಕೈಗಳಲ್ಲಿ ಕಮಲ, ಶಂಖ ಮತ್ತು ಗದೆಯನ್ನು ಹಿಡಿದುಕೊಂಡಿದ್ದಾನೆ. ವರಾಹರೂಪಿಯು ಕೃಷ್ಣವರ್ಣದವನಾಗಿದ್ದಾನೆ.

ವರಾಹ

ವರಾಹ

7. ನೃಸಿಂಹ

ಜ್ವಲದಗ್ನಿ ಸಮಾಕಾರಂ ಸಿಂಹವಕ್ತ್ರಂ ನರಾಂಗಕಮ್
ದಂಷ್ಟ್ರಾಕರಾಳವದನಂ ಲೋಲಜಿಹ್ವಾಸುಭೀಷಣಮ್ ॥
ವೃತ್ತಾಸ್ಯಂ ಜಟಿಲಂ ಕ್ರುದ್ಧಮಾಲೀಢಂ ಪೀನವಕ್ಷಸಮ್
ಅಭೇದ್ಯತೀಕ್ಷ್ಣನಖರಮಾತ್ಮೋರುಕೃತದಾನವಮ್ ॥
ತದ್ವಕ್ಷೋ ದಾರಯಂತಂ ಚ ಕರಾಭ್ಯಾಂ ನಖರೈರ್ಭೃಶಮ್
ಗದಾಚಕ್ರಧರಂ ದ್ವಾಭ್ಯಾಂ ನೃಸಿಂಹಂ ಪ್ರಣವತ್ಪ್ರಭುಮ್ ॥

(ಪಾಂಚರಾತ್ರ)

ಸಿಂಹಮುಖ, ಮನುಷ್ಯದೇಹವಿರುವ ರೂಪ ಉರಿವ ಅಗ್ನಿಯಂತೆ ಭಯಂಕರವಾಗಿ ತೋರುತ್ತಿದೆ. ನಾಲಿಗೆ ಹೊರಚಾಚಿದೆ. ವಿಶಾಲವಾದ ಎದೆಯಿದ್ದು ನಾಲ್ಕು ಕರಗಳಿವೆ. ತನ್ನ ನಿಜಹಸ್ತಗಳಿಂದ ದಾನವನಾದ ಹಿರಣ್ಯಕಶಿಪುವನ್ನು ಸೀಳುತ್ತಿದ್ದಾನೆ. ಕೈಗಳು ಚೂಪಾದ ಉಗುರುಗಳನ್ನು ಹೊಂದಿದೆ. ಪರಹಸ್ತದಲ್ಲಿ ಚಕ್ರ ಮತ್ತು ಗದೆಗಳಿವೆ. ಒಂದು ಕಾಲನ್ನು ಮೇಲಿಟ್ಟು ಇನ್ನೊಂದು ಕಾಲನ್ನು ಕೆಳಗೆ ಇಳಿಬಿಟ್ಟು (ಆಲೀಢಪಾದ) ಕುಳಿತಿದ್ದಾನೆ. ಮೈಬಣ್ಣ ಶ್ವೇತವರ್ಣ.

ನೃಸಿಂಹ



ನೃಸಿಂಹ

8. ಲಕ್ಷ್ಮೀನೃಸಿಂಹ

ಶರಚ್ಚಂದ್ರನಿಭಂ ದೇವಂ ಶಂಖಚಕ್ರವರಾಭಯಾನ್
ಬಿಭ್ರಾಣಂ ಪುಂಡರೀಕಾಕ್ಷಂ ಲಕ್ಷ್ಮ್ಯಾಲಂಕೃತವಿಗ್ರಹಮ್ ।
ಸಿಂಹವಕ್ತ್ರಂ ಮಹಾಕಾಯಂ ನೃಸಿಂಹಂ ಹೃದಿಭಾವಯೇ ॥

ಸಿಂಹಮುಖ, ಪುರುಷಶರೀರವುಳ್ಳ ರೂಪ. ಲಕ್ಷ್ಮಿಯು ಎಡತೊಡೆಯ ಮೇಲಿದ್ದಾಳೆ. ಶುಭ್ರವಾದ ಮೈಬಣ್ಣವನ್ನು ಹೊಂದಿದ ನೃಸಿಂಹನಿಗೆ ನಾಲ್ಕು ಕೈಗಳು; ಕ್ರಮವಾಗಿ ಅಭಯ ಮುದ್ರೆ, ಚಕ್ರ, ಶಂಖ ಮತ್ತು ವರದ ಮುದ್ರೆ ಇದೆ. ಲಕ್ಷ್ಮಿಯ ಕೈಯಲ್ಲಿ ಕಮಲವಿದೆ.

ಲಕ್ಷ್ಮೀನೃಸಿಂಹ

ಲಕ್ಷ್ಮೀನೃಸಿಂಹ

9. ಪಂಚವಕ್ತ್ರನಾರಸಿಂಹ

ಪಂಚವಕ್ತ್ರಂ ಮಹಾಭೀಮಂ ಕಾಲಾನಲಸಮಪ್ರಭಮ್ ।
ಮುಂಡಮಾಲಾಧರಂ ರೌದ್ರಂ ಕಂಠಹಾರೇಣ ಶೋಭಿತಮ್ ।
ಚಂದ್ರಮೌಳಿಂ ನೀಲಕಂಠಂ ಪ್ರತಿವಕ್ತ್ರಂ ತ್ರಿಲೋಚನಮ್ ।
ಭುಜೈಃ ಪರಿಘಸಂಕಾಶೈರ್ದಶಭಿಶ್ಚೋಪಶೋಭಿತಮ್ ।
ಅಕ್ಷಸೂತ್ರಂ ಗದಾಂ ಪದ್ಮಂ ಶಂಖಂ ಗೋಕ್ಷೀರಸನ್ನಿಭಮ್ ।
ಧನುಶ್ಚ ಮುಸಲಂ ಚೈವ ತಥಾಚಕ್ರಂ ಮಹತ್ಪ್ರಭಮ್ ।
ಖಡ್ಗಂ ಚ ಶೂಲಪಾಶೇಚ ನೃಸಿಂಹಂ ರುದ್ರರೂಪಿಣಮ್ ।
ಇಂದ್ರಗೋಪಕನೀಲಾಭಂ ಚಂದ್ರಾಭಂ ಸ್ವರ್ಣವರ್ಣಕಂ ।
ಬಿಭ್ರಾಣಂ ಸರ್ವಜಗತಾಮಾಧಾರಂ ಗಿರಿಕನ್ಯಕೇ ।
ಶರೀರೇ ರಕ್ತವರ್ಣಃ ಮುಖೇಶು ವರ್ಣಾನಾಂ ಪಂಚಕಮ್ ।

(ಮಂತ್ರಸಾರ)

ಐದು ಮುಖಗಳ ನರಸಿಂಹನ ರುದ್ರರೂಪವಿದು. ರುದ್ರನಂತೆಯೇ ಮುಂಡಮಾಲಾಧರ, ನೀಲಕಂಠ, ತ್ರಿನೇತ್ರ, ನಾಗಯಜ್ಞೋಪವೀತಿ. ಹತ್ತು ಕೈಗಳು ಜಪಮಾಲೆ, ಬಾಣ, ಖಡ್ಗ ಚಕ್ರ, ತ್ರಿಶೂಲ, ಶಂಖ, ಬಿಲ್ಲು, ಗದೆ, ಒನಕೆ, ಪಾಶಗಳನ್ನು ಹಿಡಿದಿವೆ. ನಾಲ್ಕು ಮುಖಗಳು ನಾಲ್ಕು ದಿಕ್ಕಿಗೆ ತಿರುಗಿದ್ದು ಒಂದು ಮುಖವು ಮೇಲಿದೆ. ಮೈಬಣ್ಣ ಕೆಂಪಾಗಿದ್ದು ಒಂದೊಂದು ಮುಖ ಒಂದೊಂದು ಬಣ್ಣ.

ಪಂಚವಕ್ತ್ರನಾರಸಿಂಹ

ಪಂಚವಕ್ತ್ರನಾರಸಿಂಹ

10. ಯೋಗಾನರಸಿಂಹ

ವಂದೇಹಂ ನೃಹರಿಂ ಯೋಗಪಟ್ಟವಿರಾಜಿತಮ್ ।
ಜ್ಞಾನ್ವೋಪರಿನ್ಯಸ್ತ ಸಾಚೀಕೃತ ಭುಜದ್ವಯಮ್ ॥
ಶಂಖಂ ಚೈವ ಚಕ್ರಂ ಬಿಭ್ರಾಣಮಪರೈಃ ಕರೈಃ ।
ಸೌಮ್ಯಂ ಯದ್ಯಪಿ ಕೋಟಿಸೂರ್ಯಸಮಪ್ರಭಮ್ ॥

ಯೋಗಪಟ್ಟದಲ್ಲಿ ವಿರಾಜಿಸುತ್ತಿರುವ ರೂಪ. ಸೌಮ್ಯವಾಗಿದ್ದಾನೆ. ನಾಲ್ಕು ಕರಗಳು; ಮುಂದಿನ ಕೈಗಳು ಮೊಣಕಾಲಿನ ಮೇಲೆ ಹರಡಿಕೊಂಡಿವೆ. ಪರಹಸ್ತಗಳಲ್ಲಿ ಶಂಖ ಮತ್ತು ಚಕ್ರಗಳಿವೆ.

ಯೋಗಾನರಸಿಂಹ



ಯೋಗಾನರಸಿಂಹ

11. ವಾಮನ

ಕುಂಡೀ ಛತ್ರಧರೋ ದ್ವಾಭ್ಯಾಂ ವಾಮನಃ ಪರಿಕೀರ್ತಿತಃ ॥

(ಪಾಂಚರಾತ್ರ)

ಎರಡು ಕರಗಳಿರುವ ರೂಪ. ಒಂದರಲ್ಲಿ ಕಮಂಡಲು ಇನ್ನೊಂದರಲ್ಲಿ ಕೊಡೆಯನ್ನು ಧರಿಸಿದ್ದಾನೆ.

ವಾಮನ



ವಾಮನ

12. ತ್ರಿವಿಕ್ರಮ

ದಕ್ಷಾಂಘ್ರಿವ್ಯಾಪ್ತಪಾತಾಲಂ
ವಾಮಾಂಘ್ರಿವ್ಯಾಪ್ತಭೂತಲಮ್
ದಕ್ಷಿಣಂ ಪುನರುತ್ಥಾಯ
ಸ್ವರ್ಗವ್ಯಾಪ್ತಿಕರಂ ಹರಿಮ್ ।
ಅಭಯಮ್ ವಾಮಹಸ್ತೇನ
ಕುರ್ವಂತಂ ಚ ಸುರೇಶ್ವರಮ್
ಗಂಗೌಘಧೌತಪಾದಾಬ್ಜಂ
ಧ್ಯಾಯೇದ್ಬ್ರಹ್ಮಾದಿಕಸ್ತುತಮ್ ॥

ಬಲಗಾಲು ಪಾತಾಲವನ್ನು ಆಕ್ರಮಿಸಿ ಪುನಃ ಸ್ವರ್ಗದವರೆಗೆ ಅದೇ ಕಾಲನ್ನು ವಿಸ್ತರಿಸಿರುವ ತ್ರಿವಿಕ್ರಮ ರೂಪ. ಎಡಗಾಲು ಭೂಮಿಯನ್ನು ವ್ಯಾಪಿಸಿಕೊಂಡಿದೆ. (ನಾರದೀಯ ಸಂಹಿತೆಯ ಪ್ರಕಾರ ಎಡ ಅಥವಾ ಬಲಗಾಲನ್ನು ಮೇಲೆತ್ತಿರಬಹುದು.) ಸಾಮಾನ್ಯ ಎಂಟು ಕರಗಳನ್ನು ಮಾಡುವುದು ವಾಡಿಕೆ. (ಇವು ಗ್ರಂಥಗಳನ್ನು ಆಧರಿಸಿ ಬೇರೆ ಬೇರೆಯಾಗಿವೆ). ಕ್ರಮವಾಗಿ ಗದೆ, ಖಡ್ಗ, ಶರ, ಚಕ್ರ, ಶಂಖ, ಬಿಲ್ಲು, ಗುರಾಣಿ ಮತ್ತು ಸೂಚೀಮುದ್ರೆಯಾಗಿದೆ. ಸ್ವರ್ಗವನ್ನಾವರಿಸಿದ ಪಾದಗಳ ಮೇಲೆ ಗಂಗೆಯು ಹರಿಯುತ್ತಿದ್ದಾಳೆ. ತ್ರಿವಿಕ್ರಮನ ಬುಡದಲ್ಲಿ ಅವನ ಮೊದಲ ರೂಪವಾದ ವಾಮನ ಹಾಗೂ ಬಲಿಯನ್ನು ಸಹ ತೋರಿಸಬೇಕು.

ತ್ರಿವಿಕ್ರಮ

13. ಪರಶುರಾಮ

ಕ್ಷತ್ರಾಂತಕರಣಂ ಘೋರಮುದ್ವಹನ್ ಪರಶುಂ ಕರೇ ।
ಜಾಮದಗ್ನಶ್ಚ ಕರ್ತವ್ಯೋ ರಾಮಶ್ಶತ್ರುನಿಷೂದನಃ ॥
(ಪಾಂಚರಾತ್ರ)

ಕ್ಷತ್ರಿಯರನ್ನು ಕೊಲ್ಲಲು ಘೋರವಾದ ಕೊಡಲಿಯನ್ನು ಹಿಡಿದು ಹೊರಟಿರುವ ರೂಪ. ಜಮದಗ್ನಿಯ ಮಗನಾಗಿ ಕಾಣಿಸಿಕೊಂಡಿದ್ದಾನೆ. ಬಂಗಾರದ ಮೈಬಣ್ಣವಿದೆ.

ಪರಶುರಾಮ

ಪರಶುರಾಮ

14. ರಾಮ

ನೀಲಾಂಬುಜ ಶ್ಯಾಮಲ ಕೋಮಲಾಂಗಮ್
ಸೀತಾಸಮಾರೋಪಿತ ವಾಮಭಾಗಮ್ ।
ಪಾಣೌಮಹಾಸಾಯಕ ಚಾರು ಚಾಪಮ್
ನಮಾಮಿ ರಾಮಂ ರಘುವಂಶನಾಥಮ್ ॥

ಸೀತೆಯನ್ನು ತನ್ನೆಡಭಾಗದಲ್ಲಿ ಒಡಗೊಂಡಿದ್ದಾನೆ (ರಘುವಂಶದಲ್ಲಿ ಅವತರಿಸಿರುವ ರಾಮ). ಒಂದು ಕೈಯಲ್ಲಿ ಬಾಣವೂ ಇನ್ನೊಂದು ಕೈಯಲ್ಲಿ ಧನಸ್ಸೂ ಇದೆ. ಮೈಬಣ್ಣ ಶ್ಯಾಮಲವರ್ಣ.



ರಾಮ

ರಾಮ



ರಾಮ



ಪಟ್ಟಾಭಿರಾಮ

15. ಪಟ್ಟಾಭಿರಾಮ

ವಾಮೇ ಭೂಮಿಸುತಾ ಪುರಸ್ತು ಹನುಮಾನ್ಪಶ್ಚಾತ್ಸುಮಿತ್ರಾಸುತೋ
ಶತ್ರುಘ್ನೋ ಭರತಶ್ಚ ಪಾರ್ಶ್ವದಲಯೋರ್ವಾಯ್ವಾದಿಕೋಣೇಷು ಚ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ತಾರಾಸುತೋ ಜಾಂಬವಾನ್
ಮಧ್ಯೇ ನೀಲಕೋಮಲ ರುಚಿಂ ರಾಮಂಭಜೇ ಶ್ಯಾಮಲಮ್ ॥

(ರಾಮಾಷ್ಟೋತ್ತರ)

ರಾಮನ ಎಡಗಡೆ ಸೀತೆ ಇದ್ದಾಳೆ. ಉಳಿದೆಡೆಗಳಲ್ಲಿ ಲಕ್ಷ್ಮಣ, ಶತ್ರುಘ್ನ, ಭರತ, ಹನುಮಂತರಿದ್ದಾರೆ.

16. ಕೃಷ್ಣ

ಅಂಸಾಲಂಬಿತವಾಮಕುಂಡಲಭರಂ ಮಂದೋನ್ನತ ಭ್ರೂಲತಂ
ಕಿಂಚಿತ್ಕುಂಚಿತಕೋಮಲಾಧರಪುಟಂ ಸಾಚೀಪ್ರಚಾರೇಕ್ಷಣಮ್ ।
ಆಲೋಲಾಂಗುಲಿಪಲ್ಲವೈರ್ಮುರಲಿಕಾಮಾಪೂರಯಂತಂ ಮುದಾ
ಮೂಲೇಕಲ್ಪತರೋಸ್ತ್ರಿಭಂಗಿಲಲಿತಂ ಜಾನೇಜಗನ್ಮೋಹನಮ್ ॥

(ಲೀಲಾಶುಕನ ಶ್ರೀಕೃಷ್ಣಕರ್ಣಾಮೃತ)

ಶಿರವನ್ನು ಎಡಗಡೆ ವಾಲಿಸಿರುವ ಕೃಷ್ಣನ ಎಡಕಿವಿಯ ಕುಂಡಲ ಭುಜವನ್ನು ತಾಕುತ್ತಿದೆ. ಕೆಳದುಟಿಯನ್ನು ಸ್ವಲ್ಪವೇ ಅಗಲಿಸಿ ಕೊಳಲನ್ನೂದುತ್ತಿದ್ದಾನೆ. ಕಡೆಗಣ್ಣನೋಟವಿದೆ. ಬೆರಳುಗಳು ಕೊಳಲಿನ ಮೇಲಿನ ಚಲನೆಯಿಂದಾಗಿ ಮುರಲಿಯ ನಾದ ಮುದವನ್ನು ಕೊಡುತ್ತಿದೆ. ತ್ರಿಭಂಗಿಯಲ್ಲಿರುವ ರೂಪ. ಕಲ್ಪವೃಕ್ಷದ ಬುಡದಲ್ಲಿ ಕೃಷ್ಣನು ನಿಂತಿದ್ದಾನೆ ಎನ್ನುವುದನ್ನು ಶ್ಲೋಕ ಹೇಳುತ್ತಿದೆ.

ಭಂಗಿಗಳಲ್ಲಿ ತ್ರಿಭಂಗಿಯೇ ಅತ್ಯಂತ ಮನೋಹರವಾದುದು ಮತ್ತು ಲಾಲಿತ್ಯಪೂರ್ಣವಾದುದು ಸಹ. ತ್ರಿಭಂಗಿಯೆಂದರೆ ಕೃಷ್ಣ ಕೃಷ್ಣನೆಂದರೆ ತ್ರಿಭಂಗಿಯೆನ್ನುವಷ್ಟು ಅನ್ಯೋನ್ಯಾಶ್ರಿತವಾಗಿದೆ.

ಕೃಷ್ಣ

ಕೃಷ್ಣ

17. ಮದನಗೋಪಾಲ

ರಕ್ತವರ್ಣೋ ದಶಭುಜಃ ಸರ್ವಾಲಂಕಾರ ಭೂಷಿತಃ ।
ಶಂಖಚಕ್ರಗದಾಪದ್ಮ ಪಾಶಾಂಕುಶಸುಮಾಶುಗಾನ್ ।
ಇಕ್ಷುಕೋದಂಡಮನ್ಯಾಭ್ಯಾಂ ವಾದಯನ್ವೇಣುಮಾದರಾತ್
ಷೋಡಶಚ್ಛದ ಪದ್ಮಸ್ಥ ಷಟ್ಕೋಣೋಪರಿಸಂಸ್ಥಿತಃ ।
ಗೋಪಾಲೋ ಮದನಾಖ್ಯೋಽಯಂ ಮಂದಸ್ಮಿತ ಮುಖಾಂಬುಜಃ ।
ಸ್ವರಪತ್ರಸ್ಥ ಗೋಪೀಭಿರಾದರಾದೀಕ್ಷಿತೋಽವತಾತ್ ॥

(ಪಾಂಚರಾತ್ರ)

ವಿಷ್ಣು ಹಾಗೂ ಮನ್ಮಥನ ಲಕ್ಷಣಗಳು ಕೂಡಿರುವ ಕೃಷ್ಣರೂಪ. ಹತ್ತು ಕೈಗಳು, ನಿಜಹಸ್ತದಲ್ಲಿ ಕೊಳಲನ್ನೂದುತ್ತಿದ್ದಾನೆ. ಪರಹಸ್ತಗಳಲ್ಲಿರುವ ಶಂಖ, ಚಕ್ರ, ಗದೆ, ಪದ್ಮಗಳು ವಿಷ್ಣುವಿನವು ಹಾಗೂ ಪಾಶ, ಅಂಕುಶ, ಕಬ್ಬಿನ ಬಿಲ್ಲು, ಹೂಬಾಣಗಳು ಮನ್ಮಥನ ಚಿಹ್ನೆಗಳು. ಷೋಡಷದಳ ಪದ್ಮದ ಮೇಲೆ ಷಟ್ಕೋಣಯಂತ್ರ ; ಅದರ ಮೇಲೆ ಮದನಗೋಪಾಲನಿದ್ದಾನೆ. ಕೊಳಲನ್ನೂದುತ್ತ ಗೋಪಿಯರನ್ನು ಆಕರ್ಷಿಸುತ್ತಿದ್ದಾನೆ.

ಮದನಗೋಪಾಲ

ಮದನಗೋಪಾಲ

18. ಬುದ್ಧ

ಕಾಷಾಯವಸ್ತ್ರಸಂವೀತಃ ಸ್ಕಂಧಸಂಸಕ್ತಚೀವರಃ
ಪದ್ಮಾಸನಸ್ಥೋ ದ್ವಿಭುಜೋ ಧ್ಯೇಯೋ ಬುದ್ಧಃ ಪ್ರಕೀರ್ತಿತಃ ॥

ಬುದ್ಧನನ್ನು ಕಾವಿಬಟ್ಟೆಯನ್ನು ಹೊದ್ದಂತೆ, ಹೆಗಲ ಮೇಲೆ ಭಿಕ್ಷುಗಳ ಚೀವರವನ್ನು ಧರಿಸಿದಂತೆ, ಎರಡು ಕೈಯಲ್ಲಿ ಪದ್ಮಾಸನದಲ್ಲಿ ಕುಳಿತಂತೆ ರಚಿಸಬೇಕು. ಮೈಬಣ್ಣ ನಸುಗೆಂಪು.

ಬುದ್ಧ

19. ಕಲ್ಕಿ

ಖಡ್ಗೋದ್ಯತಕರಃ ಕ್ರುದ್ಧೋ ಹಯಾರೂಢೋ ಮಹಾಬಲಃ ।
ಮ್ಲೆಚ್ಛಚ್ಛೇದಕರಃ ಕಲ್ಕೀ ದ್ವಿಭುಜಃ ಪರಿಕೀರ್ತಿತಃ ॥

(ಪಾಂಚರಾತ್ರ)

ಎರಡು ಭುಜಗಳನ್ನು ಹೊಂದಿದ್ದಾನೆ. ಖಡ್ಗವಿದೆ. ಮನುಷ್ಯದೇಹಕ್ಕೆ ಕುದುರೆ ಮುಖವಿರುವ ರೂಪ. ಕುದುರೆಯೇರಿ ಮ್ಲೇಚ್ಛರನ್ನು ಕೊಲ್ಲಲು ಹೊರಟಿದ್ದಾನೆ.

ಇಲ್ಲಿರುವ ಚಿತ್ರದಲ್ಲಿ ನಾಲ್ಕು ಕರಗಳಿವೆ; ಕ್ರಮವಾಗಿ ಖಡ್ಗ, ಚಕ್ರ, ಶಂಖ, ಗುರಾಣಿ ಇವೆ.

ಕಲ್ಕಿ



ಕಲ್ಕಿ

20. ಧನ್ವಂತ್ರೀ

ಶಂಖಂ ಚಕ್ರಂ ಜಲೂಕಾಂ ದಧದಮೃತಘಟಾಂ ಚಾಪಿ ದೋರ್ಭಿಶ್ಚತರ್ಭಿಃ
ಸೂಕ್ಷ್ಮಸ್ವಚ್ಛಾತಿಹೃದ್ಯಾಂ ಶುಕಪರಿವಿಲಸನ್ಮೌಲಿಮಂಭೋಜನೇತ್ರಮ್ ।
ಕಾಲಾಂಭೋದೋಜ್ವಲಾಂಗ ಕಟಿತಟವಿಲಚ್ಚಾರು ಪೀತಾಂಬರಾಢ್ಯಮ್
ವಂದೇ ಧನ್ವಂತರೀಂ ತಂ ನಿಖಿಲಗದವನಪ್ರೌಢದಾವಾಗ್ನಿಲೀಲಮ್ ॥

ನಾಲ್ಕು ಕೈಗಳು ; ಕ್ರಮವಾಗಿ ಜಿಗಣೆ (ಜಲೂಕ), ಚಕ್ರ, ಶಂಖ ಹಾಗೂ ಅಮೃತಕಲಶಗಳನ್ನು ಹಿಡಿದಿದ್ದಾನೆ. ತಲೆಯ ಮೇಲೆ ಉಷ್ಣೀಷರೂಪವಾಗಿ ಸ್ವಚ್ಛವಾದ, ಸುಂದರವಾದ ಬಟ್ಟೆಯನ್ನು ಮನೋಹರವಾಗಿ ಸುತ್ತಲ್ಪಟ್ಟಿದೆ. ಶುಭ್ರವಾದ ಪೀತಾಂಬರವನ್ನು ಉಟ್ಟಿದ್ದಾನೆ. ಕಪ್ಪು ಮೋಡದಂತೆ ಬೆಳಗುತ್ತಿರುವ ಮೈಕಾಂತಿ. ಎಲ್ಲ ರೋಗಗಳಿಗೆ ಕಾಲಾಗ್ನಿರೂಪನಾಗಿದ್ದಾನೆ.



ಧನ್ವಂತ್ರೀ

21. ಹಯಗ್ರೀವ

ವಂದೇತುರಂಗವದನಂ ಶಶಿಬಿಂಬ ಸಂಸ್ಥಂ
ಚಂದ್ರಾವದಾತಮಮೃತಾತ್ಮಕರೈಸ್ಸಮಂತಾತ್ ।
ಅಂಡಾಂತರಂಬಹಿರಪಿ ಪ್ರತಿಭಾಸಯಂತಮ್
ಶಂಖಾಕ್ಷಪುಸ್ತಕ ಸುಬೇಧಯುತಾಬ್ಜಬಾಹುಮ್ ॥

(ಪಾಂಚರಾತ್ರ)

ಕುದುರೆಯ ಮುಖವಿರುವ ರೂಪ. ನಾಲ್ಕು ಕರಗಳು; ಕ್ರಮವಾಗಿ ವ್ಯಾಖ್ಯಾನಮುದ್ರೆ, ಅಕ್ಷರಮಾಲೆ, ಶಂಖ ಹಾಗೂ ಪುಸ್ತಕಗಳಿವೆ. ಚಂದ್ರಬಿಂಬದಲ್ಲೇ ಇದ್ದಾನೆ. ಅಮೃತಮಯವಾದ ಕಿರಣಗಳಿಂದ ಬ್ರಹ್ಮಾಂಡದ ಒಳಗೂ ಹೊರಗೂ ಪ್ರಕಾಶಿಸುತ್ತಿದ್ದಾನೆ.

ಹಯಗ್ರೀವ



ಹಯಗ್ರೀವ

22. ದತ್ತಾತ್ರೇಯ

ದತ್ತಾತ್ರೇಯಂ ಶಿವಂ ಶಾಂತಂ ಇಂದ್ರನೀಲನಿಭಂ ಪ್ರಭಮ್
ಆತ್ಮಮಾಯಾರತಂ ದೇವಮವಧೂತಂ ದಿಗಂಬರಮ್ ॥
ಭಸ್ಮೋದ್ಧೂಲಿತ ಸರ್ವಾಂಗಂ ಜಟಾಜೂಟಧರಂ ವಿಭುಮ್
ಬಾಹುಷಟ್ಕಂ ಉದಾರಾಂಗಂ ಪ್ರಫುಲ್ಲಕಮಲೇಕ್ಷಣಮ್ ॥
ಜ್ಞಾನಯೋಗನಿಧಿಂ ವಿಶ್ವಗುರುಂ ಯೋಗಿಜನಪ್ರಿಯಮ್
ಭಕ್ತಾನುಕಂಪಿನಂ ಸರ್ವಸಾಕ್ಷಿಣಂ ಸಿದ್ಧಸೇವಿತಮ್ ॥

ಶಾಂತಾಕಾರನಾದ ಮಂಗಳಮೂರ್ತಿಯು ಇಂದ್ರನೀಲಮಣಿಯಂತೆ ಬೆಳಗುತ್ತಿದ್ದಾನೆ. ಭಸ್ಮವನ್ನು ಬಳಿದುಕೊಂಡು ಜಟೆಯನ್ನು ಹೊಂದಿದ್ದಾನೆ. ಆರು ಕರಗಳಿರುವ ರೂಪ. ಜಪಮಾಲೆ, ಕಮಂಡಲು ಬ್ರಹ್ಮನ ಶಂಖ, ಚಕ್ರಗಳು ವಿಷ್ಣು ಹಾಗೂ ಡಮರು ತ್ರಿಶೂಲಗಳು ಶಿವನ ಚಿಹ್ನೆಗಳಾಗಿವೆ. ಮೂರು ಮುಖಗಳನ್ನು ತೋರಿಸುವ ಕ್ರಮವೂ ಇದೆ. ನಾಥ-ಯೋಗಿ-ಸಿದ್ಧ ಪಂಥಗಳ ಆದ್ಯಪ್ರವರ್ತಕನಾಗಿದ್ದಾನೆ. (ತ್ರಿಮೂರ್ತಿಗಳ ಸ್ವರೂಪನಾಗಿದ್ದಾನೆ).

ದತ್ತಾತ್ರೇಯ

23. ಲಕ್ಷ್ಮೀನಾರಾಯಣ

ನಾರಾಯಣಶ್ಚತುರ್ಬಾಹುಶಂಖಚಕ್ರೇ ತಥೋತ್ತರೇ ।
ದಕ್ಷಿಣೇ ತು ಗದಾಪದ್ಮೇ ನೀಲಜೀಮೂತ ಸನ್ನಿಭಃ ॥
ವಾಮೇ ಶ್ರೀರ್ವಲ್ಲಕೀಹಸ್ತಾ ಪುಷ್ಟಾ ಪದ್ಮಕರಾಽಪರೇ ।
(ಭಟ್ಟಭಾಸ್ಕರೀಯ)

ನಾರಾಯಣನು ಲಕ್ಷ್ಮಿಯನ್ನೊಡಗೂಡಿಕೊಂಡಿದ್ದಾನೆ. ನಾಲ್ಕು ಕರಗಳಿವೆ. ನಿಜಹಸ್ತದಲ್ಲಿ ಗದಾಪದ್ಮಗಳು, ಪರಹಸ್ತದಲ್ಲಿ ಶಂಖಚಕ್ರಗಳಿವೆ. ಎಡಗಡೆಯ ಲಕ್ಷ್ಮಿಯು ದ್ವಿಭುಜೆಯಾಗಿ ಒಂದು ಕೈಯಲ್ಲಿ ವೀಣೆಯನ್ನೂ ಇನ್ನೊಂದು ಕೈಯಲ್ಲಿ ಕಮಲವನ್ನೂ ಹಿಡಿದು ಕುಳಿತಿದ್ದಾಳೆ.

ಇಲ್ಲಿರುವ ಚಿತ್ರದಲ್ಲಿ ನಾರಾಯಣನ ಕೈಗಳಲ್ಲಿ ಗದಾ ಪದ್ಮದ ಬದಲು ವರದ, ಅಭಯ ಮುದ್ರೆಗಳಿವೆ. ಲಕ್ಷ್ಮಿಯ ಕೈಯಲ್ಲಿ ಕಮಲ ಮಾತ್ರವಿದೆ.

ಲಕ್ಷ್ಮೀನಾರಾಯಣ



ಲಕ್ಷ್ಮೀನಾರಾಯಣ

4. ಶಿವ

'ಶಿವ' ಎಂದರೆ ಮಂಗಳ ಎಂದರ್ಥ; ಎಲ್ಲವೂ ಅವನಲ್ಲಿ ಅಡಗಿರುವುದರಿಂದ ಕೂಡ ಅವನು ಶಿವ ಎಂಬರ್ಥವನ್ನು ತಿಳಿಸಿದೆ. ಈತ ರುದ್ರನೂ ಹೌದು, ಪಶುಪತಿಯೂ ಆಗಿದ್ದಾನೆ. ಮಹೇಶನಾಗಿ ಬೆಳೆದಿದ್ದಾನೆ. ಶಿವ ಅಥವಾ ರುದ್ರರು ಒಂದಲ್ಲ ಹನ್ನೊಂದೆಂಬುದು ಪುರಾಣಗಳ ಮಾತು. ಈತನ ಅವತಾರ ರೂಪಗಳು ಎಷ್ಟೆಷ್ಟೋ ಉಪಾಸಕರಲ್ಲೂ ಅಷ್ಟಷ್ಟು ವಿಧಗಳು, ವೈವಿಧ್ಯಗಳು. ಯಾವುದೆಲ್ಲ ಸಮಾಜ ದೃಷ್ಟಿಯಿಂದ ಬಾಹಿರವೋ, ವಿಚಿತ್ರವಾದ ಪದ್ಧತಿಯೋ ಅವನ್ನು ಅನುಸರಿಸುವ ಗುಂಪುಗಳು ಹಾಗೂ ಇಂಥ ಅನೇಕಾನೇಕ ಆಚರಣೆ ಮಾಡುವವರಿಗೆಲ್ಲ ಶಿವನೇ ಆರಾಧ್ಯದೈವ. ಯಾರೂ ಹೋಗಲು ಇಚ್ಛೆಪಡದ ಸ್ಮಶಾನ ಇವನ ವಾಸಸ್ಥಾನ. ಇವೆಲ್ಲ ಶಿವನ ಘೋರರೂಪಗಳು. ಆತನಿಗೆ ಸೌಮ್ಯರೂಪವೂ ಇಲ್ಲದಿಲ್ಲ.

ಶಿವನ ಉಪಾಸನಾ ಪ್ರತೀಕಗಳು ಮೂರು ರೀತಿಯವು. 1. ಲಿಂಗ 2. ಮುಖಲಿಂಗ 3. ಲೀಲಾ ಮೂರ್ತಿಗಳು. ಲಿಂಗವು ಅವ್ಯಕ್ತವಾದರೆ ಮುಖಲಿಂಗವು ವ್ಯಕ್ತಾವ್ಯಕ್ತ ವಿಭಾಗಕ್ಕೆ ಸೇರಿತು. ಲೀಲಾಮೂರ್ತಿಗಳು ಸಂಪೂರ್ಣ ವ್ಯಕ್ತವರ್ಗಕ್ಕೆ ಸೇರಿದವು. ಪ್ರಸ್ತುತ ಅಂಥ ಲೀಲಾಮೂರ್ತಿಗಳಲ್ಲಿ ಕೆಲವು ಮೂರ್ತಿಗಳ ವಿವರಗಳನ್ನು ಕೊಡಲಾಗಿದೆ.

ಲೀಲಾಮೂರ್ತಿಗಳಲ್ಲಿ ಅನುಗ್ರಹ, ಸಂಹಾರ ಮತ್ತು ನೃತ್ಯಮೂರ್ತಿಗಳೆಂಬ ಮೂರು ಪ್ರಬೇಧಗಳಿವೆ. ನೃತ್ಯಮೂರ್ತಿಯಲ್ಲಿ ಏಳು ವಿಧವಾದ ತಾಂಡವ ಪ್ರಮುಖವಾದದ್ದು. ಈ ಲೀಲಾಮೂರ್ತಿಗಳೆಲ್ಲವೂ ಪೌರಾಣಿಕ ಹಿನ್ನೆಲೆಯಿಂದ ಮೈದಳೆದವಾಗಿವೆ. ಲೀಲಾಮೂರ್ತಿಗಳು 10, 12, 18, 25, 28 ಎಂಬ ಬೇರೆ ಬೇರೆ ಎಣಿಕೆ ವಿವಿಧ ಆಗಮಗಳಲ್ಲಿದೆ.

1. ಲಿಂಗೋದ್ಭವಮೂರ್ತಿ

ಲಿಂಗಾಕಾರಸ್ಯ ಮಧ್ಯೇತು ಚಂದ್ರಶೇಖರ ವಸ್ಥಿತಮ್
ನಲಕಾದಸ್ಥಿತಂ ಪಾದಂ ಲಿಂಗೋದ್ಭವ ಸಮನ್ವಿತಮ್ ॥
ವಿರಿಂಚಿರ್ಹಂಸರೂಪೇಣ ಚೋರ್ಧ್ವಗೋವಾಮಪಾರ್ಶ್ವಕೇ
ದಕ್ಷೇವರಾಹರೂಪಸ್ಯ ರೂಪೇಣಾಧೋಗತೋ ಹರಿಃ ॥

ಲಿಂಗಾಕಾರದ ಮಧ್ಯದಲ್ಲಿ ಚಂದ್ರಶೇಖರ ಮೂರ್ತಿಯನ್ನು ರಚಿಸಬೇಕು. ನಾಲ್ಕು ಕರಗಳು ; ಕ್ರಮವಾಗಿ ಅಭಯ, ಪರಶು, ಜಿಂಕೆ ಮತ್ತು ವರದ ಮುದ್ರೆ ಇದೆ. ಜಟಾಮುಕುಟಧಾರಿಯಾಗಿದ್ದು ಶಿರದಲ್ಲಿ ಚಂದ್ರನಿದ್ದಾನೆ. ಲಿಂಗದಲ್ಲಿ ಶಿವನ ಎಡಭಾಗದಲ್ಲಿ ಬ್ರಹ್ಮನು ಹಂಸರೂಪಿಯಾಗಿ ಮೇಲ್ಮುಖವಾಗಿ ಹೋಗುತ್ತಿರುವಂತೆಯೂ,

ಬಲಭಾಗದಲ್ಲಿ ವಿಷ್ಣುವು ವರಾಹರೂಪದಿಂದ ಅಧೋಮುಖವಾಗಿ ಹೋಗುತ್ತಿರುವಂತೆಯೂ ತೋರಿಸಬೇಕು. ಎಡಭಾಗದಲ್ಲಿ ಬ್ರಹ್ಮ ಹಾಗೂ ಬಲಭಾಗದಲ್ಲಿ ವಿಷ್ಣುವನ್ನು ರಚಿಸಬೇಕು.

ಲಿಂಗೋದ್ಭವಮೂರ್ತಿ



ಲಿಂಗೋದ್ಭವಮೂರ್ತಿ



ಲಿಂಗೋದ್ಭವಮೂರ್ತಿ

2. ಉಮಾಮಹೇಶ್ವರ

ಧವಳಾಬ್ಜಸುಖಾಸನಸನ್ನಿಹಿತಂ
ಮೃಗಡಿಂಭಕಟಂಕವರಾಭಯಾನೌ ।
ಸುಮುಖಂ ಪರಮುತ್ಪಲ ದೃಗ್ವರದಂ
ಹ್ಯುಮಯಾ ಸಹ ನೌಮಿ ಸರೂಪಮಿಮಮ್ ॥

ಬಿಳಿದಾದ ತಾವರೆಯಲ್ಲಿ ಉಮಾಮಹೇಶ್ವರರು (ಉಮೆಯನ್ನೊಡಗೂಡಿದ ಶಿವನು) ಸುಖಾಸೀನರಾಗಿದ್ದಾರೆ. ಶಿವನ ನಿಜಹಸ್ತಗಳು ಅಭಯ ಮತ್ತು ವರದ ಮುದ್ರೆಯನ್ನು ತೋರುತ್ತಿದ್ದು ಪರಹಸ್ತದಲ್ಲಿ ಟಂಕ ಮತ್ತು ಜಿಂಕೆಗಳಿವೆ.

ಉಮಾಮಹೇಶ್ವರ

ಉಮಾಮಹೇಶ್ವರ

3. ಹರಿಹರ

ಸವ್ಯಾಂಗೇ ವಿದ್ರುಮಾಭಂ ಶಶಧರ ಮುಕುಟಂ ಭಸ್ಮರುದ್ರಾಕ್ಷಭೂಷಂ
ವಾಮಾಂಗೇ ಶ್ಯಾಮಲಾಭಂ ಮಣಿಮಕುಟಯುತಂ ಪೀತವಸ್ತ್ರಾತಿಶೋಭಮ್।
ಸವ್ಯೇ ಟಂಕಾಭಯಂ ಸ್ಯಾದಿತರ ಕರಯುಗೇ ಶಂಖ ಕೌಮೋದಕೀಸ್ಯಾತ್
ಕಿಂಚಿಲ್ಲಾಲಾಟ ನೇತ್ರಂ ವಿಲಸತು ಪುರತಃ ಶ್ರೀ ಹರೇರರ್ಧದೇಹಮ್ ॥
ಫಾಲಾರ್ಧೇ ಲೋಚನಾರ್ಧ ಕಲಿತಸಮಪದಂ ಶುಭ್ರಯಜ್ಞೋಪವೀತಮ್
ಹರ್ಯರ್ಧಂ ನೌಮಿ ಶಂಭುಸಕಲಶುಭಕರಂ ಸರ್ವಸಂಪತ್ಕರಾಢ್ಯಮ್॥



ಶಿವ ಹಾಗೂ ವಿಷ್ಣು ಇಬ್ಬರೂ ಒಂದೇ ದೇಹದಲ್ಲಿ ಮೇಳವಿಸಿದ್ದಾರೆ. ದೇಹದ ಬಲಭಾಗದಲ್ಲಿ ಶಿವನು ಎಡ ಭಾಗದಲ್ಲಿ ವಿಷ್ಣುವು ಇದ್ದಾರೆ. ಅವರ ಲಕ್ಷಣಗಳು ಹೀಗಿವೆ: ಬಲಭಾಗದಲ್ಲಿ ಹರನಲ್ಲಿ ಚಂದ್ರನಿಂದೊಡಗೂಡಿದ ಜಟಾಮುಕುಟವಿದೆ. ಭಸ್ಮಭೂಷಿತನಾಗಿದ್ದಾನೆ. ರುದ್ರಾಕ್ಷಿಮಾಲೆಗಳಿವೆ. ಬಲಗೈ ನಿಜಹಸ್ತವು ಅಭಯಮುದ್ರೆಯಲ್ಲಿದೆ. ಪರಹಸ್ತದಲ್ಲಿ ಟಂಕವಿದೆ. ಹಣೆಯ ಮೇಲೆ ಕಣ್ಣಿದೆ. ಶಿರದಲ್ಲಿ ಗಂಗೆ ಇದ್ದಾಳೆ. ವ್ಯಾಘ್ರಚರ್ಮವನ್ನು ಸುತ್ತಿಕೊಂಡಿದ್ದಾನೆ. ದೇಹದ ಬಣ್ಣ ಕೆಂಪು. ಇನ್ನು ಎಡಭಾಗದ ನಿಜಹಸ್ತದಲ್ಲಿ ಗದೆಯನ್ನು ಪರಹಸ್ತದಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಹಳದೀ ಬಣ್ಣದ ಬಟ್ಟೆಯಿದೆ. ವಿಷ್ಣುವಿನ ದೇಹದ ವರ್ಣ ಶ್ಯಾಮಲವರ್ಣ. ಹರಿಹರರನ್ನು ಹೊಂದಿರುವ ದೇಹವು ಸಮಪಾದ ಸ್ಥಾನಕದಲ್ಲಿದ್ದು ಶುಭ್ರವಾದ ಯಜ್ಞೋಪವೀತವೂ ಇದೆ.

ಹರಿಹರ

ಅರ್ಧನಾರೀಶ್ವರ

4. ಅರ್ಧನಾರೀಶ್ವರ

ಚತುರ್ಭುಜಂ ತ್ರಿಣೇತ್ರಂ ಚ ಶಿವಾಂಶಂ ದಕ್ಷಪಾರ್ಶ್ವಕೇ
ವಾಮಾರ್ಧಂ ವಾಮಭಾಗೇತು ಸೀಮಂತ ತಿಲಕಾಲಕಮ್ ॥
ನೇತ್ರಾರ್ಧಂ ತು ಲಲಾಟೇತು ಸಂಯುಕ್ತಂ ದಕ್ಷಿಣಾಂಶಕೇ
ದಕ್ಷಿಣೇಕುಂಡಲಂ ಕರ್ಣೇ ದಧಂ ವಾಮೇತುಪತ್ರಕಮ್ ॥

ಕಟ್ಯಾಂ ವಾ ಕಲಿತಂ ವಾಮೇऽ ಭಯಟಂಕೌಚ ದಕ್ಷಿಣೇ
ವರದೋತ್ಪಲಕೇ ವಾಮೇ ಕೇಯೂರ ಕಟಕಾನ್ವಿತಮ್ ॥

ಉಮಾಂಶೇತು ಸ್ತನಂಕುರ್ಯಾತ್ಸ್ವಾಹಾಕಾರಯುತಂ ತುವಾ
ಶ್ರೋಣ್ಯರ್ಧಂ ದಕ್ಷಿಣೇ ಶಂಭೋರ್ವ್ಯಾಘ್ರಚರ್ಮಕೃತಾಂಬರಮ್ ॥

ಉಮಾರ್ಧಂ ಕಟಿಸೂತ್ರಂ ತು ಚಿತ್ರವಸ್ತ್ರಪರಿಚ್ಛದಮ್
ನೂಪುರಾಲಂಕೃತಂ ವಾಮೇ ಸವ್ಯಪಾದಂತು ಕುಂಚಿತಮ್॥

ಸ್ವಯಂ ಪ್ರವಾಲವರ್ಣಃ ಸ್ಯಾತ್ ಸುಕೃಷ್ಣಂ ವಾಮಭಾಗಕಮ್
ಅರ್ಧನಾರೀಶ್ವರಂ ಪ್ರೋಕ್ತಂ ರೂಪಂ ಸರ್ವಶುಭಪ್ರದಮ್ ॥

ಒಂದೇ ದೇಹದ ಅರ್ಧಭಾಗದಲ್ಲಿ ಶಿವನೂ ಇನ್ನರ್ಧಭಾಗದಲ್ಲಿ ಉಮಾದೇವಿಯೂ ಸಂಯೋಗಗೊಂಡು ಆಗಿರುವ ಸುಂದರ ರೂಪವಿದು. ದೇಹದ ಬಲಭಾಗ ಶಿವನೂ ಎಡಭಾಗ ಉಮೆಯೂ ಆಗಿದ್ದಾರೆ. ಒಟ್ಟಂದದ ರೂಪಕ್ಕೆ ನಾಲ್ಕು ಕರಗಳು. ತ್ರಿನೇತ್ರವಿದೆ. ದೇಹದ ಬಲಭಾಗ ಅಥವಾ ಶಿವಾಂಶಕದಿಂದಾದ ಭಾಗದ ನಿಜಹಸ್ತವು ಅಭಯ ಮುದ್ರೆ ಹಾಗೂ ಪರಹಸ್ತದಲ್ಲಿ ಟಂಕವಿದೆ. ಬಲಭಾಗದಲ್ಲಿ ಕಿವಿಗಳಿಗೆ ಕರ್ಣಕುಂಡಲಗಳಿದ್ದು ವ್ಯಾಘ್ರಚರ್ಮವನ್ನು ಸುತ್ತಿಕೊಂಡಿದ್ದಾನೆ. ಶಿವನ ಭಾಗವು ರಕ್ತವರ್ಣದ್ದಾಗಿದೆ. ದೇವಿಯ ಅಂಶದಿಂದ ಕೂಡಿದ ಎಡಭಾಗದಲ್ಲಿ ಹಣೆಯ ಮೇಲ್ಭಾಗವು ಮುಂಗುರುಳಿನಿಂದ ಮುಂಭಾಗದ ಕೇಶ ಅಲಂಕೃತಗೊಂಡಿದೆ. ಕಿವಿಯಲ್ಲಿ ರತ್ನಕುಂಡಲವಿದೆ. ನಿಜಹಸ್ತವು ಕಟಿಯ ಮೇಲಿರುವಂತೆ ಅಥವಾ ವರದ ಮುದ್ರೆಯನ್ನು ತೋರಿಸಬಹುದು. ಪರಹಸ್ತದಲ್ಲಿ ನೈದಿಲೆಯನ್ನು ಹಿಡಿದಿದ್ದಾಳೆ. ಕೇಯೂರ ನೂಪುರಾದಿ ಆಭರಣಗಳಿಂದ ಅಲಂಕೃತಗೊಂಡಿದೆ. ಎಡಭಾಗ ಕೃಷ್ಣವರ್ಣದಿಂದಿದೆ. ಎಡಭಾಗದಲ್ಲಿ ಒಂದು ಸ್ತನವನ್ನು ತೋರಿಸಬೇಕು. ಬಲಗಾಲು ಸ್ವಲ್ಪವೇ ಕುಂಚಿತಗೊಂಡಿದೆ.



ಅರ್ಧನಾರೀಶ್ವರ



ಅರ್ಧನಾರೀಶ್ವರ

5. ದಕ್ಷಿಣಾಮೂರ್ತಿ.

ಅಚಲೋಪರಿಶೃಂಗೇ ಶಂಭುಯೋಗಾಸನಸ್ಥಮ್
ಧವಳಮಮಲಪರಂ ಚೈಕವಕ್ತ್ರಂ ತ್ರಿನೇತ್ರಮ್ ।
ಕರಗತ ಶುಚಿಸರ್ಪಂ ಪುಸ್ತಕಜ್ಞಾನಮುದ್ರಮ್
ಮುನಿನುತಪದಯುಗ್ಮಂ ದಕ್ಷಿಣಾಮೂರ್ತಿಮೀಡೆ ॥

ಎತ್ತರವಾದ ಪರ್ವತದ ಮೇಲೆ ಶ್ವೇತವರ್ಣನಾದ ಶಿವನು ಆಸೀನನಾಗಿದ್ದಾನೆ. ಮೂರು ಕಣ್ಣಗಳನ್ನು ಹೊಂದಿದ್ದಾನೆ. ನಾಲ್ಕು ಕರಗಳಲ್ಲಿ ಕ್ರಮವಾಗಿ ಜ್ಞಾನಮುದ್ರೆ, ನಾಗಪಾಶ, ಅಗ್ನಿ, ಹಾಗೂ ಪುಸ್ತಕವನ್ನು ಹಿಡಿದಿರುತ್ತಾನೆ. ಎಲ್ಲ ಮುನಿಗಳಿಂದ ನಮಸ್ಕರಿಸಲ್ಪಡುತ್ತಿದ್ದಾನೆ.

ದಕ್ಷಿಣಾಮೂರ್ತಿ.



ದಕ್ಷಿಣಾಮೂರ್ತಿ.

ದಕ್ಷಿಣಾಮೂರ್ತಿ.

6. ನಟರಾಜ

ಶಯ್ಯಾಪಸ್ಮಾರಕೇಽಸ್ಮಿನ್ ಸ್ಥಿತಮುತವಿಲಸದ್ವಾಮಮುದ್ಧೃತ್ಯಪಾದಂ
ಜ್ವಾಲಾಮಾಲಾಸುಮಧ್ಯೆ ಧೃತಫಣಿ ಶಿರಸಿ ಸ್ಥೂಲಮಾಸೇದಿವಾನ್ ಯಃ ।
ಭಸ್ಮೇನಾಲಿಪ್ತಮೀಡೇ ತರುಣರವಿನಿಭಂ ಹಸ್ತಪಾದೈಶ್ಚ ವಹ್ನಿಮ್
ಡೋಲಂ ಚಾಭೀತಿಮುದ್ರಾಮಪಿ ಚ ಡಮರುಕಂ ಬಿಭ್ರತಮ್ ತಂ ನಟೇಶಮ್॥

ಅಗ್ನಿಜ್ವಾಲೆಯ ನಡುವೆ ನಾಟ್ಯವಾಡುತ್ತಿರುವ ರೂಪ. ನಾಲ್ಕು ಕೈಗಳು. ನಿಜಹಸ್ತದ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈ ಡೋಲಾಹಸ್ತವಾಗಿದೆ. ಪರಹಸ್ತಗಳಲ್ಲಿ ಡಮರು ಹಾಗೂ ಅಗ್ನಿಗಳಿವೆ. ಭಸ್ಮಭೂಷಿತನಾಗಿದ್ದಾನೆ. ಕೆಳಗಡೆ ಅಪಸ್ಮಾರ ಪುರುಷನಿದ್ದಾನೆ. ಬಲಗಾಲು ಸ್ವಲ್ಪ ಕುಂಚಿತವಾಗಿ ಅಪಸ್ಮಾರ ಪುರುಷನ ಮೇಲಿದೆ. ಎಡಗಾಲು ಮೇಲೆತ್ತಲ್ಪಟ್ಟಿದೆ.

ಶಿವನ ಏಳು ವಿಧದ ತಾಂಡವದಲ್ಲಿ ಹೆಚ್ಚು ಪ್ರಚಲಿತ ವಾಗಿರುವ ಭಂಗಿ ಇದು. ಇದನ್ನೇ ಆನಂದತಾಂಡವ, ನಾದಾಂತನಟನ ಎಂದೂ ಕರೆದಿದ್ದಾರೆ.



ನಟರಾಜ



ನಟರಾಜ

ಧ್ಯಾನಾಂತರವು ಆನಂದ ತಾಂಡವದ ಮೂರ್ತಿ ಲಕ್ಷಣಗಳನ್ನು ಇನ್ನಷ್ಟು ವಿಶದವಾಗಿ ತಿಳಿಸುತ್ತದೆ. ಹೆಚ್ಚಿನ ವಿವರಗಳು ಈ ಧ್ಯಾನಶ್ಲೋಕದಲ್ಲಿದೆ. ಕಾರಣಾಗಮದಿಂದ ಏಳು ವಿಧವಾದ ನೃತ್ಯಮೂರ್ತಿಯ ಧ್ಯಾನ ಶ್ಲೋಕಗಳನ್ನು ಆಯ್ದುಕೊಳ್ಳಲಾಗಿದೆ.

7. ಆನಂದತಾಂಡವ

ಚತುರ್ಭುಜಂ ತ್ರಿಣೇತ್ರಂ ಪ್ರಸಾರಿತ ಜಟಾನ್ವಿತಮ್ ।
ಗೌರವರ್ಣಸಮಾಯುಕ್ತಂ ಬರ್ಹಿಪಿಂಛಸಮನ್ವಿತಮ್ ॥
ಮೌಳಾದಕ್ಷಿಣಧತ್ತೂರಮರ್ಧಚಂದ್ರ ಸಮನ್ವಿತಮ್ ।
ದಕ್ಷಿಣೇ ಸ್ವಜಟಾಗ್ರೇ ತು ಜಾಹ್ನವೀಪರಿಮಂಡಿತಮ್ ॥
ಪತ್ರಂತು ವಾಮಕರ್ಣೇತು ದಕ್ಷಿಣೇ ನಕ್ರಕುಂಡಲಮ್ ।
ಸರ್ವಾಭರಣಸಂಯುಕ್ತಮುಪವೀತ ಸಮನ್ವಿತಮ್ ॥
ವ್ಯಾಘ್ರಾಜಿನಾಂಬರೋಪೇತಂ ಪಾದಕಿಂಕಿಣಿಶೋಭಿತಮ್ ।
ಭುಜಂಪ್ರಸಾರಿತಂ ವಾಮೇ ದಕ್ಷಿಣೇಽಭಯ ಹಸ್ತಕಮ್ ॥
ಡಮರುಂ ಸವ್ಯಹಸ್ತೇತು ವಹ್ನಿಂವೈ ವಾಮಹಸ್ತಕೇ ।
ವಕ್ರಂತು ದಕ್ಷಿಣಂ ಪಾದಮಪಸ್ಮಾರೋಪರಿ ಸ್ಥಿತಮ್ ॥
ಊರ್ಧ್ವೇ ತು ವಾಮಪಾದಂತು ಪಾದಾಗ್ರಂ ದಕ್ಷಿಣಾನುಗಂ ।
ಆನಂದತಾಂಡವಂ ಪ್ರೋಕ್ತಂ ಸಂಧ್ಯಾತಾಂಡವಮುಚ್ಯತೇ ॥

ಶಿವನು ಮೂರು ಕಣ್ಣು ಉಳ್ಳವನಾಗಿದ್ದು ಬಿಳಿಯ ಬಣ್ಣವನ್ನು ಹೊಂದಿದ್ದಾನೆ. ಜಟೆಯು ತಲೆಯ ಮೇಲೆ ಹರಡಿಕೊಂಡಿದೆ. ಧತ್ತೂರದ ಹೂ, ಅರ್ಧಚಂದ್ರ, ಗಂಗೆ ಅಲ್ಲಿ ಸೇರಿವೆ. ಎಡಕಿವಿಯಲ್ಲಿ ಪತ್ರಕುಂಡಲವೂ ಬಲಕಿವಿಯಲ್ಲಿ ಮಕರಕುಂಡಲವೂ ಇರುವುದು ಅರ್ಧನಾರೀಶ್ವರರ ಸಂಕೇತ. ನಾಲ್ಕು ಕೈಗಳು. ಪರಹಸ್ತಗಳಲ್ಲಿ ಡಮರು ಹಾಗೂ ಅಗ್ನಿಜ್ವಾಲೆ ಇದೆ. ನಿಜಹಸ್ತಗಳಲ್ಲಿ ಬಲಗೈ ಅಭಯ ಮುದ್ರೆಯಲ್ಲಿದ್ದು ಎಡತೋಳು ಬಲಗಡೆ ಚಾಚಿದೆ. ಬಲಗಾಲನ್ನು ಕೊಂಚ ಬಾಗಿಸಿಕೊಂಡು ಅಪಸ್ಮಾರಪುರುಷನ ಮೇಲೆ ಇರಿಸಿಕೊಂಡು ಎಡಗಾಲನ್ನು ಮೇಲೆತ್ತಿ ಬಲಗಡೆ ಚಾಚಲಾಗಿದೆ.

ಆನಂದತಾಂಡವ

ಆನಂದತಾಂಡವ

'ಕಾಲ್‌ಮಾರಿ ಆಡಿಯ ತಾಂಡವಂ' : ಕಾಲನ್ನು ಬದಲಿಸಿ ನರ್ತಿಸುತ್ತಿರುವ ಆನಂದ ತಾಂಡವದ್ದೆ ಒಂದು ವಿಧ. ಎಡಗಾಲು ಸ್ವಲ್ಪ ಕುಂಚಿತವಾಗಿ ಅಪಸ್ಮಾರಪುರುಷನ ಮೇಲಿದ್ದು ಬಲಗಾಲು ಮೇಲೆತ್ತಲ್ಪಟ್ಟಿದೆ.

8. ಸಂಧ್ಯಾತಾಂಡವ

ಚತುರ್ಭುಜಂ ತ್ರಿಣೇತ್ರಂ ಚ ಜಟಾಮುಕುಟ ಸಂಯುತಮ್ ।
ಅಭಯಂ ಡಮರುಂ ಸವ್ಯೆ ವಾಮೇ ಪಿಂಛಂ ಸವಿಸ್ಮಯಮ್ ॥
ಅಪಸ್ಮಾರಂ ವಿನಾಪೀಠೇ ವಾಮಾಂಘ್ರಿಂ ಕುಂಚಿತಂ ಸ್ಥಿತಮ್ ।
ಊರ್ಧ್ವೇ ತು ದಕ್ಷಿಣಂ ಪಾದಮಪಿ ಸವ್ಯಾನುಗಂ ಪದಮ್ ॥
ತತ್ಪಾದಂ ಕುಂಚಿತಂ ವಾಥ ಸರ್ಪಕಂಕಣಭೂಷಿತಂ ।
ಸಂಧ್ಯಾತಾಂಡವಮೇವಂ ಸ್ಯಾದುಮಾತಾಂಡವಮುಚ್ಯತೆ

ಸಂಧ್ಯಾತಾಂಡವದಲ್ಲಿ ಸಹ ಶಿವನು ಚತುರ್ಭುಜನೇ. ಬಿಳಿದಾದ ಮೈಬಣ್ಣ, ನಿಜಹಸ್ತಗಳಲ್ಲಿ ಬಲಗೈ ಅಭಯ ಮುದ್ರೆಯಲ್ಲಿದೆ, ಎಡಗೈಯಲ್ಲಿ ಮಯೂರ ಪಿಂಛವಿದೆ. ಪರಹಸ್ತಗಳಲ್ಲಿ ಬಲಗೈಯಲ್ಲಿ ಡಮರೂ ಎಡಗೈ ವಿಸ್ಮಯ ಮುದ್ರೆಯಲ್ಲಿದೆ. ಎಡಗಾಲು ಬಾಗಿದ್ದು ಬಲಗಾಲನ್ನು ಎತ್ತಿ ಎಡಗಡೆ ಚಾಚಲಾಗಿದೆ. ಕಾಲಕೆಳಗೆ ಅಪಸ್ಮಾರಪುರುಷನಿಲ್ಲ. ತಲೆಗೂದಲು ಜಟಾಮುಕುಟದ ರೀತಿಯಲ್ಲಿ ಕಟ್ಟಲ್ಪಟ್ಟಿದೆ. ಇಲ್ಲಿಯೂ ಸಹ ಶಿವನು ತ್ರಿನೇತ್ರನೇ ಆಗಿದ್ದಾನೆ. ಸರ್ಪಗಳೇ ಕಂಕಣವಾಗಿದೆ.

ಸಂಧ್ಯಾತಾಂಡವ

9. ಉಮಾತಾಂಡವ

ಏಕವಕ್ತ್ರಂ ತ್ರಿಣಯನಂ ಜಟಾಮಂಡಲಭೂಷಿತಂ ।
ಗೌರಾಂಗಂ ಷಡ್ಭುಜೋಽಪೇತಯಭಯಂ ಡಮರುಂ ತಥಾ ॥
ಶೂಲಂ ದಕ್ಷಿಣ ಪಾರ್ಶ್ವೇತು ಕಪಾಲಂ ವಿಸ್ಮಯಂ ತಥಾ ।
ಗಜಹಸ್ತೋಪಮಂ ಹಸ್ತಂ ಸವ್ಯಪಾರ್ಶ್ವಾನುಗಂ ಗರಂ ॥
ತದೇವ ವಾಮ ಪಾದಂತು ಅಪಸ್ಮಾರೋಪರಿ ಸ್ಥಿತಂ ।
ಉದ್ಧೃತಂ ದಕ್ಷಿಣಂ ಪಾದಂ ವಾಮಪಾದಾನುಗಂ ತಥಾ ॥
ವಾಮಪಾರ್ಶ್ವೇ ಉಮಾದೇವೀಸಹಿತಂ ಜಾಹ್ನವೀಯುತಂ ।
ಸರ್ವಾಭರಣಸಂಯುಕ್ತಂ ವ್ಯಾಘ್ರಚರ್ಮೋತ್ತರೀಯ್ಯಕಂ ॥
ಉಮಾತಾಂಡವಮೇವೋಕ್ತಂ ಗೌರೀತಾಂಡವ ಮುಚ್ಯತೆ ॥

ಉಮಾತಾಂಡವದಲ್ಲಿ ಶಿವನ ಜಟೆಯು ಮಂಡಲಾಕಾರವಾಗಿದೆ. ಆರು ಕೈಗಳು; ನಿಜಹಸ್ತಗಳಲ್ಲಿ ಬಲಗೈ ಅಭಯ ಮುದ್ರೆ ಎಡಗೈ ಆನೆಯ ಸೊಂಡಿಲಿನಂತೆ ಚಾಚಿದೆ. ಪರಹಸ್ತಗಳಲ್ಲಿ ಬಲಗಡೆ ಶೂಲ ಹಾಗೂ ಡಮರುಗಳಿವೆ. ಎಡಗಡೆ ತಲೆಯೋಡೆ ಮತ್ತು ವಿಸ್ಮಯ ಮುದ್ರೆ. ಎಡಗಾಲು ಅಪಸ್ಮಾರಪುರುಷನ ಮೇಲಿದ್ದು ಬಲಗಾಲನ್ನೆತ್ತಿ ಹೊರಚಾಚಲಾಗಿದೆ. ಎಡಪಕ್ಕದಲ್ಲಿ ಉಮಾದೇವಿ ನಿಂತಿದ್ದಾಳೆ. ಗಂಗೆಯೂ ಇದ್ದಾಳೆ. ಹುಲಿಯ ಚರ್ಮವನ್ನು ಸುತ್ತಿಕೊಂಡಿದ್ದಾನೆ.



ಉಮಾತಾಂಡವ

10. ಗೌರೀತಾಂಡವ

ಶಾಂತಂ ಚತುರ್ಭುಜೋಪೇತಂ ರಕ್ತವರ್ಣಂ ಸ್ಮಿತಾನನಂ ।
ಕರೋಟೀಂ ಬಕಪುಷ್ಪಂ ಚ ದತ್ತೂರಂ ಚಾರ್ಕಪುಷ್ಪಕಂ ॥
ಬಾಲಚಂದ್ರ ಜಟಾಜೂಟಂ ಸುವಿಕೀರ್ಣಜಟಾನ್ವಿತಂ ।
ಸರ್ಪಕಂಕಣಸಂಯುಕ್ತಮಪಸ್ಮಾರೋಪರಿ ಸ್ಥಿತಂ ॥
ದಕ್ಷಿಣಂ ಕುಂಚಿತಂ ಪಾದಂ ವಾಮಪಾದಂ ತದೂರ್ಧ್ವಕಂ ।
ಸವ್ಯೇತು ಪೂರ್ವಮಭಯಮನ್ಯೇ ಡಮರುಕಂ ಕರೇ ॥
ಅನ್ಯಸ್ಮಿನ್ ವ್ಯಾಳಪೂರ್ವಂತು ಅಪರೇ ವಹ್ನಿಪಾತ್ರಕಂ ।
ವಾಮೇ ಗೌರೀಸಮಾಯುಕ್ತಮವಾಮೇ ನಂದಿಕೇಶ್ವರಂ ॥
ಸುವಿಕೀರ್ಣ ಜಟಾಭಾರಂ ಜಟಾಮಕುಟಸಂಯುತಂ ।
ವಾಮೇ ಮೌಳಿಸಮಾಯುಕ್ತಂ ಶೇಷಂ ಪ್ರಥಮನೃತ್ಯವತ್ ॥
ಗೌರೀತಾಂಡವಮಿತ್ಯುಕ್ತಂ ಕಾಳಿಕಾತಾಂಡವಂ ಶ್ರುಣು ॥

ಗೌರೀತಾಂಡವದಲ್ಲಿ ಶಿವನು ಶಾಂತನಾಗಿದ್ದಾನೆ. ಚತುರ್ಭುಜವನ್ನು ಹೊಂದಿದ್ದಾನೆ. ಶಿವನ ಎಡಭಾಗದಲ್ಲಿ ಗೌರಿಯೂ ಬಲಭಾಗದಲ್ಲಿ ನಂದಿಕೇಶ್ವರನೂ ನಿಂತಿರುತ್ತಾರೆ. ತಲೆಗೂದಲು ಜಟಾಭಾರದ ರೀತಿ ಇರುತ್ತದೆ. ಜಟೆಯಲ್ಲಿ ತಲೆಯೋಡೆ, ಬಕಪುಷ್ಪ, ದತ್ತೂರಪುಷ್ಪಗಳು, ಅರ್ಕಪುಷ್ಪಗಳು ಮತ್ತು ಚಂದ್ರರೇಖೆ ಇದೆ. ಶಿವನ ನಿಜಹಸ್ತಗಳಲ್ಲಿ ಬಲಗೈ ಅಭಯ ಮುದ್ರೆಯಲ್ಲಿದೆ ಹಾಗೂ ಎಡಗೈಯಲ್ಲಿ ಸರ್ಪವಿದೆ. ಪರಹಸ್ತಗಳಲ್ಲಿ ಬಲಗೈಯಲ್ಲಿ ಡಮರು ಹಾಗೂ ಎಡಗೈಯಲ್ಲಿ ಅಗ್ನಿಪಾತ್ರೆಗಳಿವೆ. ಬಲಗಾಲು ಕುಂಚಿತವಾಗಿದ್ದು ಅಪಸ್ಮಾರ ಪುರುಷನ ಮೇಲಿದೆ. ಎಡಗಾಲನ್ನು ಮೇಲೆತ್ತಿದ್ದಾನೆ. ಮೈಬಣ್ಣ ಕೆಂಪು.



ಗೌರೀತಾಂಡವ

11. ಕಾಳಿಕಾತಾಂಡವ

ಏಕ ವಕ್ತ್ರಂ ದ್ವಿನಯನಂ ಜಟಾಸಂಕೀರ್ಣಮಸ್ತಕಂ ।
ಭುಜಾಷ್ಟಕಸಮಾಯುಕ್ತಂ ಸವ್ಯಪಾದಂ ಸಮುದ್ಧೃತಂ ॥
ಸವಕ್ರಂ ವಾಮಪಾದಂ ತು ಅಪಸ್ಮಾರೋಪರಿ ಸ್ಥಿತಂ ।
ಅಭಯಂ ಶೂಲಪಾಶಂ ಚ ಡಮರುಂ ದಕ್ಷಿಣೇ ಕರೇ ॥
ಕಪಾಲಂ ಚಾಗ್ನಿಪಾತ್ರಂ ಚ ಘಂಟಾಂ ವಾಮಕರೇ ವರಂ ।
ಗಜಸ್ತೋಪಮಂ ಹಸ್ತಂ ಪ್ರಸಾರ್ಯಂ ದಕ್ಷಿಣಾನುಗಂ ॥
ಸರ್ವಲಕ್ಷಣಸಂಯುಕ್ತಂ ಶೇಷಂ ಪ್ರಥಮನೃತ್ಯವತ್ ।
ಕಾಳಿಕಾತಾಂಡವಂ ಪ್ರೋಕ್ತಂ ವಕ್ಷ್ಯೇತ್ರಿಪುರತಾಂಡವಮ್ ॥

ಕಾಳಿಕಾತಾಂಡವದಲ್ಲಿ ಎರಡೇ ಕಣ್ಣುಗಳು ಎಂಟು ಕರಗಳಿವೆ. ಕೈಗಳಲ್ಲಿ ಅಭಯ ಮುದ್ರೆ, ಶೂಲ, ಪಾಶ ಮತ್ತು ಡಮರುಗ (ಬಲಹಸ್ತಗಳಲ್ಲಿ), ಗಜಹಸ್ತ, ತಲೆಯೋಡೆ, ಅಗ್ನಿಪಾತ್ರೆ ಮತ್ತು ಘಂಟೆ (ಎಡಹಸ್ತಗಳಲ್ಲಿ). ಎಡಗಾಲು ಕುಂಚಿತವಾಗಿ ಅಪಸ್ಮಾರಪುರುಷನ ಮೇಲಿದೆ. ಬಲಗಾಲು ಮೇಲೆತ್ತಲ್ಪಟ್ಟಿದೆ. ಮೈಬಣ್ಣ ಬಿಳಿ.

ಕಾಳಿಕಾತಾಂಡವ



ಕಾಳಿಕಾತಾಂಡವ

12. ತ್ರಿಪುರತಾಂಡವ

ದೋರ್ಭಿಷ್ಷೋಡಶಭಿರ್ಯುಕ್ತಂ ವಾಮೇ ಗೌರೀ ಸಮಾಶ್ರಿತಂ ।
ಸ್ಕಂದಂ ದಕ್ಷಿಣಪಾರ್ಶ್ವೇ ತು ಸವ್ಯಹಸ್ತೇ ಧೃತಾಂಜಲಿಂ ॥
ಅಭಯಂ ಡಮರುಂ ಚೈವ ವಜ್ರಂ ಶೂಲಂ ತಥೈವ ಚ ।
ಪಾಶಂ ಟಂಕಂ ತಥಾ ದಂಡಂ ನಾಗಂ ವೈ ದಕ್ಷಿಣೇ ಕರೇ ॥
ಸವ್ಯಾನುಗಂ ಕರಂ ಚೈವ ವರದಂ ಕೇತುಖೇಟಕಂ ।
ಘಂಟಾಂ ಚೈವ ಕಪಾಲಂ ಚ ವಾಮಪಾರ್ಶ್ವೇಷ್ವಭಿಃ ಕರೈಃ ॥
ಸರ್ವಲಕ್ಷಣಸಂಯುಕ್ತಂ ಶೇಷಂ ಪ್ರಥಮನೃತ್ಯವತ್ ।
ತ್ರೈಪುರಂ ತಾಂಡವಂ ಪ್ರೋಕ್ತಂ ಸಂಹಾರಂ ಚ ತತಃ ಶೃಣು ॥

ತ್ರಿಪುರತಾಂಡವದಲ್ಲಿ ಶಿವನದು ಹದಿನಾರು ಕೈಗಳ ರೂಪ. ಎಡಗಡೆ ಗೌರಿಯೂ ಬಲಗಡೆ ಸುಬ್ರಹ್ಮಣ್ಯನೂ ನಿಂತಿದ್ದಾರೆ. ಸ್ಕಂದನು ಅಂಜಲೀಬದ್ಧನಾಗಿದ್ದಾನೆ. ಶಿವನ ಬಲಗಡೆಯ ಎಂಟು ಹಸ್ತಗಳಲ್ಲಿ ಅಭಯ, ಡಮರು, ವಜ್ರ, ಶೂಲ, ಪಾಶ, ಟಂಕ, ದಂಡ, ನಾಗವೂ; ಎಡಗಡೆಯ ಎಂಟು ಕೈಗಳಲ್ಲಿ ಗಜಹಸ್ತ, ವರದಮುದ್ರೆ, ಅಗ್ನಿ, ಪುಸ್ತಕ, ಧ್ವಜ, ಖೇಟ, ಘಂಟೆ, ಕಪಾಲಗಳಿವೆ. ಉಳಿದ ವಿವರಗಳೆಲ್ಲವೂ ಮೊದಲಿನ ಎಂದರೆ ಆನಂದ ತಾಂಡವದಂತೆಯೇ ಎಂದು ವಿವರಿಸಲಾಗಿದೆ.



ತ್ರಿಪುರತಾಂಡವ

ತ್ರಿಪುರತಾಂಡವ

13. ಸಂಹಾರತಾಂಡವ

ತ್ರಿಣೇತ್ರಂ ಚಾಷ್ಟಹಸ್ತಂ ಸುವಿಕೀರ್ಣಜಟಾನ್ವಿತಂ ।
ಕುಂಚಿತಂ ವಾಮಪಾದಂ ಚ ಅಪಸ್ಮಾರೋಪರಿ ಸ್ಥಿತಂ ॥
ಉದ್ಧೃತಂ ದಕ್ಷಿಣಂ ಪಾದಂ ವ್ಯಾಘ್ರಚರ್ಮೋತ್ತರೀಯಕಂ ।
ಅಭಯಂ ಶೂಲಪಾಶೇ ಚ ಡಮರುಂ ದಕ್ಷಿಣೇಕರೇ ॥
ಕಪಾಲಂ ಚಾಗ್ನಿಪಾತ್ರಂ ಚ ತಥಾ ವಿಸ್ಮಯ ಹಸ್ತಕಂ ।
ಗಜಹಸ್ತೋಪಮಂ ವಾಮೇ ಚತುರ್ದೋರ್ಭಿಸ್ಸಮನ್ವಿತಂ ॥
ಗಜಹಸ್ತೋಪಮಂ ಸವ್ಯಮಪಸವ್ಯಾನುಗಂ ತಥಾ ।
ನಂದೀಶಂ ಸವ್ಯಭಾಗೇ ತು ವಾಮೇ ಗೌರೀಸಮನ್ವಿತಂ ॥
ಸಪ್ತಮಂ ನೃತ್ಯಮಾಖ್ಯಾತಂ ಜಗದ್ವೃದ್ಧಿಕರಂ ಭವೇತ್ ।

ಸಂಹಾರತಾಂಡವದಲ್ಲಿ ಶಿವನು ಮೂರು ಕಣ್ಣುಳ್ಳವನಾಗಿದ್ದಾನೆ. ಹರಡಿಕೊಂಡಿರುವ ಜಟೆಯಿದೆ. ಎಂಟು ಕರಗಳಿವೆ. ಎಡಗಾಲು ಬಾಗಿದ್ದು ಅಪಸ್ಮಾರನ ಮೇಲಿದೆ. ಬಲಗಾಲನ್ನು ಮೇಲೆತ್ತಿರುವ ರೂಪ. ಹುಲಿಯ ಚರ್ಮವನ್ನು ಹೊದ್ದಿದ್ದಾನೆ. ಬಲಭಾಗದಲ್ಲಿ ನಂದೀಕೇಶ್ವರನೂ ಎಡಭಾಗದಲ್ಲಿ ಗೌರಿಯೂ ನಿಂತಿದ್ದಾರೆ. ಬಲಕೈಗಳಲ್ಲಿ ಅಭಯ ಮುದ್ರೆ, ಶೂಲ, ಪಾಶ, ಡಮರುಗ ಹಾಗೂ ಎಡಭಾಗದ ಕೈಗಳಲ್ಲಿ ಗಜಹಸ್ತ, ಕಪಾಲ, ಅಗ್ನಿಪಾತ್ರೆ, ವಿಸ್ಮಯ ಮುದ್ರೆ ಇದೆ. ಮೈಬಣ್ಣ ಬಿಳಿ.

ಸಂಹಾರತಾಂಡವ

14. ಗಜಾಸುರಸಂಹಾರಮೂರ್ತಿ

ಸ್ಥಿತ್ವಾ ಹಸ್ತಿಶಿರಸ್ಯ ದಕ್ಷಚರಣಂ ವಾಮಾಂಗದಕ್ಷೋದ್ಧೃತಂ
ಪುಚ್ಛೋರ್ಧ್ವಾವೃತ ಚರ್ಮಮುದ್ಧೃತ ಕರೇ ಶೂಲಾಸಿ ಶೃಂಗೋಜ್ವಲಂ ।
ಟಂಕಂ ಕೃಷ್ಣಮೃಗಂ ಧರಂ ಪರಕರೇ ಭೀಷ್ಮಾನನೇಂದು ಪ್ರಭಂ ।
ವಾಮೇಮಾತಿಭಯೋನ್ಮುಖೀ ಸುತಯುತಾ ಸೂಚ್ಯಾಢ್ಯ ಹಸ್ತಂ ವರಂ ॥

ದಾರುಕವನದಲ್ಲಿ ಋಷಿಗಳು ತನ್ನ ಮೇಲಿಟ್ಟಿದ್ದ ಆಭಿಚಾರಿಕ ಆನೆಯನ್ನು ಶಿವನು ಸಂಹಾರ ಮಾಡಿದ ರೂಪ. ಆನೆಯ ತಲೆಯ ಮೇಲೆ ತನ್ನ ಬಲಗಾಲನ್ನಿಟ್ಟು ಅದರ ಚರ್ಮವನ್ನು ತನ್ನ ಕೈಗಳಿಂದ ಸುಲಿಯುತ್ತಿರುವಂತೆ ಮೂರ್ತಿಲಕ್ಷಣ. ಆನೆಯ ಬಾಲವು ಮೇಲಿದೆ. ಶಿವನ ಕೈಗಳಲ್ಲಿ ಶೂಲ, ಕತ್ತಿ, ಟಂಕ, ಜಿಂಕೆ ಮೊದಲಾದ ಆಯುಧಗಳಿವೆ. ಒಂದು ಕೈ ಸೂಚಿಮುದ್ರೆಯಲ್ಲಿದೆ. ಈ ದೃಶ್ಯವನ್ನು ನೋಡಿ ಹೆದರಿರುವ ಪಾರ್ವತಿಯು ತನ್ನ ಮಗನೊಡನೆ ಎಡಗಡೆ ನಿಂತಿದ್ದಾಳೆ. ಶಿವನ ಬಣ್ಣ ಬಿಳಿ.

ಗಜಾಸುರಸಂಹಾರಮೂರ್ತಿ



ಗಜಾಸುರಸಂಹಾರಮೂರ್ತಿ

15. ಭಿಕ್ಷಾಟನಮೂರ್ತಿ

ಚತುರ್ಭುಜಂ ತ್ರಿಣೇತ್ರಂ ಚ ನಗ್ನಂ ಚೈವ ಸ್ಮಿತಾನನಮ್
ಭಸ್ಮದಿಗ್ಧಂ ವಿದ್ರುಮಾಭಂ ಕಟ್ಯಾಂ ಪನ್ನಗ ಸಂವೃತಮ್

ಆವೃತ್ತಾಲಂಕೃತೋ ಭೃಂಗೀ ಪಾದಂ ಪಾದುಕಸಂಯುತಮ್
ದಕ್ಷಿಣಂ ತತ್ಕರಾಗ್ರಂತು ಹರಿಣಾಸ್ಯಾನುಗಂ ಭವೇತ್॥

ದಕ್ಷಿಣ ಪರಹಸ್ತೇತು ಡಮರುಂ ಚೈವ ಕಾರಯೇತ್
ವಾಮೇತ್ವಪರ ಹಸ್ತೇತು ತ್ರಿಶೂಲಂ ಪಿಂಚಧಾರಿಣಮ್॥

ಕುಂಚಿತಂ ದಕ್ಷಿಣಂ ಪಾದಂ ವಾಮಪಾದಂ ತು ಸುಸ್ಥಿತಮ್
ಸಮಭಂಗ ಸ್ಥಾನಕಂ ಚ ಗಮನೋನ್ಮುಖರೂಪಕಮ್॥

ಕಪಾಲೋಪೇತ ಹಸ್ತಂ ಚ ವೃಷನಾಭಿಸಮಂ ಭವೇತ್
ಏವಂ ಭಿಕ್ಷಾಟನಂ ಪ್ರೋಕ್ತಂ ಗುಂಡೋದರಮಥೋ ಶೃಣು ॥

ದೇವಸ್ಯ ವಾಮ ಪಾರ್ಶ್ವೆತು ಗುಂಡೋದರಮಥಃ ಸ್ಥಿತಮ್
ಹಸ್ತದ್ವಯ ಸಮಾಯುಕ್ತಂ ಕಪಾಲಂ ಶಿರಸಿನ್ಯಸೇತ್ ॥

ಭೂತಾಕಾರ ಸಮಾಯುಕ್ತಂ ಕುಂಡಲೇ ಕರ್ಣಯೋರ್ನ್ಯಸೇತ್
ದಂಷ್ಟ್ರಾಕರಾಳ ವಕ್ತ್ರಂಚ ಪೂರ್ವೋಕ್ತಂ ಲಕ್ಷಣಾನ್ವಿತಮ್ ॥

ನಾಲ್ಕು ಕೈಗಳು, ಮೂರು ಕಣ್ಣಗಳು ಇದ್ದು ನಗ್ನನಾಗಿದ್ದಾನೆ. ಮೈಬಣ್ಣ ಕೆಂಪಾಗಿದೆ. ಕಟಿಗೆ ಹಾವೊಂದು ಸುತ್ತಲ್ಪಟ್ಟಿದೆ. ಕಾಲ್ಗಳಿಗೆ ಕಾಲ್ಬಳೆಗಳಿದ್ದು ಪಾದಗಳು ಪಾದುಕೆಯ ಮೇಲಿದೆ. ನಿಜಹಸ್ತದ ಬಲಗೈಯಿಂದ ಜಿಂಕೆಯೊಂದಕ್ಕೆ ಆಹಾರ ನೀಡುತ್ತಿದ್ದಾನೆ. ಎಡಗೈಲಿ ಕಪಾಲವಿದೆ.

ಪರಹಸ್ತದ ಬಲಗೈಯಲ್ಲಿ ಡಮರು ಹಾಗೂ ಎಡಗೈಯಲ್ಲಿ ಪಿಂಚ(ನವಿಲುಗರಿಯಿರುವ)ವಿರುವ ತ್ರಿಶೂಲವಿದೆ. ಬಲಗಾಲು ಸ್ವಲ್ಪವೇ ಬಗ್ಗಿದ್ದು ಎಡಗಾಲು ಸ್ಥಿರವಾಗಿದೆ. ರೂಪವು ಸಮಭಂಗ ಸ್ಥಾನಕದಲ್ಲಿದೆ. ಶಿವನ ಎಡಭಾಗದಲ್ಲಿ ಗಂಡೋದರನಿದ್ದು ಆತ ತನ್ನೆರಡೂ ಕೈಗಳಿಂದ ಕಪಾಲವೊಂದನ್ನು ಶಿರದ ಮೇಲಿಟ್ಟುಕೊಂಡು ಹಿಡಿದುಕೊಂಡಿದ್ದಾನೆ. ಭಯಾನಕವಾದ ಮುಖವನ್ನು ಹೊಂದಿದ್ದಾನೆ.

ಭಿಕ್ಷಾಟನಮೂರ್ತಿ

ಭಿಕ್ಷಾಟನಮೂರ್ತಿ

16. ಕಲ್ಯಾಣಸುಂದರಮೂರ್ತಿ (ವೈವಾಹಿಕಮೂರ್ತಿ)

ಕಲ್ಯಾಣ ಸುಂದರಂ ರೂಪಂ ವಕ್ಷ್ಯೇಽದ್ಯ ಜಗತ್ಪತೇಃ
ಕುಂಚಿತಂ ದಕ್ಷಿಣಂ ಪಾದಂ ವಾಮಪಾದಂತು ಸುಸ್ಥಿತಮ್ ॥

ಸವ್ಯಪೂರ್ವಕರೇಣೈವ ದೇವ್ಯಾಃ ಸವ್ಯಕರಂ ಗ್ರಹೇತ್
ವರದಂ ವಾಮ ಹಸ್ತಂತು ಪರಹಸ್ತದ್ವಯೋರಪಿ ॥

ಪರಶುಂ ಸವ್ಯಹಸ್ತೇತು ಮೃಗಂ ವಾಮೇತು ಸಂಧರೇತ್
ಜಟಾಮಕುಟಸಂಯುಕ್ತಂ ದಿವ್ಯಾಭರಣ ಭೂಷಿತಮ್ ॥

ದಿವ್ಯವಸ್ತ್ರೈರಲಂಕೃತ್ಯ ಪ್ರವಾಳ ಸದೃಶಮ್ ಪ್ರಭಮ್
ಶ್ಯಾಮ ವರ್ಣನಿಭಾಂ ಗೌರೀಂದುಕೂಲವಸನಾನ್ವಿತಮ್ ॥

ಉತ್ಪಲಂ ವಾಮಹಸ್ತೇತು ಮಕುಟಂ ಕೇಶಬಂಧಿತಮ್ ।
ಸುಸ್ಥಿತಂ ವಾಮಪಾದಂ ಚಾಪಿತರಂ ಕುಂಚಿತಾನ್ವಿತಮ್ ॥

ಈಷಲ್ಲಜ್ಜಿತ ವಕ್ತ್ರಾಢ್ಯಾಂ ದಕ್ಷಿಣೇತು ವ್ಯವಸ್ಥಿತಾಮ್
ತಸ್ಯಾಶ್ಚೈವಾಪರೇ ಪಾರ್ಶ್ವೆ ಶ್ರೀ ಭೂಮೀ ಚೈವಕಾರಯೇತ್ ॥

ತಯೋರ್ಹಸ್ತ್ಯೋಭಯಾಭ್ಯಾಂತು ಗೌರ್ಯಾಸ್ತಮಪರಂಸ್ಪೃಶೇತ್
ದೇವಸ್ಯಾಗ್ರೇ ಚ ಕುಂಡೇತು ಜುಹುಯಾತ್ತುಪ್ರಜಾಪತಿಃ ॥

ಹೋಮಸ್ಯೋತ್ತರ ದೇಶೇತು ಹರಿರ್ವರ್ಧನಿ ಸಂಯುತ ಃ
ದೇವಸ್ಯವರದೇ ಹಸ್ತೇ ಗೌರೀಂ ದದ್ಯಾತ್ತದಂಬುನಾ ॥
ಶಕ್ರಾದಿ ಸರ್ವದೇವಾಶ್ಚ ಭಕ್ತಿಯುಕ್ತಾ ವೃತಾಃ ಸ್ಥಿತಾಃ ॥

ಶಿವ ಹಾಗೂ ಗೌರಿಯ ವಿವಾಹೋತ್ಸವದ ಸಂದರ್ಭವನ್ನು ಈ ಶ್ಲೋಕಗಳು ವಿವರಿಸುತ್ತಿವೆ. ಶಿವನ ಲಕ್ಷಣಗಳು ಹೀಗಿವೆ: ಜಟಾಮುಕುಟಧಾರಿಯಾದ ಶಿವನ ಶಿರದಲ್ಲಿ ಚಂದ್ರನಿದ್ದಾನೆ. ದಿವ್ಯಾಭರಣಭೂಷಿತನಾಗಿದ್ದಾನೆ. ನಾಲ್ಕು ಕರಗಳಿದ್ದು ನಿಜಹಸ್ತದ ಬಲಗೈ ಗೌರಿಯ ಬಲಹಸ್ತವನ್ನು ಹಿಡಿದುಕೊಂಡಿದೆ. ಎಡಹಸ್ತವು ವರದ ಮುದ್ರೆಯಲ್ಲಿದೆ. ಪರಹಸ್ತಗಳ ಬಲಗೈಯಲ್ಲಿ ಪರಶು, ಎಡಗೈಯಲ್ಲಿ

ಜಿಂಕೆಯಿದೆ. ಬಲಗಾಲು ಸ್ವಲ್ಪವೇ ಕುಂಚಿತಗೊಂಡು ಎಡಗಾಲು ಸ್ಥಿರವಾಗಿದೆ. ಹವಳದ ಬಣ್ಣಕ್ಕೆ ಸಮವಾದ ದೇಹವರ್ಣವು ಶಿವನದ್ದಾಗಿದೆ. ಗೌರಿದೇವಿಯ ಲಕ್ಷಣಗಳು ಹೀಗಿವೆ : ಕೇಶಬಂಧವೇ ಮಕುಟದ ರೀತಿಯಲ್ಲಿದೆ. ಬಲಗೈ ಶಿವನ ಕರಗಳನ್ನು ಗ್ರಹಿಸಿದ್ದು ಎಡಗೈಯಲ್ಲಿ ಉತ್ಪಲವನ್ನು ಹಿಡಿದಿದ್ದಾಳೆ. ಎಡಗಾಲು ಸ್ಥಿರವಾಗಿದ್ದು ಬಲಗಾಲು ಸ್ವಲ್ಪ ಕುಂಚಿತವಾಗಿದೆ. ಮುಖವು ಸ್ವಲ್ಪ ನಾಚಿಕೆಯಿಂದ ಕೂಡಿದೆ. ಶ್ಯಾಮವರ್ಣದ ದೇಹವನ್ನು ಹೊಂದಿರುವ ದೇವಿಯು ಸುಂದರವಾದ ವಸ್ತ್ರಗಳನ್ನುಟ್ಟು ಅಲಂಕೃತಗೊಂಡಿದ್ದಾಳೆ. ಗೌರಿಯ ಪಕ್ಕದಲ್ಲಿ ಶ್ರೀ ಹಾಗೂ ಭೂದೇವಿಯರಿದ್ದಾರೆ. ಶಿವನ ಎದುರಿನಲ್ಲಿ ಬ್ರಹ್ಮನು ಯಜ್ಞವನ್ನು ಮಾಡುತ್ತಿದ್ದಾನೆ. ಹೋಮಕುಂಡದ ಉತ್ತರಭಾಗದಲ್ಲಿ ವಿಷ್ಣುವು ನಿಂತಿದ್ದಾನೆ. ಶಿವನ ಕೈಯಲ್ಲಿ ಗೌರಿಯ ಕೈಯನ್ನಿಟ್ಟು ಧಾರೆ ಎರೆಯುತ್ತಿದ್ದಾರೆ. ಇಂದ್ರಾದಿ ದೇವತೆಗಳೆಲ್ಲ ಭಕ್ತಿಯಿಂದ ವಿವಾಹೋತ್ಸವದಲ್ಲಿ ಪಾಲ್ಗೊಂಡಿದ್ದಾರೆ.

ಕಲ್ಯಾಣಸುಂದರಮೂರ್ತಿ

ಕಲ್ಯಾಣಸುಂದರಮೂರ್ತಿ



ಕಲ್ಯಾಣಸುಂದರಮೂರ್ತಿ

17. ವೀರಭದ್ರ

ನೀಲಾಭಂ ರಕ್ತವಸ್ತ್ರಂ ಭ್ರುಕುಟಿಯುತ ಮುಖಂ ಜ್ವಾಲಕೇಶಂ ತ್ರಿಣೇತ್ರಂ ।
ಸವ್ಯೇ ಖಡ್ಗಂ ಚ ದಂಡಂ ತ್ರಿಶಿಖರ ಪರಶುಂ ವಾಮಭಾಗೇ ಕಪಾಲಮ್ ॥

ಖೇಟಂ ಘಂಟಾಂ ವಹಂತಂ ಮುಸಲಮಪಿದಧತೇ ಕಿಂಕಿಂಣೀ
ಮಾಲಯಾಢ್ಯಮ್ ।
ಸಿಂಹತ್ವಗ್ಬದ್ಧಸಕ್ಥಿ ಸ್ಫುರತು ಮಮ ಪುರೋ ವೀರಭದ್ರಸ್ವರೂಪಮ್ ॥

ಶಿವನ ಉಗ್ರರೂಪಗಳ ಗುಂಪಿಗೆ ಸೇರಿದ ಒಂದು ರೂಪ ವೀರಭದ್ರ. ಹುಬ್ಬನ್ನು ಗಂಟಿಕ್ಕಿದ ಕ್ರೂರವಾದ ಮುಖಭಾವ. ಮೂರು ಕಣ್ಣುಗಳಿವೆ. ಅಗ್ನಿಜ್ವಾಲೆಯ ರೀತಿಯ ಕೆಂಪಾದ ಕೂದಲು. ಎಂಟು ಕರಗಳಿವೆ. ಕ್ರಮವಾಗಿ ಖಡ್ಗ, ಪರಶು, ತ್ರಿಶೂಲ, ದಂಡ, ಗುರಾಣಿ (ಖೇಟ), ಘಂಟೆ, ಒನಕೆ ಹಾಗೂ ಕಪಾಲವಿದೆ. ಸಿಂಹದ ಚರ್ಮವನ್ನು ನಡುವಿಗೆ ಸುತ್ತಿಕೊಂಡಿದ್ದಾನೆ. ಮೈಬಣ್ಣ ಕಪ್ಪಾಗಿದೆ.

ವೀರಭದ್ರ



ವೀರಭದ್ರ

ವೀರಭದ್ರ

5. ನವಗ್ರಹಗಳು

ಗ್ರಹ ಎಂದರೆ ಹಿಡಿದುಕೊಳ್ಳುವುದು, ತಡೆಯುವುದು, ಹಿಡಿತವನ್ನಿಟ್ಟುಕೊಳ್ಳುವುದು ಎಂಬರ್ಥಗಳಿವೆ. ಇವು ತಮ್ಮ ಚಲನಶೀಲತೆಯಿಂದಾಗಿ ಮನುಷ್ಯನ ಮೇಲೆ, ಪ್ರಾಣಿಗಳ ಮೇಲೆ ತಮ್ಮ ಹಿಡಿತವನ್ನಿಟ್ಟುಕೊಳ್ಳುವವು, ಪರಿಣಾಮವನ್ನುಂಟುಮಾಡುವುದು ಎಂಬ ನಂಬಿಕೆ ಇದೆ. ಇವುಗಳಲ್ಲಿ ಪ್ರಧಾನವಾಗಿ ಪರಿಣಾಮ ಬೀರುವಂಥವು ಒಂಬತ್ತೇ ಎಂಬ ಎಣಿಕೆ ಇದೆ. ಇನ್ನೂ ಬೇರೆಯ ಗ್ರಹಗಳು ಇರಬಹುದು. ; ಆದರೆ ಅವುಗಳು ಸೌರಮಂಡಲದ ಅಧೀನದಲ್ಲಿರುವ, ವ್ಯಾಪ್ತಿಗೊಳಪಡುವ ಭೂಮಿಯ ಮೇಲೆ ತಮ್ಮ ಪರಿಣಾಮವನ್ನುಂಟುಮಾಡಬಹುದು ಎಂಬ ನಂಬಿಕೆ ಏನಿಲ್ಲ. ಈ ಪರಿಣಾಮದಲ್ಲಿ ಶುಭಾಶುಭಗಳೆರಡೂ ಸೇರಿಕೊಂಡಿದೆ. ಸೌರವ್ಯೂಹದಲ್ಲಿ ಈ ಗ್ರಹಗಳಿಗೊಂದು ಸ್ಥಾನ, ಅವುಗಳ ಪರಿಭ್ರಮಣ ಹಾಗು ಅವುಗಳಿಂದುಂಟಾಗುವ ಪರಿಣಾಮವನ್ನು ಗಮನಿಸಿ ಶುಭಗ್ರಹಗಳು ಹಾಗೂ ಅಶುಭಗ್ರಹಗಳು (ಪಾಪಗ್ರಹಗಳು) ಎಂಬುದಾಗಿ ವಿಂಗಡಿಸಿಕೊಂಡಿದ್ದಾರೆ.

ಸೂರ್ಯ ಚಂದ್ರರ ಉಪಾಸನೆ ಅನಾದಿಕಾಲದಿಂದಲೂ ಇದ್ದೆ ಇದೆ. ಮಿಕ್ಕ ದೇವತೆಗಳಿಗೊಂದು ಆಕಾರವನ್ನು ಕಲ್ಪಿಸಿದ ರೀತಿಯಲ್ಲೇ ಈ ಗ್ರಹಗಳಿಗೂ ಲಕ್ಷಣಗಳನ್ನಳವಡಿಸಿದರು.

ಒಂಬತ್ತೂ ಗ್ರಹಗಳ ಪ್ರತೀಕಗಳನ್ನು ಒಂದೇ ಕಡೆ ಸೇರಿಸಿಡುವುದು ವಾಡಿಕೆ. ಸೂರ್ಯನೇ ಈ ಗ್ರಹಗಳಿಗೆಲ್ಲ ಕೇಂದ್ರ. ಸೂರ್ಯನೇ ಅಧಿದೇವತೆ. ಸೂರ್ಯನಿಂದಲೇ ಉಳಿದ ಗ್ರಹಗಳು ಆದವುಗಳಾಗಿವೆ. ಬೇರೆ ಬೇರೆ ಗ್ರಹಗಳಿಗೆ ರೂಪ ಹೇಗೆ ಭಿನ್ನವೋ ಅದೇ ರೀತಿ ಪ್ರತಿನಿಧಿ ದ್ರವ್ಯಗಳು, ಮಂತ್ರಗಳು ಬೇರೆಯಾಗಿಯೇ ಇವೆ. ಚಂದ್ರನ ಧ್ಯಾನವನ್ನು ಹೊರತು ಪಡಿಸಿ ಉಳಿದವು ಮಯೂಖಸ್ಮೃತಿಯಿಂದ ಆಯ್ದ ಶ್ಲೋಕಗಳು.

1. ಸೂರ್ಯ

ಪದ್ಮಾಸನಃ ಪದ್ಮಕರಃ ಪದ್ಮಗರ್ಭ ಸಮದ್ಯುತಿಃ
ಸಪ್ತಾಶ್ವರಥ ಸಂಯುಕ್ತೋ ದ್ವಿಭುಜಃ ಸ್ಯಾತ್ಸದಾರವಿಃ ||

ಪದ್ಮದ ಮೇಲಿದ್ದಾನೆ. ಎರಡು ಕರಗಳು; ಎರಡೂ ಕರಗಳಲ್ಲಿ ಪದ್ಮವಿದೆ. ಏಳು ಅಶ್ವಗಳನ್ನು ಕೂಡಿಕೊಂಡಿರುವ ರಥ.



ಸೂರ್ಯ



ಸೂರ್ಯ

2. ಚಂದ್ರ

ಕರ್ಪೂರಸ್ಫಟಿಕಾವದಾತಮನಿಶಂ ಪೂರ್ಣೇಂದು ಬಿಂಬಾನನಮ್
ಮುಕ್ತಾದಾಮ ವಿಭೂಷಿತೇನ ವಪುಷಾ ನಿರ್ಮೂಲಯಂತಂ ತಮಃ ॥

ಹಸ್ತಭ್ಯಾಂಕುಮುದಂ ವರಂಚ ದಧತಂ ನೀಲಾಲಕೋದ್ಭಾಸಿತಂ
ಸ್ವಸ್ಯಾಂಕಸ್ಥ ಮೃಗೋದಿತಾಶ್ರಯ ಗುಣಂ ಸೋಮಂ ಸುಧಾಬ್ಧಿಂ ಭಜೇ ॥

(ಶಾರದಾತಿಲಕ)

ಆವರಿಸಿರುವ ಕತ್ತಲನ್ನು ನಾಶಮಾಡಬಲ್ಲ ರೂಪ. ಎರಡು ಕರಗಳು; ಬಲಗೈಯಲ್ಲಿ ಕಮಲ ಎಡಗೈ ವರದ ಮುದ್ರೆ ತೋರುತ್ತಿದೆ. ಮುತ್ತಿನ ಹಾರಗಳಿಂದ ಅಲಂಕೃತಗೊಂಡಿದ್ದಾನೆ. ಬಿಳಿಯಾದ ಮೈಕಾಂತಿ. ತನ್ನ ತೊಡೆಯ ಮೇಲೆ ಜಿಂಕೆಯೊಂದಕ್ಕೆ ಆಶ್ರಯ ನೀಡಿರುವ ದಯಾಮಯನೀತ. ಸೌಂದರ್ಯಕ್ಕೆ ಚಂದ್ರನೇ ಅಲ್ಲವೇ ಪ್ರತೀಕ ?



ಚಂದ್ರ



ಚಂದ್ರ

3. ಅಂಗಾರಕ

ರಕ್ತಮಾಲ್ಯಾಂಬರಧರಃ ಶಕ್ತಿಶೂಲ ಗಧಾಧರಃ
ಚತುರ್ಭುಜೋ ಮೇಷಗಮೋ ವರದಃ ಸ್ಯಾದ್ಧರಾಸುತಃ ॥

ನಾಲ್ಕು ಕರಗಳಿವೆ, ಕ್ರಮವಾಗಿ ವರದ ಹಸ್ತ, ಶಕ್ತಿ, ಶೂಲ ಹಾಗೂ ಗದೆಗಳಿವೆ. ಕೆಂಪಾದ ಹೂವಿನ ಹಾರವನ್ನು ಧರಿಸಿದ್ದಾನೆ. ಮೇಷ (ಆಡು)ವನ್ನು ವಾಹನವಾಗಿ ಹೊಂದಿದ್ದಾನೆ. ಕೆಂಪಾದ ಶರೀರ ಉಳ್ಳವನಾಗಿದ್ದಾನೆ.



ಅಂಗಾರಕ

ಅಂಗಾರಕ

4. ಬುಧ

ಪೀತಮಾಲ್ಯಾಂಬರಧರಃ ಕರ್ಣಿಕಾರ ಸಮದ್ಯುತಿಃ
ಖಡ್ಗಚರ್ಮಗದಾಪಾಣಿಃ ಸಿಂಹಸ್ಥೋವರದೋ ಬುಧಃ ॥

ನಾಲ್ಕು ಕೈಗಳು; ಕ್ರಮವಾಗಿ ವರದ ಮುದ್ರೆ, ಖಡ್ಗ, ಗುರಾಣಿ(ಚರ್ಮ) ಹಾಗೂ ಗದೆಗಳಿವೆ. ದೇಹವು ಹಳದಿ ಅಥವಾ ಬಂಗಾರದ ವರ್ಣವೆನ್ನಬಹುದು. ಸಿಂಹವು ವಾಹನ.



ಬುಧ



ಬುಧ

5. ಬೃಹಸ್ಪತಿ

ಅಷ್ಟಭಿಃ ಪಾಂಡರೈರ್ಯುಕ್ತೋ ವಾಜಿಭಿಃ ಕಾಂಚನೇ ರಥೇ ।
ತಿಷ್ಠನ್ ತರತಿ ವೈವರ್ಷಂ ರಾಶೌ ರಾಶೌ ಬೃಹಸ್ಪತಿಃ ॥

ದೇವದೈತ್ಯಗುರೂ ಶುದ್ಧೌ ಪೀತಶ್ವೇತೌ ಚತುರ್ಭುಜೌ
ದಂಡಿನೌ ವರದೌ ಕಾರ್ಯೌ ಸಾಕ್ಷಸೂತ್ರ ಕಮಂಡಲೂ ॥

ನಾಲ್ಕು ಕರಗಳು; ಕ್ರಮವಾಗಿ ದಂಡ, ಜಪಮಾಲೆ, ಕಮಂಡಲು ಹಾಗೂ ವರದ ಮದ್ರೆಯಿದೆ. ಎಂಟು ಬಿಳಿದಾದ ಕುದುರೆಗಳನ್ನು ಕೂಡಿಕೊಂಡು ಬಂಗಾರದ ರಥದಲ್ಲಿ ಬೃಹಸ್ಪತಿಯು ಕುಳಿತಿದ್ದಾನೆ. ದೇಹವರ್ಣ ಬಂಗಾರ.



ಬೃಹಸ್ಪತಿ



ಬೃಹಸ್ಪತಿ

6. ಶುಕ್ರ

ಸವರೂಥ ಸ್ಯಾನುಕರ್ಷೋ ಯುಕ್ತೋ ಭೂಸಂಭವೈರ್ಹಯೈಃ ।
ಸೋಪಾಂಗ ಪತಾಕಸ್ತು ಶುಕ್ಲಃ ಸ್ಯಾತ್ತು ರಥೋ ಮಹಾನ್ ॥

ದೇವದೈತ್ಯಗುರೂ ಶುದ್ಧೌ ಪೀತ ಶ್ವೇತೌ ಚತುರ್ಭುಜೌ ।
ದಂಡಿನೌ ವರದೌ ಕಾರ್ಯೌ ಸಾಕ್ಷಸೂತ್ರ ಕಮಂಡಲೂ ॥

ನಾಲ್ಕು ಕರಗಳು; ಕ್ರಮವಾಗಿ ದಂಡ, ಅಕ್ಷಮಾಲೆ, ಕಮಂಡಲು, ವರದ ಮುದ್ರೆ ಇದೆ. ಬಿಳಿಯ ಬಣ್ಣದ ಎಂಟು ಕುದುರೆಗಳಿದ್ದು, ರಥವೂ ಕೂಡ ಬಿಳಿಯಾಗಿದೆ. ಶ್ವೇತಧ್ವಜವಿದೆ. ದೇಹದ ವರ್ಣವೂ ಕೂಡ ಶ್ವೇತವರ್ಣವೇ ಆಗಿದೆ.



ಶುಕ್ರ



ಶುಕ್ರ

7. ಶನಿ

ಇಂದ್ರನೀಲ ದ್ಯುತಿಃ ಖಡ್ಗೀ ವರದೋ ಗೃಧ್ರವಾಹಃ
ಬಾಣಚಾಪಧರೋ ವೀರಃ ಕರ್ತವ್ಯೋರ್ಕ ಸುತಃ ಸದಾ ॥

ನಾಲ್ಕು ಕೈಗಳಲ್ಲಿ ಕ್ರಮವಾಗಿ ಖಡ್ಗ ಬಾಣ, ಧನಸ್ಸು ವರದ ಮುದ್ರೆಯಿದೆ. ಹದ್ದು ಈತನ ವಾಹನವಾಗಿದೆ. ಮೈಬಣ್ಣ ಕಪ್ಪಾಗಿದೆ.



ಶನಿ

ಶನಿ

8. ರಾಹು

ಕರಾಳವದನಃ ಖಡ್ಗ ಚರ್ಮಶೂಲೀ ವರಪ್ರದಃ
ನೀಲಸಿಂಹಸನಸ್ಥಶ್ಚ ರಾಹು ರ್ಮೆಸ್ಯಾಚ್ಛುಭ ಪ್ರದಃ ॥

ಭಯಂಕರವಾದ ಮುಖ. ನಾಲ್ಕು ಕೈಗಳು, ಕ್ರವಾಗಿ ಶೂಲ, ಖಡ್ಗ, ಗುರಣೆ, ವರ ಮುದ್ರೆ ಇದೆ.



ರಾಹು

ರಾಹು

9. ಕೇತು

ಧೂಮ್ರಾ: ಸುಖಾವಹಾಃ ಸರ್ವೇಗದಿನೋ ವಿಕೃತಾನನಾಃ
ಕಪೋತವಾಹನೋ ನಿತ್ಯಂ ಕೇತವಸ್ಸುರ್ವರ ಪ್ರದಾಃ ||

ಎರಡೇ ಕರಗಳು ಬಲಗೈ ವರದ ಮುದ್ರೆಯಲ್ಲಿದೆ. ಎಡಗೈಲಿ ಗದೆ ಇದೆ. ಪಾರಿವಾಳ ವಾಹನವಾಗಿದೆ. ತಿಳಿಗಪ್ಪಾದ ದೇಹವರ್ಣ.

ಕೇತು



ಕೇತು

6. ಪರಿವಾರ ದೇವತೆಗಳು

ಪ್ರತಿಯೊಂದು ಪ್ರಧಾನದೇವತೆಗೆ ಪರಿವಾರ ದೇವತೆಗಳಿವೆ. (ಪ್ರಮುಖವಾಗಿ ವಿಷ್ಣು, ಶಿವ, ದೇವಿಯರಿಗೆ.) ಇವು ಪ್ರಧಾನದೇವತೆಗಳ ಜೊತೆಗಿರುವ, ನೆರೆದಿರುವ, ಸೇವಿಸುವ ದೇವತೆಗಳೇ ಪರಿವಾರ ದೇವತೆಗಳು ಅಥವಾ ಪಾರ್ಶ್ವದೇವತೆಗಳು. ಪ್ರಧಾನ ದೇವತೆಯ ಕುಟುಂಬ ಸದಸ್ಯರು (ಪತ್ನಿ, ಪುತ್ರರು), ಸೇವಕರು, ದ್ವಾರಪಾಲಕರು, ಸೇನಾಪತಿಗಳು, ಋಷಿಮುನಿಗಳು ಹಾಗೂ ಭಕ್ತರ ಶಿಲ್ಪಗಳು ಈ ಪರಿವಾರ ದೇವತೆಗಳಾಗಿವೆ.

ಪ್ರಧಾನ ದೇವತೆಯ ಶಕ್ತಿಯನ್ನು ಒಳಗೊಂಡಿರುವ, ಪ್ರತಿನಿಧಿಸುವ, ವ್ಯಕ್ತಗೊಳಿಸುವ ಪರಿವಾರ ದೇವತೆಗಳು ಕೆಲವು. ಈ ದೇವತೆಗಳನ್ನು ಪ್ರಧಾನ ದೇವತೆಗಳ ಪ್ರತಿಧಿಗಳಾಗಿ ಪೂಜಿಸುವ ಪದ್ಧತಿ ಬಹುಕಾಲದಿಂದಿದೆ. ಇವುಗಳಿಗೆ ಜಾನಪದದ ಹಿನ್ನೆಲೆಯೂ ಉಂಟು.

1. ಆಂಜನೇಯ

ಸ್ಫಟಿಕಾಭಂ ಸ್ವರ್ಣಕಾಂತಿಂ ದ್ವಿಭುಜಮ್ ಚ ಕೃತಾಂಜಲಿಮ್
ಕುಂಡಲದ್ವಯ ಸಂಶೋಭಿ ಮುಖಾಂಭೋಜಂ ಮುಹುರ್ಭಜೆ ॥

(ಹನೂಮನ್ಮಂತ್ರಧ್ಯಾನ)

ಮನುಷ್ಯಕಾರಕ್ಕೆ ವಾನರ ಮುಖವಿರುವ ರೂಪ, ಎರಡು ಕರಗಳು, ಅಂಜಲೀ ಮುದ್ರೆಯಲ್ಲಿದೆ. ಶರೀರ ಬಿಳಿದಾಗಿದ್ದು ಕಾಂತಿಯುತವಾಗಿ ಕಂಗೊಳಿಸುತ್ತಿದೆ. ಕಿವಿಗಳು ಕುಂಡಲಗಳಿಂದ ಶೋಭಿಸುತ್ತಿವೆ.

ಆಂಜನೇಯನನ್ನು ರಾಮಭಕ್ತನಾಗಿ, ರಾಮದಾಸನಾಗಿ ಗುರುತಿಸುವುದು ವಾಡಿಕೆ. ರಾಮನ ಪ್ರತಿನಿಧಿಯಾಗಿಯೂ ಹಾಗೂ ತನ್ನ ಪ್ರಭಾವದಿಂದಲೂ ಎರಡೂ ರೀತಿಯಿಂದ ಪೂಜೆಯನ್ನು ಪಡೆಯುತ್ತಿದ್ದಾನೆ. ಸಮಭಂಗ ಅಥವಾ ತ್ರಿಭಂಗದಲ್ಲಿದ್ದು ಅಂಜಲೀಬದ್ಧನಾಗಿರುವ ರೂಪ ಭಕ್ತಾಂಜನೇಯ, ಯಾನಕ ಭಂಗಿಯಲ್ಲಿದ್ದು ವಿವಿಧ ಆಯುಧಗಳನ್ನು ಹಿಡಿದಿದ್ದರೆ ವೀರಾಂಜನೇಯ, ಪದ್ಮಾಸನದಲ್ಲಿ ಯೋಗಮುದ್ರೆ ಅಥವಾ ಭಂಗಿಯಲ್ಲಿದ್ದರೆ ಯೋಗಾಂಜನೇಯ, ರಾಮಸೀತೆ, ಲಕ್ಷ್ಮಣರ ಜೊತೆಗೂಡಿದ್ದಲ್ಲಿ ರಾಮಾಂಜನೇಯ, ಐದು ಮುಖ ಹಾಗೂ ಹತ್ತು ಕರಗಳನ್ನು ಹೊಂದಿದ್ದರೆ ಪಂಚಮುಖೀ ಆಂಜನೇಯ.



ಆಂಜನೇಯ

2. ಪಂಚಮುಖಾಂಜನೇಯ

ಪಂಚವಕ್ತ್ರಂ ಮಹಾಭೀಮಂ ತ್ರಿಪಂಚನಯನೈರ್ಯುತಂ ।
ಕೋಟಿಸೂರ್ಯಪ್ರತೀಕಾಶಂ ಕಪಿವಕ್ತ್ರಂ ಸುತೇಜಸಮ್ ॥

ದಂಷ್ಟ್ರಾಕರಾಳವದನಂ ಭೃಕುಟೀಕುಟಿಲೇಕ್ಷಣಂ ।
ಅಸ್ಯೈಕಂ ದಕ್ಷಿಣಂ ವಕ್ತ್ರಂ ನಾರಸಿಂಹಂ ಮಹಾದ್ಭುತಂ ॥

ಅತ್ಯುಗ್ರತೇಜೋವಪುಷಂ ಭೀಷಣಂ ಭಯನಾಶನಂ ।
ಪಶ್ಚಿಮೇಗಾರುಡಂ ವಕ್ತ್ರಂ ವಕ್ರತುಂಡಂ ಮಹಾದ್ಯುತಿಃ ॥

ಪಾತಾಳಸಿದ್ಧಿದಂ ಘೋರಂ ವಿಷಭೂತಾದಿಕೃಂತನಂ ।
ಉತ್ತರಂ ಸೌಕರಂ ವಕ್ತ್ರಂ ಕೃಷ್ಣಂ ದೀಪ್ತಂ ಶಿಖೋಜ್ವಲಂ ॥

ಸರ್ವಭೂತಪ್ರಶಮನಂ ತಾಪಜ್ವರ ನಿವಾರಣಂ ।
ಊರ್ಧ್ವಂ ಹಯಾನನಂ ಘೋರಂ ದಾನವಾಂತಕರಂ ಪರಂ ॥

ಖಡ್ಗಂ ತ್ರಿಶೂಲಖಟ್ವಾಂಗ ಪಾಶಮಂಕುಶಪರ್ವತೌ ।
ದ್ರುಮ ಗೋಮುದ್ರಿಕಾಮುಂಡಂ ದಧಾನಂ ಸುರವಂದಿತಂ ॥

(ಸುದರ್ಶನಸಂಹಿತೆ)

ಹನುಮಂತ, ನರಸಿಂಹ, ಗರುಡ, ವರಾಹ ಮತ್ತು ಹಯಗ್ರೀವ ಈ ಐದು ದೇವತೆಗಳು ಕೂಡಿಕೊಂಡಿರುವ ರೂಪ ಹನುಮಂತನದು. ದಂಷ್ಟ್ರಾಕರಾಳವಾದ ಮುಖ, ಹುಬ್ಬುಗಂಟಿಕ್ಕಿರುವ ಭಾವ. ನರಸಿಂಹನದು ಭೀಷಣ, ಭಯಾನಕ ಅತ್ಯುಗ್ರರೂಪ. ಗರುಡನು ಪಾತಾಳಸಿದ್ಧಿಯನ್ನೊದಗಿಸುವ ದೇವತೆ, ವಿಷವನ್ನೂ ನಾಶಮಾಡಬಲ್ಲವನು. ವರಾಹವನ ಕರಿಯ ಮೋರೆ ಎಲ್ಲ ಭೂತಗಳನ್ನು ಉಚ್ಚಾಟನೆ ಮಾಡುವಂಥದು, ಜ್ವರವನ್ನು ನೀಗಿಸುವಂಥದು. ಹಯಗ್ರೀವನ ಮೂಲ ಘೋರವಾಗಿದ್ದು ಅಸುರರನ್ನು ಕೊಲ್ಲಬಲ್ಲದಾಗಿದೆ. ಎದುರಿನ ಅಥವಾ ಪೂರ್ವದಿಕ್ಕಿಗೆ ಹನುಮಂತನದು, ದಕ್ಷಿಣಕ್ಕೆ ನರಸಿಂಹನ ಮುಖ, ಪಶ್ಚಿಮದಲ್ಲಿ ಗರುಡ, ಉತ್ತರದಲ್ಲಿ ವರಾಹ, ಮೇಲೆ ಹಯಗ್ರೀವನ ಮುಖವೆಂದು ಧ್ಯಾನಶ್ಲೋಕದ ವಿವರವಾಗಿದೆ. ಈ ಆಂಜನೇಯನಿಗೆ ಹತ್ತು ಕೈಗಳು. ಅವುಗಳಲ್ಲಿ ಖಡ್ಗ, ತ್ರಿಶೂಲ, ಖಟ್ವಾಂಗ, ಪಾಶ, ಅಂಕುಶ, ಪರ್ವತ, ಮರ, ಗೋಮುದ್ರಿಕಾ, ಕತ್ತರಿಸಿದ ತಲೆಗಳಿವೆ. ಚಿತ್ರದಲ್ಲಿ ಘಂಟೆಯೂ ಸೇರಿದೆ. ಇದೊಂದು ತಾಂತ್ರಿಕ ರೂಪ.



ಪಂಚಮುಖಾಂಜನೇಯ



ಪಂಚಮುಖಾಂಜನೇಯ



ಪಂಚಮುಖಾಂಜನೇಯ

3. ಗರುಡ

ಅಮೃತ ಕಲಶಹಸ್ತಂ ಕಾಂತಿಸಂಪೂರ್ಣದೇಹಂ
ಸಕಲವಿಬುಧ ವಂದ್ಯಂ ವೇದಶಾಸ್ತ್ರೈರಚಿಂತ್ಯಮ್ ।
ವಿವಿಧ ಸುಲಭಪಕ್ಷೈರ್ಧೂಯಮಾನಾಂಡಗೋಲಂ
ಸಕಲ ವಿಷವಿನಾಶಂ ಚಿಂತಯೇ ಪಕ್ಷಿರಾಜಮ್ ॥

ಎರಡು ಕರಗಳು, ಅಮೃತಕಲಶವನ್ನು ಹಿಡಿದಿದೆ. ಉಳಿದ ಲಕ್ಷಣಗಳು ಹೀಗಿವೆ: ಮಾನವಶರೀರ, ಆದರೆ ಮೂಗು ಮಾತ್ರ ಕೊಕ್ಕಿನ ರೀತಿಯಲ್ಲಿರಬೇಕು. ಕಿವಿಗಳಲ್ಲಿ ಸರ್ಪಕುಂಡಲಗಳಿವೆ, ಬಾಹುವಿಗೆ ಹೊಂದಿಕೊಂಡಿರುವ ಎರಡು ರೆಕ್ಕೆಗಳಿವೆ. ಕೆಂಪುಹಾರಗಳನ್ನು ಧರಿಸಿರುತ್ತಾನೆ. ಶ್ವೇತಪದ್ಮದ ಮೇಲೆ ನಿಂತಿರುವ ಶ್ವೇತವರ್ಣದವನೀತ. ಎಲ್ಲ ರೀತಿಯ ವಿಷವನ್ನು ನಾಶಗೊಳಿಸುವ ಪಕ್ಷಿರಾಜನೀತ. ಗರುಡನನ್ನು ವಿಷ್ಣುರಥವೆಂದೂ ಕರೆಯುತ್ತಾರೆ.

ಗರುಡ

ಗರುಡ

4. ಸುಬ್ರಹ್ಮಣ್ಯ

ಪರಿವಾರ ದೇವತೆಯಾಗಿದ್ದು ಕಾಲಕ್ರಮದಲ್ಲಿ ಸ್ವಯಂಪ್ರಧಾನರಾದ ದೇವತೆಗಳಲ್ಲಿ ಸುಬ್ರಹ್ಮಣ್ಯನು ಪ್ರಮುಖನು. ಶಿವನ ಪರಿವಾರದಲ್ಲಿ ಅವನ ಮಗನೆಂದು ಹೆಸರಾದ ಸುಬ್ರಹ್ಮಣ್ಯನಿಗೆ ವಿಶೇಷವಾದ ಸ್ಥಾನವಿದೆ. ಸುಬ್ರಹ್ಮಣ್ಯನ ಹದಿನೇಳು ರೂಪಗಳನ್ನು ಶೈವಾಗಮಕ್ಕೆ ಸೇರಿದ 'ಸಿದ್ಧಾಂತಶೇಖರ'ವೆಂಬ ಗ್ರಂಥದಲ್ಲಿ ಹೇಳಿದ್ದಾರೆ. ಅದರಲ್ಲಿನ ಒಂದು ರೂಪವನ್ನು ಆಯ್ಕೆಮಾಡಿಕೊಂಡು ಕೊಡಲಾಗಿದೆ.

ಷಣ್ಮುಖಸುಬ್ರಹ್ಮಣ್ಯ

ಶಕ್ತಿಂ ಶರಂ ಚ ಖಡ್ಗಂಚ ಚಕ್ರಂ ಪಾಶಾಭಯೌ ತಥಾ ।
ಕುಕ್ಕುಟಂ ಚ ಧಮಃ ಖೇಟ ಶಂಖಂ ಧತ್ತೇಹಲಂ ವರಂ ॥

ಮಯೂರ ವಾಹನೋಪೇತಂ ಸರ್ವಲಕ್ಷಣ ಸಂಯುತಂ ।
ಜಯಾ ಚ ವಿಜಯಾ ಚೈವ ವಾಮ ದಕ್ಷಿಣ ಪಾರ್ಶ್ವಯೋಃ ॥

ಸರ್ವಾಲಂಕಾರ ಸಂಯುಕ್ತಂ ಸರ್ವಾಭರಣಭೂಷಿತಂ ।
ಷಣ್ಮುಖಂ ಚೇತಿ ವಿಖ್ಯಾತಂ ತಾರಕಾರಿಮಥ ಶ್ರುಣು ॥

ಆರು ಮೊಗಗಳ ಸುಬ್ರಹ್ಮಣ್ಯನು ಸರ್ವಾಲಂಕಾರಭೂಷಿತನಾಗಿ ನವಿಲನ್ನೇರಿ ಹೊರಟಿದ್ದಾನೆ. ಬಲಗಡೆ ವಿಜಯಾ, ಎಡಗಡೆ ಜಯಾ ಎಂಬುವಳು ಇದ್ದಾರೆ. ಹನ್ನೆರಡು ಕರಗಳಲ್ಲಿ ಶಕ್ತ್ಯಾಯುಧ, ಬಾಣ, ಕತ್ತಿ, ಚಕ್ರ, ಪಾಶ, ಅಭಯಮುದ್ರೆ, ಹುಂಜ, ಬಿಲ್ಲು, ಗುರಾಣಿ, ಶಂಖ, ನೇಗಿಲು ಮತ್ತು ವರದ ಮುದ್ರೆಗಳನ್ನು ಹಿಡಿದಿದ್ದಾನೆ. ಮೈಬಣ್ಣ ಕೆಂಪು.

ಷಣ್ಮುಖಸುಬ್ರಹ್ಮಣ್ಯ

ಷಣ್ಮುಖಸುಬ್ರಹ್ಮಣ್ಯ

5. ವಿಷ್ವಕ್ಸೇನ

ಶ್ಯಾಮವರ್ಣಃ ಚತುರ್ಭುಜೈಸ್ತರ್ಜನೀ ಶಂಖಚಕ್ರಗದಾಂದಧಾನಃ
ಪೀಠಾದಸ್ತಾತ್ಪ್ರಸಾರಿತ ದಕ್ಷಿಣಪಾದಃ ಆಕುಂಚಿತವಾಮಪಾದಃ
ಕಿರೀಟಾದಿ ಸರ್ವಾಲಂಕಾರಭೂಷಿತೋ ವಿಷ್ವಕ್ಸೇನಃ

ನಾಲ್ಕು ಕರಗಳು, ನಿಜಹಸ್ತದ ಬಲಗೈ ಸೂಚಿಮುದ್ರೆಯಲ್ಲಿದೆ. ಎಡಗೈಯಲ್ಲಿ ಗದೆ ಇದೆ. ಪರಹಸ್ತದಲ್ಲಿ ಶಂಖ ಚಕ್ರಗಳಿವೆ. ಪೀಠದ ಮೇಲೆ ಕುಳಿತಿದ್ದಾನೆ. ಎಡಗಾಲನ್ನು ಮಡಚಿ ಬಲಗಾಲನ್ನು ಪೀಠದಿಂದ ಕೆಳಗೆ ಇದೆ. ಸರ್ವಾಲಂಕಾರಭೂಷಿತನಾಗಿದ್ದಾನೆ. ದೇಹವರ್ಣ ಶ್ಯಾಮವರ್ಣ.



ವಿಷ್ವಕ್ಸೇನ

6. ನಂದಿಕೇಶ್ವರ

ಬಿಭ್ರಾಣಂ ಪರಶುಂ ಮೃಗಂ ಕರತಲೈಃ ಧೀರೇ ಪ್ರಣಮಾಂಜಲಿಮ್
ಭಸ್ಮೋದ್ಧೂಳಿತ ಪಾಂಡರಂ ಶಶಿಕಳಾಗಂಗಾಕಪರ್ದೋಜ್ವಲಮ್ ॥

ಪರ್ಯಾಯ ತ್ರಿಪುರಾಂತಕೇ ಜೈಷ್ಠಾಗಣೇಂದ್ರಾವೃತಮ್ ।
ಬ್ರಹ್ಮೇಂದ್ರಾಚ್ಯುತ ವಂದಿತಾಂಘ್ರಿಕಮಲಂ ಶ್ರೀನಂದಿಕೇಶಂ ಭಜೇ ॥

ನಾಲ್ಕು ಕರಗಳು. ನಿಜಹಸ್ತಗಳು ಅಂಜಲೀ ಮುದ್ರೆಯಲ್ಲಿದೆ. ಪರಹಸ್ತಗಳಲ್ಲಿ ಪರಶು ಮತ್ತು ಜಿಂಕೆ ಇದೆ. ಭಸ್ಮಭೂಷಿತವಾದ ಶರೀರ, ಜಟೆಯಲ್ಲಿ ಚಂದ್ರರೇಖೆ ಹಾಗೂ ಗಂಗೆಯನ್ನು ಹೊಂದಿದ್ದಾನೆ. ದೇಹದ ವರ್ಣ ಶ್ವೇತವರ್ಣವಾಗಿದೆ.



7. ಚಂಡಿಕೇಶ

ಕಲೌತು ದ್ವಿಭುಜಮ್ ಜ್ಞೇಯಂ ಜಟಾಮುಕುಟ ಮಂಡಿತಮ್
ಜಟಾಮುಕುಟ ಸಂಯುಕ್ತಂ ಕೇಶಂ ಬಂಧರಹಿತೋಪಿವಾ ॥

ಕೃಷ್ಣಾಭಂ ವಾಥ ರಕ್ತಾಭಂ ಸೌಮ್ಯನೇತ್ರಾನವಾನ್ವಿತಮ್
ಅಭಂಗಂ ಸಮಭಂಗಂ ವಾ ಸಮಪಾದ ಸ್ಥಾನಕಂ ತುವಾ ॥

ಖ್ಯಾತಂ ವೀರಚಂಡನಾಮ್ನಾತು ಸ್ಥಾನಕಂ ವಾಸನಂ ವಾ
ಆಸನಂ ಚೇತ್ತು ವಾಮಾಂಘ್ರೀಂ ಶಾಯಯೇದನ್ಯತ್ ಲಂಬಯೇತ್ ॥

ಟಂಕಹೀನಂ ತುವಾ ಪುಷ್ಪ ಮಾಲಯಾಂಜಲಿ ಸಂಯುತಮ್
ಈಶ ದಕ್ಷಿಣ ಪಾರ್ಶ್ವೇತು ಪ್ರಭೀತಾನನ ಮೇವಹಿ ॥



ಕಲಿಯುಗದಲ್ಲಿ ಚಂಡಿಕೇಶನು ವೀರಚಂಡೇಶನೆಂಬ ಹೆಸರನ್ನು ಹೊಂದಿದ್ದಾನೆ. ಅವನು ಎರಡು ಕರಗಳನ್ನು ಹೊಂದಿದ್ದು ಟಂಕವನ್ನು ಹಿಡಿದಿರದಿದ್ದರೆ, ಪುಷ್ಪಮಾಲೆಯನ್ನು ಅಂಜಲೀ ಮುದ್ರೆಯಲ್ಲಿ ಹಿಡಿದಿರಬೇಕು. ಜಟಾಮುಕುಟ ಅಥವಾ ಕೇಶಬಂಧವು ಇರುತ್ತದೆ. ಕಪ್ಪು ಅಥವಾ ಕೆಂಪುವರ್ಣದವನು ಆಗಿದ್ದಾನೆ. ಸೌಮ್ಯವಾದ ಮುಖ ಹಾಗೂ ನೇತ್ರಗಳು ಇವನದು. ಮೂರ್ತಿಯು ಕುಳಿತಿರುವಂತೆ ಇದ್ದರೆ ಎಡಗಾಲನ್ನು ಪೀಠದ ಮೇಲಿಟ್ಟು ಬಲಗಾಲನ್ನು ಇಳಿಬಿಟ್ಟಿರುವಂತಿರುತ್ತದೆ. ಅಭಂಗ ಅಥವಾ ಸಮಭಂಗದ ರೀತಿಯಲ್ಲಿ ಸ್ಥಾನಕ ಮೂರ್ತಿಯಾಗಿರುತ್ತಾನೆ.

ಈತನು ಶಿವನ ಮಹಾಭಕ್ತನಾಗಿದ್ದು ಶಿವದೇವಾಲಯಗಳಲ್ಲಿ ಈತನಿಗೆ ಪ್ರತ್ಯೇಕವಾದ ಗೂಡು ಇರುವುದು ವಾಡಿಕೆ.

ಅಷ್ಟದಿಕ್ಪಾಲಕರು

1. ಇಂದ್ರ

ವರಂ ವಜ್ರಾಂಕುಶೌ ಚೈವ ಕುಂಡೀಂ ಧತ್ತೇ ಕರೈಸ್ತುಯಃ
ಗಜಾರೂಢಃ ಸಹಸ್ರಾಕ್ಷೇಂದ್ರಃ ಪೂರ್ವದಿಶಾಧಿಪಃ ॥

ನಾಲ್ಕು ಕರಗಳಿವೆ; ನಿಜ ಹಸ್ತಗಳು ವರದ, ಅಭಯ ಮುದ್ರೆಯಲ್ಲಿದ್ದು ಪರಹಸ್ತಗಳಲ್ಲಿ ವಜ್ರಾಯುಧ ಅಂಕುಶಗಳಿವೆ. ಸಹಸ್ರಾಕ್ಷನಾಗಿದ್ದಾನೆ. ಐರಾವತದ ಮೇಲೆ ಕುಳಿತಿರುವ ಈತ ಪೂರ್ವ ದಿಕ್ಕಿನ ಅಧಿಪತಿಯಾಗಿದ್ದಾನೆ.

ಇಂದ್ರ

ಇಂದ್ರ

ಅಗ್ನಿ

2. ಅಗ್ನಿ

ವರದಃ ಶಕ್ತಿಹಸ್ತಶ್ಚ ಸಮೃಣಾಲಕಮಂಡಲುಃ
ಜ್ವಾಲಾಪುಂಜವಿಭೋ ದೇವೋ ಮೇಷಾರೂಢೋ ಹುತಾಶನಃ ||

ನಾಲ್ಕು ಕೈಗಳು; ವರದ ಮುದ್ರೆ, ಶಕ್ತ್ಯಾಯುಧ, ಕಮಂಡಲು, ತಾವರೆಗಳಿವೆ. ಮೇಷಾರೂಢನಾಗಿದ್ದಾನೆ. ಜ್ವಾಲೆಗಳ ಗುಂಪಾಗಿ ಕಾಣಿಸಿಕೊಂಡಿದ್ದಾನೆ. ಆಗ್ನೇಯ ದಿಕ್ಕಿನ ಅಧಿಪತಿಯಾಗಿದ್ದಾನೆ.

ಚಿತ್ರದಲ್ಲಿ ಕಮಂಡಲು, ತಾವರೆಗಳ ಬದಲು ಅಭಯ, ವರದ ಮುದ್ರೆಯನ್ನು ತೋರುತ್ತಿದ್ದಾನೆ.

ಅಗ್ನಿ

3. ಯಮ

ಕರಾಲ ಮಹಿಷಾರೂಢಂ ಕಾಲದಂಡಧರಂ ಪುನಃ
ಶ್ಯಾಮವರ್ಣ ಪಾಶಹಸ್ತಂ ಕೃತಾಂತ ಪ್ರಣಮಾಮ್ಯಹಮ್॥

ನಾಲ್ಕು ಕೈಗಳು; ನಿಜಹಸ್ತಗಳು ವರದ, ಅಭಯ ಮುದ್ರೆಯಲ್ಲಿದ್ದು ಪರಹಸ್ತಗಳು ಕಾಲದಂಡ ಮತ್ತು ಪಾಶವನ್ನು ಧರಿಸಿದೆ. ಈತನ ಮೈಬಣ್ಣ ಶ್ಯಾಮವರ್ಣವಾಗಿದೆ. ಕೋಣದ ಮೇಲೆ ಕುಳಿತಿದ್ದಾನೆ. ಯಮನು ದಕ್ಷಿಣ ದಿಕ್ಕಿನ ಅಧಿಪತಿಯಾಗಿದ್ದಾನೆ.

ಯಮ

ಯಮ

4. ನಿರ್ಋತಿ

ಖಡ್ಗ ಚರ್ಮಧರೋ ನೀಲೋ ನಿರ್ಋತಿರ್ನರವಾಹನಃ
ಊರ್ಧ್ವ ಕೇಶೋ ವಿರೂಪಾಕ್ಷಃ ಕರಾಲಃ ಕಾಲಿಕಾಪ್ರಿಯಃ ॥

ನಾಲ್ಕು ಕೈಗಳು; ಎರಡು ಕೈಗಳು ಅಭಯ, ವರದ ಮುದ್ರೆಗಳಲ್ಲಿವೆ ಉಳಿದ ಕೈಗಳಲ್ಲಿ, ಖಡ್ಗ ಗುರಾಣಿಗಳಿವೆ. ಈತನಿಗೆ ಮನುಷ್ಯನೇ ವಾಹನವಾಗಿದ್ದಾನೆ. ಊರ್ಧ್ವಕೇಶನಾಗಿದ್ದು ದೇಹವು ನೀಲವರ್ಣವಾಗಿದೆ. ನಿರ್ಋತಿಯ ಹೆಂಡತಿ ಕಾಳಿಕಾದೇವಿಯಾಗಿದ್ದಾಳೆ. ಇವನು ನೈಋತ್ಯ ದಿಕ್ಕಿನ ಅಧಿಪತಿಯಾಗಿದ್ದಾನೆ.

ನಿರ್ಋತಿ

ನಿರ್ಋತಿ

5. ವರುಣ

ನಾಗಪಾಶಧರೋ ರಕ್ತ ಭೂಷಣಃ ಪದ್ಮಿನೀ ಪ್ರಿಯಃ
ವರುಣೋಂಬುಪತಿಃ ಸ್ವರ್ಣವರ್ಣೆ ಮಕರವಾಹನಃ ||

ನಾಗಪಾಶವನ್ನು ಹಿಡಿದಿದ್ದಾನೆ, ಕೆಂಪು ವಸ್ತ್ರವನ್ನು ಧರಿಸಿದ್ದಾನೆ. ಮೊಸಳೆ ವಾಹನವಾಗಿದೆ. ಜಲಕ್ಕೂ ಅಧಿದೇವತೆಯಾಗಿದ್ದಾನೆ. ಬಂಗಾರದ ಮೈಬಣ್ಣವುಳ್ಳವನು. ವರುಣನ ಪತ್ನಿ ಪದ್ಮಿನಿ. ಈತ ಪಶ್ಚಿಮ ದಿಕ್ಕಿನ ಅಧಿಪತಿ.

ವರುಣ

ವರುಣ

6. ವಾಯು

ಪ್ರಾಣ ಬಂಧುರ್ಹಿಜಗತೋವಾಯುಃ ಕೃಷ್ಣಾಮೃಗಾಸನಃ
ಹೇಮದಂಡಧ್ವಜಃ ಶ್ಯಾಮೋವರ್ಣತೋ ಮೋಹಿನಿ ಪ್ರಿಯಃ ||

ಜಗತ್ತಿನ ಪ್ರಾಣಬಂಧು. ಕೃಷ್ಣಮೃಗ ವಾಹನವಾಗಿದೆ. ಕರಗಳಲ್ಲಿ ಬಂಗಾರದ ದಂಡ ಹಾಗೂ ಧ್ವಜ ಇದೆ. ಶ್ಯಾಮವರ್ಣನು. ಮಡದಿ ಮೋಹಿನಿ. ಈತ ವಾಯವ್ಯ ದಿಕ್ಕಿನ ಅಧಿಪತಿ.



ವಾಯು

ವಾಯು

7. ಕುಬೇರ

ಅಶ್ವಾರೂಢಃ ಕುಂತಪಾಣಿಃ ಕುಬೇರಶ್ಚಿತ್ರಿಣೀಪ್ರಿಯಃ
ನಿಧೀಶ್ವರಃ ಸ್ವರ್ಣವರ್ಣೋಧನದೋ ರೂಪನ್ ಪ್ರಭುಃ ॥

ಅಶ್ವಾರೂಢನಾಗಿದ್ದಾನೆ. ಕುಂತವನ್ನು ಹಿಡಿದಿದ್ದಾನೆ. ಬಂಗಾರ ವರ್ಣದವನು. ಹೆಂಡತಿ ಚಿತ್ರಿಣಿ. ಧನಾಧಿಪತಿಯೂ ಹೌದು. ಈತ ಉತ್ತರ ದಿಕ್ಕಿನ ಅಧಿಪತಿ.

ಕುಬೇರ

ಕುಬೇರ

8. ಈಶಾನ

ವರದಂ ತ್ರಿಶೂಲಂ ಚ ನಾಗೇಂದ್ರಂ ಬೀಜಪೂರಕಮ್
ವೃಷಾರೂಢಶ್ಚ ಕರ್ತವ್ಯ ಈಶಾನೋ ಧವಳ ದ್ಯುತಿಃ ॥

ನಾಲ್ಕು ಕರಗಳು; ವರದ, ತ್ರಿಶೂಲ, ನಾಗೇಂದ್ರ, ದಾಳಿಂಬೆಗಳಿವೆ. ವೃಷಭವನ್ನು ವಾಹನವಾಗಿ ಪಡೆದಿದ್ದಾನೆ. ಈತನ ಹೆಂಡತಿ ಗೌರಿ. ಈತ ಈಶಾನ್ಯ ದಿಕ್ಕಿಗೆ ಅಧಿಪತಿ.

ಚಿತ್ರದಲ್ಲಿ ದಾಳಿಂಬೆಯ ಬದಲು ಅಭಯಹಸ್ತವನ್ನು ತೋರಿಸಿದ್ದಾರೆ. ಬಲಗೈ ಕರ ಅಭಯದಲ್ಲಿದೆ. ಎಡಗೈಯಲ್ಲಿ ವರದವಿದೆ.

ಭಟ್ಟಭಾಸ್ಕರೀಯ, ಮಯೂಖಸ್ಮೃತಿ, ಸಿಂಗಾಭಟ್ಟೀಯ ಹಾಗು ಶೈವಾಗಮದಿಂದ ಈ ಶ್ಲೋಕಗಳನ್ನು ಆಯ್ದುಕೊಳ್ಳಲಾಗಿದೆ.

ಈಶಾನ

ಈಶಾನ


ವಾಯುವ್ಯ
ಉತ್ತರ
ಈಶಾನ್ಯ
ಪಶ್ಚಿಮ
ಪೂರ್ವ
ನೈಋತ್ಯ
ದಕ್ಷಿಣ
ಆಗ್ನೇಯ